ಏಪ್ರಿಲ್ 19, 2026
41ನೇ ವರ್ಷದಲ್ಲಿ
http//policenews.news Police News
police_news
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ


# ಪೊಲೀಸ್ ನ್ಯೂಸ್

2033
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹ 20/-

## ಅನಿಲ್‌ನನ್ನು ‘ಅಕ್ಷತಾ’ ಮಾಡಿದ್ದ ಮಂಗಳಮುಖಿಯರು!

# ಮೈಸೂರಿನಲ್ಲಿ ಬಯಲಾಯ್ತು ಕರಾಳ ದಂಧೆ!








## ಸುಪನಾತಿ ಸುಂದರಿಯ ಕಾಟಕ್ಕೆ ಬಲಿಯಾದ ಯುವಕ!

## ಅಕ್ರಮ ಸಂಬಂಧಕ್ಕೆ ಬಲಿಯಾದ ಮೂಗ ಪತಿ!



## ರಾಜಕೀಯ ಆಸೆಗಾಗಿ ಹೆಂಡತಿಯ ಜೀವವೇ ಬಲಿ!



## ಕೈ ವಿರುದ್ಧ ತಿರುಗಿ ಬಿದ್ರಾ ಅಲ್ಪಸಂಖ್ಯಾತರು?

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

## ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......



### ಲಯನ್ ಎಂ. ಮಲ್ಲಿಕಾರ್ಜುನಯ್ಯ
ಸಂಸ್ಥಾಪಕ ಸಂಪಾದಕರು

ಜನನ : 29-03-1954 ಮರಣ : 22-11-2005

**ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು**

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

# ಮಗಳಿಗಾಗಿ ರಣಚಂಡಿಯಾದ ತಾಯಿ: ನ್ಯಾಯದ ಅರ್ಥವನ್ನೇ ಪ್ರಶ್ನಿಸಿದ ಘಟನೆ

ನ್ಯಾಯ ಎನ್ನುವುದು ಕೇವಲ ಕಾನೂನು ಪುಸ್ತಕಗಳಲ್ಲಿ ಸೀಮಿತವಾಗಿರುವ ಪದವಲ್ಲ; ಅದು ಸಮಾಜದ ನಂಬಿಕೆ, ಭದ್ರತೆ ಮತ್ತು ಮಾನವೀಯತೆಯ ಪ್ರತಿಬಿಂಬವಾಗಿದೆ. ಆದರೆ ಅತ್ಯಾಚಾರಂಥ ಕ್ರೂರ ಅಪರಾಧಗಳ ವಿಚಾರದಲ್ಲಿ ನ್ಯಾಯ ತಡವಾಗುವುದು ಅಥವಾ ತಪ್ಪಿತಸ್ಥರು ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದು ಜನರಲ್ಲಿ ಆಕ್ರೋಶ ಮತ್ತು ನಿರಾಶೆಯನ್ನು ಹುಟ್ಟಿಸುತ್ತದೆ. ನಮ್ಮ ದೇಶದಲ್ಲಿಯೂ ಇದೇ ಪರಿಸ್ಥಿತಿ ಕಂಡುಬರುತ್ತಿದ್ದು, ದಿನನಿತ್ಯವೂ ಮಹಿಳೆಯರು, ಬಾಲಕಿಯರು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಘಟನೆಗಳು ವರದಿಯಾಗುತ್ತಿವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಪ್ರಕಾರ ಪ್ರತಿದಿನವೂ ದಶಕಗಟ್ಟಲೆ ಅತ್ಯಾಚಾರ ಪ್ರಕರಣಗಳು ದಾಖಲಾಗುತ್ತಿವೆ. ಆದರೆ ಇನ್ನೂ ಅನೇಕ ಪ್ರಕರಣಗಳು ಸಮಾಜದ ಒತ್ತಡ, ಭಯ ಮತ್ತು ಮಾನಹಾನಿಯ ಭೀತಿಯಿಂದ ಹೊರಗೆ ಬರುವುದೇ ಇಲ್ಲ. ಈ ಹಿನ್ನೆಲೆದಲ್ಲಿ ಬ್ರೆಜಿಲ್‌ನಲ್ಲಿ ನಡೆದ ಒಂದು ಘಟನೆ ಮತ್ತು ಅದರ ತೀರ್ಪು ಜಗತ್ತಿನ ಗಮನ ಸೆಳೆದಿದ್ದು, ನ್ಯಾಯದ ಅರ್ಥದ ಬಗ್ಗೆ ಹೊಸ ಚರ್ಚೆಗೆ ಕಾರಣವಾಗಿದೆ.



2025ರ ಮಾರ್ಚ್‌ನಲ್ಲಿ ಬ್ರೆಜಿಲ್‌ನ ಬೆಲೊ ಹೊರಿಜಾಂಟೆ ನಗರದಲ್ಲಿ ನಡೆದ ಈ ಘಟನೆ ತಾಯಿ ಮಗಳ ಬಾಂಧವ್ಯ ಎಷ್ಟು ಗಾಢವಾಗಿರುತ್ತದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಎರಿಕಾ ಪೆರೇರಾ ಡ ಸಿಲ್ವೇರಾ ವಿಸೆಂಟೆ ಎಂಬ ಮಹಿಳೆ ತನ್ನ 11 ವರ್ಷದ ಮಗಳ ಕಿರುಚಾಟವನ್ನು ಕೇಳಿ ಕೋಣೆಗೆ ಓಡಿಬಂದಾಗ, ತನ್ನ ಗೆಳೆಯನೇ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗುತ್ತಿರುವ ದೃಶ್ಯವನ್ನು ಕಂಡಳು. ಇದಕ್ಕೂ ಮೊದಲು ಆ ವ್ಯಕ್ತಿ ಬಾಲಕಿಗೆ ಅಸಭ್ಯ ಸಂದೇಶಗಳನ್ನು ಕಳುಹಿಸಿದ್ದಾನೆ ಎಂಬುದನ್ನು ಆಕೆ ಗಮನಿಸಿದ್ದಳು. ಆ ಕ್ಷಣದಲ್ಲಿ ತಾಯಿಯ ಮನಸ್ಸಿನಲ್ಲಿ ಉಂಟಾದ ಭಯ, ಆಕ್ರೋಶ ಮತ್ತು ಮಗಳನ್ನು ರಕ್ಷಿಸಬೇಕೆಂಬ ತೀವ್ರ ಸಂಕಲ್ಪ ಎಲ್ಲವು ವು ಒಂದೇ ನಿರ್ಧಾರಕ್ಕೆ ದಾರಿ ಮಾಡಿಕೊಟ್ಟವು. ತನ್ನ ಮಗಳ ಬದುಕು ಮತ್ತು ಗೌರವವನ್ನು ಉಳಿಸಲು ಆಕೆ ಆತನಿಗೆ ಅಮಲು ಪದಾರ್ಥ ನೀಡಿ, ನಂತರ ಹಲ್ಲೆ ನಡೆಸಿ ಕೊಲೆಗೈದಳು.

ಘಟನೆಯ ನಂತರ ಆಕೆ ಶವವನ್ನು ನಿರ್ಜನ ಪ್ರದೇಶದಲ್ಲಿ ಸುಟ್ಟು ಹಾಕಿ, ಅದೇ ರಾತ್ರಿ ಪೊಲೀಸರಿಗೆ ಶರಣಾದಳು. ತನ್ನ ಕೃತ್ಯವನ್ನು ಮುಚ್ಚಿಡಲು ಪ್ರಯತ್ನಿಸದೆ, ನೇರವಾಗಿ ಒಪ್ಪಿಕೊಂಡಳು. ನಂತರ ಪ್ರಕರಣ ನ್ಯಾಯಾಲಯಕ್ಕೆ ಹೋಗಿತು. ಸರ್ಕಾರಿ ವಕೀಲರು ಇದನ್ನು ಪೂರ್ವಯೋಜಿತ ಕೊಲೆ ಎಂದು ವಾದಿಸಿದರು. ಆದರೆ ಪ್ರತಿವಾದಿಗಳು ತಾಯಿ ತನ್ನ ಮಗಳ ಕಾನೂನು ಬದ್ಧ ರಕ್ಷಣೆಗೆ ಈ ಕ್ರಮ ಕೈಗೊಂಡಿದ್ದಾಳೆ ಎಂದು ವಾದಿಸಿದರು. ದೀರ್ಘ ವಿಚಾರಣೆಯ ನಂತರ 2026ರ ಮಾರ್ಚ್ 24ರಂದು ನ್ಯಾಯಾಲಯ ಎರಿಕಾಳನ್ನು ಎಲ್ಲಾ ಆರೋಪಗಳಿಂದ ಖುಲಾಸೆಗೊಳಿಸಿತು. ಈ

☞ 3



ಸಂಪಾದಕ
ಎಂ. ರಾಹುಲ್

# ದರ್ಪದ ಖಾಕಿಗೆ ನ್ಯಾಯದ ಕೊರೆತ: ಸಾತಂಕುಲಂ ತೀರ್ಪಿನ ಸಂದೇಶ

ನ್ಯಾಯ ಎಂಬುದು ಕೇವಲ ಕಾನೂನು ಪುಸ್ತಕಗಳಲ್ಲಿ ಬರೆದಿರುವ ನಿಯಮಗಳ ಸಮೂಹವಲ್ಲ; ಅದು ಒಂದು ಸಮಾಜದ ಆತ್ಮ. ಸಮಾಜದ ಪ್ರತಿಯೊಬ್ಬ ನಾಗರಿಕನು ಕಾನೂನಿನ ಮೇಲೆ ಇಡುವ ನಂಬಿಕೆಯೇ ಆ ಸಮಾಜದ ಸ್ಥಿರತೆಯನ್ನು ನಿರ್ಧರಿಸುತ್ತದೆ. ಕಾನೂನು ಎಲ್ಲರಿಗೂ ಸಮಾನ ಎಂಬ ನಂಬಿಕೆ ಜೀವಂತವಾಗಿರುವವರೆಗೆ ಮಾತ್ರ ಜನರು ವ್ಯವಸ್ಥೆಯೊಳಗೆ ಸುರಕ್ಷಿತವಾಗಿ ಬದುಕಲು ಸಾಧ್ಯ. ಆದರೆ ಈ ನಂಬಿಕೆಯನ್ನು ಕಾಪಾಡಬೇಕಾದವರೇ ಅದನ್ನು ಧ್ವಂಸ ಮಾಡುವ ಸಂದರ್ಭಗಳು ಎದುರಾದಾಗ, ಅದು ಕೇವಲ ಒಂದು ಅಪರಾಧದ ಕಥೆಯಾಗಿ ಉಳಿಯುವುದಿಲ್ಲ; ಅದು ಸಂಪೂರ್ಣ ವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಕುಸಿತಗೊಳಿಸುವ ಘಟನೆಯಾಗಿ ಪರಿಣಮಿಸುತ್ತದೆ. ತಮಿಳುನಾಡಿನ ಸಾತಂಕುಲಂ ಲಾಕಪ್ ಮರಣ ಪ್ರಕರಣ ಮತ್ತು ಅದರ ತೀರ್ಪು, ಇದೇ ರೀತಿಯ ಗಂಭೀರ ಸನ್ನಿವೇಶದಲ್ಲಿ ನ್ಯಾಯದ ಮಹತ್ವವನ್ನು ಮರುಪರಿಗಣಿಸಲು ಒತ್ತಾಯಿಸಿದ ಒಂದು ಪ್ರಮುಖ ಅಧ್ಯಾಯವಾಗಿದೆ.

2020ರಲ್ಲಿ ದೇಶವೇ ಕೊರೋನಾ ಮಹಾಮಾರಿಯ ಸಂಕಷ್ಟದಲ್ಲಿ ಮುಳುಗಿತ್ತು. ಬದುಕು ಸಾಗಿಸಲು ಹೋರಾಡುತ್ತಿದ್ದ ಸಾಮಾನ್ಯ ಜನರಿಗೆ ಲಾಕ್‌ಡೌನ್ ನಿಯಮಗಳು ಹೆಚ್ಚುವರಿ ಒತ್ತಡವನ್ನು ತಂದಿದ್ದವು. ಈ ಪರಿಸ್ಥಿತಿಯಲ್ಲಿ ಸಾತಂಕುಲಂ ಪಟ್ಟಣದ ಜೈರಾಜ್ ಮತ್ತು ಅವರ ಪುತ್ರ ಬೆನಿಕ್ ತಮ್ಮ ಸಣ್ಣ ಅಂಗಡಿಯ ಮೂಲಕ ಬದುಕನ್ನು ನಡೆಸುತ್ತಿದ್ದರು. ನಿಯಮ ಉಲ್ಲಂಘನೆ ಆರೋಪದಡಿ ಅವರನ್ನು ಪೊಲೀಸರು ಬಂಧಿಸಿದರು. ಆದರೆ ಬಂಧನವೇ ಅಲ್ಲ, ಅದರ ನಂತರ ನಡೆದ ಘಟನೆಗಳೇ ದೇಶವನ್ನೇ ಕಳವಳಗೊಳಿಸಿತು. ಠಾಣೆಯೊಳಗೆ ನಡೆದ ಅಮಾನವೀಯ ಹಿಂಸೆ, ಮಾನವೀಯತೆಯ ಮಿತಿಗಳನ್ನು ಮೀರಿ ನಡೆದ ಕ್ರೌರ್ಯ, ಕೊನೆಗೆ ಇಬ್ಬರ ಸಾವಿಗೆ ಕಾರಣವಾಯಿತು. ಈ ಘಟನೆ ಕೇವಲ ಒಂದು ಕುಟುಂಬದ ಬದುಕನ್ನು ಹಾಳುಮಾಡಲಿಲ್ಲ; ಅದು ಪೊಲೀಸ್ ವ್ಯವಸ್ಥೆಯ ಮೇಲಿನ ಜನರ ನಂಬಿಕೆಗೆ ದೊಡ್ಡ ಹೊಡೆತ ನೀಡಿತು.

ಪೊಲೀಸರ ಪಾತ್ರ ಕಾನೂನು ಜಾರಿಗೆ ತರುವುದು. ಆದರೆ ಕಾನೂನಿನ ಜಾರಿಗೆ ಮಾನವೀಯತೆ ಅವಿಭಾಜ್ಯ ಅಂಶವಾಗಿರಬೇಕು. ಅಧಿಕಾರವು ಜವಾಬ್ದಾರಿಯೊಂದಿಗೆ ಬಂದಾಗ ಮಾತ್ರ ಅದು ನ್ಯಾಯವಾಗುತ್ತದೆ; ಇಲ್ಲದಿದ್ದರೆ ಅದು ದರ್ಪವಾಗಿ ಮಾರ್ಪಡುತ್ತದೆ. ಸಾತಂಕುಲಂ ಪ್ರಕರಣದಲ್ಲಿ ನಾವು ಕಂಡದ್ದು ಇದೇ ದರ್ಪದ ಭೀಕರ ರೂಪ. ಬಂಧಿತರ ಮೇಲಿನ ಹಿಂಸೆ, ಅವರ ಮಾನವ ಹಕ್ಕುಗಳ ಉಲ್ಲಂಘನೆ, ಮತ್ತು ನಂತರದ ಸಾಕ್ಷ್ಯ ಮರೆಮಾಚುವ ಪ್ರಯತ್ನ ಎಲ್ಲವು ಸೇರಿ ಇದು ಕೇವಲ ವ್ಯಕ್ತಿಗತ ತಪ್ಪಲ್ಲ, ವ್ಯವಸ್ಥೆಯಲ್ಲಿನ ಆಳವಾದ ದೋಷವನ್ನೇ ಬಯಲಿಗೆಳೆದವು.

ಈ ಪ್ರಕರಣದ ತನಿಖೆ ಒಂದು ಮಹತ್ವದ ಹಂತವಾಗಿತ್ತು. ಸಿಬಿಐ ನಡೆಸಿದ ಸುದೀರ್ಘ ತನಿಖೆಯಲ್ಲಿ ಸಾಕ್ಷ್ಯಾಧಾರಗಳ ಸಂಗ್ರಹ, ಸಾಕ್ಷಿಗಳ ವಿಚಾರಣೆ, ಮತ್ತು ವೈಜ್ಞಾನಿಕ ವರದಿಗಳ ವಿಶ್ಲೇಷಣೆ ಎಲ್ಲವು ಸೇರಿ ಒಂದು ಬಲವಾದ ಪ್ರಕರಣವನ್ನು ನಿರ್ಮಿಸಿತು. ಶವಪರೀಕ್ಷೆಯ ವರದಿ ವಿಶೇಷ ಮಹತ್ವ ಪಡೆದುಕೊಂಡಿತು, ಏಕೆಂದರೆ ಅದು ಸಾವಿನ ಕಾರಣವನ್ನು ಸ್ಪಷ್ಟಪಡಿಸಿತು. ಹೊಡೆತಗಳಿಂದ ಉಂಟಾದ ಗಾಯಗಳೇ ಸಾವಿಗೆ ಕಾರಣವೆಂದು ದೃಢಪಟ್ಟಾಗ, ಇದು ಕೇವಲ ಅನುಮಾನಗಳ ಮಟ್ಟದಲ್ಲಿರದೆ, ನಿಖರ ಸತ್ಯವಾಗಿ ನ್ಯಾಯಾಲಯದ ಮುಂದೆ ನಿಂತಿತು.

ನ್ಯಾಯಾಲಯದ ವಿಚಾರಣೆಯು ಕೇವಲ ಕಾನೂನು ಪ್ರಕ್ರಿಯೆಯಾಗಿ ನಡೆದಿಲ್ಲ; ಅದು ಒಂದು ಮಾನವೀಯ ಅನುಭವವಾಗಿತ್ತು. ಜೈರಾಜ್ ಅವರ ಪತ್ನಿ ಶೆಲ್ವರಾಣಿ ಅವರ ಮನವಿ, ಅವರ ಕಣ್ಣೀರು, ಮತ್ತು ಅವರ ನೋವು ಎಲ್ಲವು ನ್ಯಾಯಾಲಯದ ವಾತಾವರಣವನ್ನು ಮೌನಗೊಳಿಸಿತು. ಆ ಕ್ಷಣದಲ್ಲಿ ನ್ಯಾಯಾಲಯ ಕೇವಲ ಕಾನೂನು ಪುಸ್ತಕಗಳನ್ನು ನೋಡಲಿಲ್ಲ; ಅದು ಮಾನವೀಯತೆ ಮತ್ತು ನ್ಯಾಯದ ಆತ್ಮವನ್ನು ಅನುಭವಿಸಿತು. ಇದೇ ಒಂದು ತೀರ್ಪಿನ ನಿಜವಾದ ಶಕ್ತಿ.

ಈ ಪ್ರಕರಣದ ಪ್ರಮುಖ ಅಂಶವೆಂದರೆ ಅಪರಾಧಿಗಳೇ ಕಾನೂನು ಕಾಪಾಡುವವರು ಎಂಬುದು. ಕಾನೂನು ರಕ್ಷಕರೇ ಅದನ್ನು ಉಲ್ಲಂಘಿಸಿದಾಗ, ಅದು ದ್ವಿಗುಣ ಅಪರಾಧವಾಗುತ್ತದೆ. ಈ ಹಿನ್ನೆಲೆಯಲ್ಲೇ ನ್ಯಾಯಾಲಯ ಕಠಿಣ ಶಿಕ್ಷೆಯನ್ನು ವಿಧಿಸಿತು. ಇದು ಕೇವಲ ಶಿಕ್ಷೆಯಾಗಿ ಮಾತ್ರ ಉಳಿಯುವುದಿಲ್ಲ; ಇದು ಒಂದು ಸ್ಪಷ್ಟ ಸಂದೇಶ ಅಧಿಕಾರ ದುರುಪಯೋಗವನ್ನು ಯಾವುದೇ ಪರಿಸ್ಥಿತಿಯಲ್ಲೂ ಸಹಿಸಲಾಗುವುದಿಲ್ಲ.

ಈ ತೀರ್ಪು ಸಾಮಾನ್ಯ ನಾಗರಿಕರಿಗೆ ಒಂದು ದೊಡ್ಡ ಭರವಸೆ ನೀಡಿದೆ. ನ್ಯಾಯ ಸಿಗುತ್ತದೆ ಎಂಬ ನಂಬಿಕೆ ಕುಸಿದಾಗ, ಸಮಾಜ ಅಸ್ಥಿರವಾಗುತ್ತದೆ. ಆದರೆ ಇಂತಹ ತೀರ್ಪುಗಳು ಆ ನಂಬಿಕೆಯನ್ನು ಪುನಃ ಸ್ಥಾಪಿಸುತ್ತವೆ. ಹುದ್ದೆ, ಹಣಬಲ, ಪ್ರಭಾವ ಚ್ಚ್ಯುವು ನ್ಯಾಯದ ಮುಂದೆ ಅಸಹಾಯಕರಾಗಬೇಕು ಎಂಬ ತತ್ವವನ್ನು ಇದು ಮತ್ತೊಮ್ಮೆ ದೃಢಪಡಿಸಿದೆ.

ಇದಲ್ಲದೆ, ಅಪರಾಧಿಗಳಿಂದಲೇ ಪರಿಹಾರ ಹಣ ಪಾವತಿಸುವಂತೆ ಮಾಡಿದ ಆದೇಶವು ನ್ಯಾಯದ ಮತ್ತೊಂದು ಆಯಾಮವನ್ನು ತೋರಿಸುತ್ತದೆ. ಇದು ಕೇವಲ ಶಿಕ್ಷೆಯಲ್ಲ; ಅದು ಜವಾಬ್ದಾರಿಯ ಅರಿವು ಮೂಡಿಸುವ ಕ್ರಮವಾಗಿದೆ. ಅಪರಾಧದ ಪರಿಣಾಮವನ್ನು ಅನುಭವಿಸುವಂತೆ ಮಾಡುವ ಈ ವಿಧಾನ, ಭವಿಷ್ಯದಲ್ಲಿ ಇಂತಹ ಘಟನೆಗಳನ್ನು ತಡೆಯಲು ಸಹಾಯಕವಾಗಬಹುದು.



ಆದರೆ ಈ ಘಟನೆ ನಮ್ಮ ಸಮಾಜದ ಇನ್ನೊಂದು ಕಹಿ ಸತ್ಯವನ್ನೂ ಬಯಲಿಗೆ ತರುತ್ತದೆ ಭ್ರಷ್ಟಾಚಾರ ಮತ್ತು ವ್ಯವಸ್ಥೆಯ ದೌರ್ಬಲ್ಯ. ನಾವು ಪ್ರತಿದಿನ ಎದುರಿಸುವ ಸಣ್ಣಸಣ್ಣ ಅಪ್ರಾಮಾಣಿಕತೆಗಳು, ದೊಡ್ಡ ಮಟ್ಟದ ದುರಾಚಾರಗಳಿಗೆ ದಾರಿ ಮಾಡಿಕೊಡುತ್ತವೆ. ನಾವು ಸ್ವತಃ ನಿಯಮಗಳನ್ನು ಪಾಲಿಸದೆ, ವ್ಯವಸ್ಥೆಯಿಂದ ಮಾತ್ರ ನೈತಿಕತೆಯನ್ನು ನಿರೀಕ್ಷಿಸುವುದು ವ್ಯರ್ಥ. ಸಮಾಜದಲ್ಲಿ ನೈತಿಕ ಮೌಲ್ಯಗಳು ಬಲವಾಗಿದಾಗ ಮಾತ್ರ ವ್ಯವಸ್ಥೆಯಲ್ಲಿಯೂ ಬದಲಾವಣೆ ಸಾಧ್ಯ.

ಇಂದಿನ ಡಿಜಿಟಲ್ ಯುಗದಲ್ಲಿ ಯಾವುದೇ ಘಟನೆ ಮರೆಮಾಚುವುದು ಕಷ್ಟ. ಸಾಮಾಜಿಕ ಜಾಲತಾಣಗಳು ಸತ್ಯವನ್ನು ವೇಗವಾಗಿ ಹರಡುತ್ತವೆ. ಇದು ಒಂದು ರೀತಿಯಲ್ಲಿ ನಿಯಂತ್ರಣದ ಸಾಧನವಾಗಿದೆಯಾದರೂ, ನಿಜವಾದ ಬದಲಾವಣೆ ಮನಸ್ಸಿನೊಳಗೆ ನಡೆಯಬೇಕು. ಪೊಲೀಸ್ ಇಲಾಖೆಯಲ್ಲಿ ತರಬೇತಿ, ಮಾನವೀಯತೆ, ಮತ್ತು ಕಾನೂನು ಅರಿವು ಹೆಚ್ಚಿಸುವ ಮೂಲಕವೇ ಇಂತಹ ಘಟನೆಗಳನ್ನು ತಡೆಯಬಹುದು.

ಈ ಪ್ರಕರಣದ ತೀರ್ಪು ಮುಂದಿನ ಹಂತದಲ್ಲಿ ಮೇಲ್ಮನವಿ ನ್ಯಾಯಾಲಯಗಳಲ್ಲಿ ಪರಿಶೀಲನೆಗೆ ಒಳಪಡುವುದು ಸಹಜ. ಆದರೆ ಈ ಪ್ರಕರಣದಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳ ಬಲವನ್ನು ಗಮನಿಸಿದರೆ, ತೀರ್ಪು ಸ್ಥಿರವಾಗುವ ಸಾಧ್ಯತೆ ಹೆಚ್ಚು. ಅಂತಿಮವಾಗಿ ಕ್ಷಮಾದಾನದ ಪ್ರಕ್ರಿಯೆಗಳು ಉಳಿದರೂ, ನ್ಯಾಯದ ಮೂಲ ತತ್ವ ಅಲುಗಾಡುವುದಿಲ್ಲ ಎಂಬ ವಿಶ್ವಾಸ ಇದೆ.

ಈ ಸಂಪೂರ್ಣ ಪ್ರಕರಣ ನಮಗೆ ಒಂದು ಮಹತ್ವದ ಪಾಠವನ್ನು ಕಲಿಸುತ್ತದೆ ನ್ಯಾಯ ತಡವಾಗಬಹುದು, ಆದರೆ ಅದು ತಪ್ಪುವುದಿಲ್ಲ. ಇದು ಕೇವಲ ಒಂದು ಪ್ರಕರಣದ ಅಂತ್ಯವಲ್ಲ; ಇದು ಒಂದು ಹೊಸ ಪ್ರಾರಂಭ. ಇದು ಪೊಲೀಸರಿಗೆ ಎಚ್ಚರಿಕೆ, ನಾಗರಿಕರಿಗೆ ಭರವಸೆ, ಮತ್ತು ಸಮಾಜಕ್ಕೆ ನೈತಿಕ ದಿಕ್ಕು ತೋರಿಸುವ ದೀಪವಾಗಿದೆ. ದರ್ಪದ ಮುಂದೆ ನ್ಯಾಯ ಹೇಗೆ ಗೆಲ್ಲುತ್ತದೆ ಎಂಬುದಕ್ಕೆ ಇದು ಶಾಶ್ವತ ಉದಾಹರಣೆ.

ಸಮಾಜದಲ್ಲಿ ನ್ಯಾಯ ಜೀವಂತವಾಗಿರಲು, ಕಾನೂನು ಕೇವಲ ನಿಯಮಗಳ ಸಮೂಹವಾಗಿರಬಾರದು; ಅದು ಮಾನವೀಯತೆಯ ಪ್ರತಿಬಿಂಬವಾಗಿರಬೇಕು. ಸಾತಂಕುಲಂ ಪ್ರಕರಣ ನಮಗೆ ಇದೇ ಸಂದೇಶವನ್ನು ನೀಡುತ್ತದೆ. ನ್ಯಾಯದ ಮಾರ್ಗ ಕಠಿಣವಾಗಬಹುದು, ಆದರೆ ಅದು ಸದಾ ಸತ್ಯದತ್ತವೇ ಕರೆದೊಯ್ಯುತ್ತದೆ. ಈ ತೀರ್ಪು, ನ್ಯಾಯದ ಶಕ್ತಿಯನ್ನು ಮತ್ತೊಮ್ಮೆ ಸಾಬೀತುಪಡಿಸಿದ ಘಟ್ಟವಾಗಿ ಇತಿಹಾಸದಲ್ಲಿ ಉಳಿಯಲಿದೆ.

-ಸಂ.

2 ☞

ತೀರ್ಪು ಹಲವರಿಂದ ಪ್ರಶಂಸೆಗೆ ಪಾತ್ರವಾದರೆ, ಇನ್ನೂ ಕೆಲವರು ಇದನ್ನು ಕಾನೂನು ವ್ಯವಸ್ಥೆಗೆ ಸವಾಲು ಎಸೆದ ನಿರ್ಣಯವೆಂದು ಟೀಕಿಸಿದ್ದಾರೆ.

ಈ ಘಟನೆ ನಮ್ಮ ಮುಂದೆ ಹಲವು ಗಂಭೀರ ಪ್ರಶ್ನೆಗಳನ್ನು ಎತ್ತುತ್ತದೆ. ನ್ಯಾಯ ತಡವಾದರೆ ಜನರು ಸ್ವಯಂ ನ್ಯಾಯದ ಮಾರ್ಗಕ್ಕೆ ಹೋಗಬೇಕಾಗುತ್ತದೆಯೇ? ಸಂತ್ರಸ್ತರಿಗೆ ತಕ್ಷಣದ ರಕ್ಷಣೆಯನ್ನು ಒದಗಿಸಲು ವ್ಯವಸ್ಥೆ ಎಷ್ಟು ಪರಿಣಾಮಕಾರಿ? ಅತ್ಯಾಚಾರ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡುವಲ್ಲಿ ನಾವು ಎಲ್ಲಿ ಹಿಂದುಳಿದಿದ್ದೇವೆ? ಭಾರತದಲ್ಲಿ ಅನೇಕ ಪ್ರಕರಣಗಳಲ್ಲಿ ಸಾಕ್ಷ್ಯಗಳ ಕೊರತೆ, ತನಿಖೆಯ ದೌರ್ಬಲ್ಯ ಮತ್ತು ನ್ಯಾಯಾಂಗದ ವಿಳಂಬದಿಂದ ಆರೋಪಿಗಳು ತಪ್ಪಿಸಿಕೊಳ್ಳುತ್ತಿರುವುದು ನಿಜ. ಇದರಿಂದ ಸಮಾಜದಲ್ಲಿ 'ನ್ಯಾಯ ಸಿಗುವುದಿಲ್ಲ' ಎಂಬ ಭಾವನೆ ಬಲವಾಗುತ್ತಿದೆ.

ಒಂದು ತಾಯಿ ತನ್ನ ಮಗಳಿಗಾಗಿ ಎಷ್ಟು ದೂರ ಹೋಗಬಹುದು ಎಂಬುದಕ್ಕೆ ಈ ಘಟನೆ ಸ್ಪಷ್ಟ ಉದಾಹರಣೆ. ಆದರೆ ಕಾನೂನು ವೈಯಕ್ತಿಕ ಪ್ರತೀಕಾರವನ್ನು ನ್ಯಾಯವಾಗಿ ಪರಿಗಣಿಸಬಹುದೇ ಎಂಬುದು ಚರ್ಚೆಗೆ ಒಳಪಟ್ಟ ವಿಷಯವಾಗಿದೆ. ನ್ಯಾಯವು ಕೇವಲ ಶಿಕ್ಷೆ ನೀಡುವುದಲ್ಲ; ಅದು ಜನರಲ್ಲಿ ಭದ್ರತೆಯ ಭರವಸೆ ಮೂಡಿಸಬೇಕು. ಬ್ರೆಜಿಲ್‌ನ ಈ ತೀರ್ಪು ಮಾನವೀಯತೆಯ ದೃಷ್ಟಿಯಿಂದ ಸಮರ್ಥನೀಯವೆನಿಸಿದರೂ, ಕಾನೂನು ವ್ಯವಸ್ಥೆಯ ದೃಷ್ಟಿಯಿಂದ ಗಂಭೀರ ಚರ್ಚೆಗೆ ಕಾರಣವಾಗಿದೆ. ಸಮಾಜದಲ್ಲಿ ನ್ಯಾಯ ವೇಗವಾಗಿ ಮತ್ತು ನಿಷ್ಪಕ್ಷಪಾತವಾಗಿ ದೊರಕಿದಾಗ ಮಾತ್ರ ಜನರು ಕಾನೂನಿನ ಮೇಲೆ ನಂಬಿಕೆ ಇಡುತ್ತಾರೆ; ಇಲ್ಲವಾದರೆ ಇಂತಹ ಘಟನೆಗಳು ಮರುಕಳಿಸುವ ಅಪಾಯ ಸದಾ ಇರುತ್ತದೆ.

ಇದರ ಜೊತೆಗೆ, ಈ ಪ್ರಕರಣವು ಪೋಷಕರ ಜವಾಬ್ದಾರಿಯ ಮಹತ್ವವನ್ನೂ ಸ್ಪಷ್ಟಪಡಿಸುತ್ತದೆ. ಮಕ್ಕಳ ಮೇಲೆ ನಡೆಯುವ ದೌರ್ಜನ್ಯಗಳನ್ನು ತಡೆಯಲು ಕೇವಲ ಕಾನೂನು ಸಾಕಾಗುವುದಿಲ್ಲ; ಕುಟುಂಬದ ಜಾಗೃತಿ, ಸಮಾಜದ ಬೆಂಬಲ ಮತ್ತು ಶಿಕ್ಷಣವೂ ಸಮಾನವಾಗಿ ಅಗತ್ಯ. ಮಕ್ಕಳಲ್ಲಿ ಭಯವಿಲ್ಲದೆ ತಮ್ಮ ಸಮಸ್ಯೆಗಳನ್ನು ಹಂಚಿಕೊಳ್ಳುವಂತಹ ವಾತಾವರಣ ನಿರ್ಮಾಣವಾಗಬೇಕು. ಶಿಕ್ಷಕರು, ಸಂಬಂಧಿಕರು ಮತ್ತು ಸಮಾಜದ ಪ್ರತಿಯೊಬ್ಬರೂ ಜವಾಬ್ದಾರಿಯುತವಾಗಿ ವರ್ತಿಸಿದಾಗ ಮಾತ್ರ ಇಂತಹ ದುರಂತಗಳನ್ನು ತಡೆಯಲು ಸಾಧ್ಯ. ನ್ಯಾಯವು ಕೇವಲ ನ್ಯಾಯಾಲಯಗಳಲ್ಲಿ ಸೀಮಿತವಾಗದೇ, ಸಮಾಜದ ಪ್ರತಿಯೊಂದು ಹಂತದಲ್ಲೂ ಜೀವಂತವಾಗಿರಬೇಕು ಎಂಬ ಸಂದೇಶವನ್ನು ಈ ಘಟನೆ ನೀಡುತ್ತದೆ.

# ಯುವಕನ ಕಿಡ್ನಾಪ್...ಮಂಗಳಮುಖಿ ವೇಷ ಹಾಕಿಸಿ ಕಲೆಕ್ಷನ್
# ಸೆಕ್ಸ್ ವರ್ಕ್‌ಗೆ ಯೂಸ್... ಕರಾಳ ದಂಧೆ ಮತ್ತೊಂದು ಮುಖ ಬಯಲು...


ಅನಿಲ್‌ಕುಮಾರ್


**ಮೈಸೂರು**

✍ ಟಿ.ಎಸ್. ಕಷ್ಣಕುಮಾರ್

ಯುವಕರನ್ನ ಕಿಡ್ನಾಪ್ ಮಾಡಿ ಮಂಗಳಮುಖಿಯರನ್ನಾಗಿ ಪರಿವರ್ತಿಸಿ ಸೆಕ್ಸ್ ವರ್ಕ್ ಹಾಗೂ ವಸೂಲಿ ದಂಧೆಗೆ ಬಳಸಿಕೊಳ್ಳುವ ರಾಕೆಟ್ ಆಗಾಗ ಬೆಳಕಿಗೆ ಬಂದು ಆಧುನಿಕ ಸಮಾಜದ ವ್ಯವಸ್ಥೆಯನ್ನ ತಲೆತಗ್ಗಿಸುವಂತೆ ಮಾಡುತ್ತಿದೆ.ಕರಾಳ ದಂಧೆಯನ್ನ ಹತ್ತಿಕ್ಕಲು ಪೊಲೀಸರು ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದರೂ ಪ್ರಕರಣಗಳು ಮರುಕಳಿಸುತ್ತಲೇ ಇದೆ.ಇಂತಹ ಕರಾಳ ದಂಧೆಯ ಹಿಂದ ಕಾಣದ ಪ್ರಭಾವಿ ಕೈಗಳು ಕೆಲಸ ಮಾಡುತ್ತಿವೆ. ಅಮಾಯಕರು ರಾಕೆಟ್‌ನಲ್ಲಿ ಸಿಲುಕಿ ನರಕ ಅನುಭವಿಸುತ್ತಿದ್ದಾರೆ.ಇಂತಹದ ಒಂದು ಅಘಾತಕಾರಿ ಸುದ್ದಿ ದಕ್ಷಿಣಕಾಶಿ ನಂಜನಗೂಡಿನಲ್ಲಿ ಬೆಳಕಿಗೆ ಬಂದಿದೆ.

ಯುವಕನೊಬ್ಬನನ್ನ ಕಿಡ್ನಾಪ್ ಮಾಡಿ ಬಲವಂತವಾಗಿ ಮಂಗಳಮುಖಿ ವೇಷ ಹಾಕಿಸಿ ಕಲೆಕ್ಷನ್ ಹಾಗೂ ಸೆಕ್ಸ್ ವರ್ಕ್,ರೀಲ್ಸ್‌ಗಳಲ್ಲಿ ಬಳಸಿ,ಲಕ್ಷಾಂತರ ಹಣ ಗಳಿಸಿ ಲಿಂಗ ಬದಲಾವಣೆಗಾಗಿ ಶಸ್ತ್ರಚಿಕಿತ್ಸೆಗೆ ಒಳಪಡಿಸುವ ಹುನ್ನಾರ ಅರಿತ ಯುವಕ ದಂಧೆಯ ಕಪಿಮುಷ್ಠಿಯಿಂದ ಬಿಡಿಸಿಕೊಂಡು ಬಂದ ಶಾಕಿಂಗ್ ಸುದ್ದಿ ಇದು.ತಪ್ಪಿಸಿಕೊಂಡ ಬಂದ ಯುವಕನಿಗೆ ದಂಧೆಗೆ ಮತ್ತೆ ವಾಪಸ್ ಬರುವಂತೆ ಮಾನಸಿಕವಾಗಿ ಕಿರುಕುಳ ನೀಡುತ್ತಿರುವ ಮಂಗಳ ಮುಖಿಯೊಬ್ಬಳ ವಿರುದ್ದ ಯುವಕ ಮೈಸೂರಿನ ಲಷ್ಕರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾನೆ. ತನ್ನ ದೇಹ ಬಳಸಿ ಮಾಡಿಕೊಂಡ ಹಣವನ್ನ ಕೊಡುವಂತೆ ಮನವಿ ಮಾಡಿದ ಯುವಕನಿಗೆ ಮಾನಸಿಕವಾಗಿ, ದೈಹಿಕವಾಗಿ ಕಿರುಕುಳ ನೀಡುತ್ತಾ ಧಮಕಿ ಹಾಕುತ್ತಿರುವ ಪ್ರಕರಣ ಸಂಚಲನ ಮೂಡಿಸಿದೆ. ಕಿಡ್ನಾಪ್ ಮಾಡಿದ ಮಂಗಳ ಮುಖಿಯರ ಗುಂಪಿನಿಂದ ತನಗೆ ರಕ್ಷಣೆ ಬೇಕೆಂದು ಯುವಕ ಪೊಲೀಸರ ಮೊರೆ ಹೋಗಿದ್ದಾನೆ. ಮತ್ತೆ ಕರಾಳ ದಂಧೆಗೆ ತೊಡಗಿಸಲು ಹುನ್ನಾರ ನಡೆಸುತ್ತಿರುವ ಮಂಗಳಮುಖಿ ವಿರುದ್ದ ಹೋರಾಟ ನಡೆಸಲು ಯುವಕ ಸಜ್ಜಾಗಿದ್ದಾನೆ.

ನಂಜನಗೂಡಿನ ತ್ಯಾಗರಾಜ ಕಾಲೋನಿಯ ಯುವಕ ಅನಿಲ್ ಕುಮಾರ್ ಅಲಿಯಾಸ್ ಅಕ್ಷತಾ ನೊಂದ ಯುವಕ. ಮಂಗಳೂರು ಮೂಲದ ಅನಿ ಆರೋಪ ಹೊತ್ತ ಮಂಗಳಮುಖಿ. ನಂಜನಗೂಡಿನಲ್ಲಿ ಬುಲೆಟ್ ರಾಮು ಎಂದೇ ಹೆಸರು ಪಡೆದ ರಾಮು ರವರ ಎರಡನೇ ಪುತ್ರ ಅನಿಲ್ ಕುಮಾರ್. ಅಣ್ಣ ಹಾಗೂ ಓರ್ವ ಅಕ್ಕನ ಜೊತೆ ಬೆಳೆದ ಅನಿಲ್ ಕುಮಾರ್ ಬಡತನದ ಬೇಗೆಯಲ್ಲಿ 10ನೇ ತರಗತಿಗೆ ವಿದ್ಯಾಭ್ಯಾಸ ಮೊಟಕುಗೊಳಿಸಿದ. ಬಡತನದ ಬೇಗೆಯಲ್ಲಿರುವ ಕುಟುಂಬಕ್ಕೆ ಆಸರೆಯಾಗುವ ಅನಿಲ್ ಕುಮಾರ್ ಆಸೆಗೆ ಅಡ್ಡಿಯಾದದ್ದು ದೃಷ್ಟಿಹೀನತೆ. ಶೇಕಡಾ 90 ರಷ್ಟು ಕಣ್ಣು ಕಾಣಿಸುವುದಿಲ್ಲ ಎಂದು ಸರ್ಟಿಫಿಕೇಟ್ ಈತನಿಗಿದೆ. ದೃಷ್ಟಿಹೀನತೆ ಈತನಿಗೆ ಮಾರಕವಾಯ್ತು. ಎಲ್ಲೇ ಕೆಲಸ ಅರಸಿಹೋದ್ರೂ ದೃಷ್ಟಿಹೀನತೆ ಅಡ್ಡಿಯಾಯಿತು. ಹೀಗೆ ಕೆಲಸ ಹುಡುಕಿಕೊಂಡು ಐದು ತಿಂಗಳ ಹಿಂದೆ ಮೈಸೂರಿನ ಹೂಟಗಳ್ಳಿಯ ಖಾಸಗಿ ಫ್ಯಾಕ್ಟರಿಗೆ ಬಂದ ಅನಿಲ್ ಕುಮಾರ್‌ಗೆ ಮತ್ತೆ ಅದೇ ದೃಷ್ಟಿಹೀನತೆ ಕೈಕೊಟ್ಟಿತು. ಬೇಸರದಿಂದಲೇ ಮನೆ ಹಾದಿ ಹಿಡಿದ ಅನಿಲ್ ಕುಮಾರ್ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣಕ್ಕೆ ಬಂದು ಬಸದ ಗಾಗಿ ಕಾಯುತ್ತಿದ್ದಾಗ ಗ್ರಹಚಾರ ಕಾದಿತ್ತು. ನಾಲ್ಕರಿಂದ ಐದು ಮಂದಿಯ ಗುಂಪು ಅಟ್ಯಾಕ್ ಮಾಡಿ ಮೂಗಿಗೆ ಮತ್ತುಬರುವ ವಾಸನೆ ತೋರಿಸಿ ಜ್ಞಾನ ತಪ್ಪಿಸಿ ಮುಸುಕು ಹಾಕಿ ಕಿಡ್ನಾಪ್ ಮಾಡಿದ್ರು. ಅನಿಲ್ ಕುಮಾರ್‌ಗೆ ಎಚ್ಚರವಾದಾಗ ಮಂಗಳೂರಿನಲ್ಲಿದ್ರು. ಎಚ್ಚರವಾದ ಅನಿಲ್ ಕುಮಾರ್ ಗೆ ತನ್ನ ಸುತ್ತಲೂ ಕಾಣಿಸಿಕೊಂಡಿದ್ದು ಮಂಗಳಮುಖಿಯರು. ಅದರಲ್ಲಿ ಪ್ರಮುಖವಾಗಿ ಅನಿ ಅ|| ಅಜೀಬಾ ಟೀಂ ಲೀಡರ್. ಕೆಲಸಕ್ಕಾಗಿ ತಂದ ಸ್ಕೂಲ್ ಸರ್ಟಿಫಿಕೇಟ್‌ಗಳು ಅನಿ ಪಾಲಾಗಿತ್ತು. ತಾನು ಹೇಳಿದಂತೆ ಕೇಳದಿದ್ರೆ ಉಳಿಗಾಲವಿಲ್ಲ, ನಿಮ್ಮ ಕುಟುಂಬಕ್ಕೂ ತೊಂದರೆ ನೀಡುವುದಾಗಿ ಹೆದರಿಸಿ ಹೆಣ್ಣು ವೇಷ ಹಾಕುವಂತೆ ಬಲವಂತವಾಗಿ ಒಪ್ಪಿಸಿದರು. ಜೀವ ಬೆದರಿಕೆ ಹಿನ್ನಲೆ ಅನಿ ಹೇಳಿದಂತೆ ಕೇಳಬೇಕಾಯ್ತು.ಅನಿಲ್ ಕುಮಾರ್ ಕೆಲವೇ ದಿನಗಳಲ್ಲಿ ಅಕ್ಷತಾ ಆಗಿ ಬದಲಾದ್ರು. ಹೆಣ್ಣಿನ ವೇಷ ಹಾಕಿ ಕಲೆಕ್ಷನ್‌ಗೆ ತೆರಳಬೇಕಾಯ್ತು. ಸರ್ಕಲ್‌ಗಳಲ್ಲಿ ನಿಲ್ಲುವ ವಾಹನಗಳಿಂದ ಹಾಗೂ ಅಂಗಡಿಗಳಿಂದ ವಸೂಲಿ ಮಾಡುವ ಕೆಲಸ ಹೆಗಲಿಗೆ ಹಾಕಿದ್ರು. ಅನಿಲ್ ಜೊತೆಗೆ ಇನ್ನಿಬ್ಬರು ಇರುತ್ತಿದ್ದು. ಅನಿಲ್ ಕುಮಾರ್ ಮಿಸುಕಾಡುವಂತೆ ಇರಲಿಲ್ಲ. ದಿನದ 24 ಗಂಟೆ ಸಿನಿಮಾದಲ್ಲಿ ತೋರಿಸುವಂತೆ ಕಾವಲು ಇರುತ್ತಿತ್ತು. ಪ್ರತಿದಿನ 2 ರಿಂದ 3 ಸಾವಿರ ಕಲೆಕ್ಷನ್ ಆಗುತ್ತಿತ್ತು. ಹೆಣ್ಣುಮಕ್ಕಳು ವರ್ತಿಸುವಂತೆ ಟ್ರೈನಿಂಗ್ ನಡೆಯುತ್ತಿತ್ತು. ಕಲೆಕ್ಷನ್ ಕೆಲಸದಿಂದ ಮತ್ತೊಂದು ಕಸುಬಿಗೆ ಪ್ರಮೋಷನ್ ದೊರೆಯಿತು. ಅನಿಲ್ ಕುಮಾರ್ ಹೇಳುವಂತೆ ಸೆಕ್ಸ್ ವರ್ಕ್‌ಗೂ ಬಳಸಿಬಿಟ್ರು. ಕೇರಳ, ಮಂಗಳೂರು ಸೇರಿದಂತೆ ಹಲವೆಡೆಗೆ ಅನಿಲ್ ಕುಮಾರ್ ಅ|| ಅಕ್ಷತಾ ಸೆಕ್ಸ್ ವರ್ಕ್‌ಗೆ ಹೋಗಬೇಕಾಯ್ತು. ಈ ಮಧ್ಯೆ ಅನಿಲ್ ಕುಮಾರ್ ಆಧಾರ್ ಕಾರ್ಡ್ ಬದಲಾಯ್ತು. ಅದರಲ್ಲಿ ಟ್ರಾನ್ಸ್‌ಜೆಂಡರ್ ಎಂದು ನಮೂದಾಯಿತು. ಸಮಾಜ ಕಲ್ಯಾಣ ಇಲಾಖೆಯಿಂದ ಟ್ರಾನ್ಸ್‌ಜೆಂಡರ್ ಸರ್ಟಿಫಿಕೇಟ್ ಸಹ ಬಂತು. ದಾಖಲೆಗಳ ಪ್ರಕಾರ ಅನಿಲ್ ಕುಮಾರ್ ಟ್ರಾನ್ಸ್‌ಜೆಂಡರ್ ಆದ್ರು. ಅನಿ ಮಾಲೀಕತ್ವದಲ್ಲಿ ಮಂಗಳೂರಿನಲ್ಲಿ ಕೆಫೆ ಒಂದು ನಡೆಯುತ್ತಿತ್ತು.


State Government of Karnataka Office of the District Magistrate

TRANSGENDER IDENTITY CARD

Identity Card Number : KA/Dak/2022/71811/1/KA/Dak/2022/71811-KA/Dak/2022/55598
Name : AKSHATHA R
Parent/Guardian : N.S RAMU
Gender : Transgender
Date of Birth : 21-05-1997
Age as on the date of application for issue of identity card :
Reference number of certificate of authority on the basis of which this card is issued : KA/Dak/2022/71811-KA/Dak/2022/55598


Back side of the Identity Card

Address for Correspondence : Door No 20-10-T-28/4, Bunder, Mangalore-575001 Mangalore 575001

Card issue date : 17/02/2026

Deputy Commissioner
Dakshina Kannada District


Seal of the issuing authority
Issued under Section 6*/7* of the Transgender Persons (Protection to Rights) Act, 2019 and under Rule ________ of Trasgender Persons (Protection of Rights) Rules, 20[illegible]
* Strike out whichever is not applicable
@ only in case the applicant is a minor child.



CERTIFICATE

Form - 5

Certificate Number : KA/Dak/2022/71811/0/KA/Dak/2022/71811-KA/Dak/2022/55598

Date : 17/02/2026




ಅನಿ ಅ|| ಅಜೀಬಾ

## ಸಮಾಜ ಸೇವೆಯ ಮುಖವಾಡದ ಹಿಂದೆ ಅಪಾಯದ ನೆರಳು?

ಅನಿ ಅ|| ಅಜೀಬಾ ಮಂಗಳಮುಖಿಯಾದ್ರೂ ಕೆಲವು ಕ್ಯಾಟಗರಿಯನ್ನ ಆಕರ್ಷಿಸುವುದೇ ಇವಳ ಕರಾಮತ್ತು. ಮೂಲತಃ ರಾಯಚೂರಿನವಳು. ಬಿಇಡ್ ಮಾಡಲು ಮಂಗಳೂರಿಗೆ ಬಂದು ಮಂಗಳ ಮುಖಿಯಾಗಿ ಪರಿವರ್ತನೆಯಾದವಳು. ಸಮಾಜ ಸೇವೆಯ ಮುಖವಾಡ ಹಾಕಿಕೊಂಡು ಸಾಕಷ್ಟು ಕ್ರೈಂ ಪ್ರಕರಣಗಳಲ್ಲಿ ಸಿಲುಕಿದ್ದಾಳೆಂದು ಅನಿಲ್ ಕುಮಾರ್ ಆರೋಪಿಸುತ್ತಾರೆ. ಈಕೆಯ ಅಂದಕ್ಕೆ ಬೆರಗಾದ ಧನುಷ್ ಎಂಬಾತ ಬಾಯ್ ಫ್ರೆಂಡ್ ಆದ. ಪತ್ನಿಯನ್ನೂ ತೊರೆದ ಧನುಷ್ ಹೆಚ್ಚಾಗಿ ಅನಿ ಜೊತೆ ಕಾಲ ಕಳೆಯುತ್ತಿದ್ದ.ಇದ್ದಕ್ಕಿದ್ದಂತೆ ಇವರಿಬ್ಬರ ಮಧ್ಯೆ ಬಿರುಕು ಕಾಣಿಸಿಕೊಂಡು ಪ್ರತ್ಯೇಕವಾದ್ರು ಎಂದು ಹೇಳುವ ಅನಿಲ್ ಕುಮಾರ್ ರೀಲ್ಸ್ ಗಳ ಮೂಲಕ ಅನಿ ಸಮಾಜಕ್ಕೆ ಉತ್ತಮ ಸಂದೇಶ ಕೊಡುವಲ್ಲಿ ನಿಸ್ಸೀಮಳು. ಈಗಾಗಲೇ ನೂರಾರು ರೀಲ್ಸ್ ಗಳು ಈಕೆಯ ಇನ್‌ಸ್ಟಾಗ್ರಾಂನಲ್ಲಿ ಪ್ರಚಾರ ಪಡೆದಿವೆ. ಇದರಿಂದ ಅನಿಗೆ ಕೈತುಂಬಾ ಹಣವೂ ಬರುತ್ತಿದೆ. ಅನಿಲ್ ಕುಮಾರ್ ಪ್ರಕಾರ 4 ಆಟೋಗಳನ್ನ ಬಾಡಿಗೆಗೆ ಬಿಟ್ಟಿದ್ದಾಳೆ. ಕಾರ್, ಬೈಕ್‌ಗಳಿವೆ. ಈಕೆಗೆ 31k ಫಾಲೋಯರ್ಸ್ ಇದ್ದಾರೆ.ಸ್ವಂತ ಯೂಟ್ಯೂಬ್ ಚಾನೆಲ್ ಹೊಂದಿದ್ದಾಳೆ. ಫೇಸ್ ಬುಕ್ ನಲ್ಲೂ ಉತ್ತಮ ರೆಸ್ಪಾನ್ಸ್ ಇದೆ ಎನ್ನುವ ಅನಿಲ್ ಕುಮಾರ್ ಮೇಲ್ನೋಟಕ್ಕೆ ಸಮಾಜಸೇವಕಿಯಂತೆ ಕಾಣಿಸುಕೊಂಡ್ರೂ, ನಿಜ ಜೀವನದಲ್ಲಿ ಭಾರಿ ಅಪಾಯದ ಮಂಗಳಮುಖಿ ಎನ್ನುತ್ತಾರೆ. ☯

## ಕಿಡ್ನಾಪ್‌ನಿಂದ ಕಾಗದಗಳ ಕಳಪೆ ಆಟವರೆಗೆ...

ಐದು ತಿಂಗಳ ಹಿಂದೆ ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಿಂದ ಅನಿಲ್ ಕುಮಾರ್ ಕಿಡ್ನಾಪ್ ಆದ್ರು. ಅನಿ ಟ್ರಾಪ್‌ನಲ್ಲಿ ಸಿಲುಕಿದ ಅನಿಲ್ ಸಾಕಷ್ಟು ಕಹಿ ಅನುಭವಗಳನ್ನ ಅನುಭವಿಸಿದ್ರು. ಒಂದು ಅಘಾತಕಾರಿ ವಿಚಾರವೆಂದ್ರೆ, ಕೇವಲ ಐದು ತಿಂಗಳಲ್ಲಿ ಇವರ ಹೆಸರಿಗೆ ಟ್ರಾನ್ಸ್‌ಜೆಂಡರ್ ಸರ್ಟಿಫಿಕೇಟ್ ಸೃಷ್ಠಿಯಾಗಿದ್ದು. ಟ್ರಾನ್ಸ್‌ಜೆಂಡರ್ ಸರ್ಟಿಫಿಕೇಟ್ ನೀಡಬೇಕಂದ್ರೆ, ಸಾಕಷ್ಟು ನಿಯಮಗಳನ್ನ ಪಾಲಿಸಬೇಕಿದೆ. ವ್ಯಕ್ತಿಯ ಹಿನ್ನಲೆ ತಿಳಿದುಕೊಳ್ಳಬೇಕಿರುತ್ತದೆ. ಪೋಷಕರಿಂದ ಮಾಹಿತಿ ಪಡೆದುಕೊಳ್ಳಬೇಕಿರುತ್ತದೆ.ವೈದ್ಯಕೀಯ ತಪಾಸಣೆಗೆ ಒಳಪಡಿಸಬೇಕಿರುತ್ತದೆ. ತಾನು ಮಂಗಳಮುಖಿ ಅಲ್ಲದಿದ್ರೂ ಮಂಗಳಮುಖಿ ಎಂಬಂತೆ ದಾಖಲೆ ಸೃಷ್ಠಿಯಾಗಿದೆ ಅಂದ್ರೆ ಇದರ ಹಿಂದಿನ ಜಾಲ ಹೇಗಿದೆ ಎಂದು ಅರ್ಥಮಾಡಿಕೊಳ್ಳಬಹುದು. ಆಧಾರ್ ಕಾರ್ಡ್ ಸಹ ಬದಲಾಗಿ ಅದರಲ್ಲೂ ಟ್ರಾನ್ಸ್‌ಜೆಂಡರ್ ಎಂದೇ ನಮೂದಾಗಿರುವುದನ್ನ ಗಮನಿಸಿದ್ರೆ ಅನಿಯ ಪ್ರಭಾವ ಎಷ್ಟಿರಬಹುದೆಂದು ಊಹಿಸಬಹುದು. ಅನಿಯಾವ ಮಾರ್ಗ ಬೇಕಾದ್ರೂ ಹಿಡೀತಾಳೆ ಎಂದು ಹೇಳುವ ಅನಿಲ್ ಕುಮಾರ್ ಮತ್ತೆ ಆ ದಂಧೆಯತ್ತ ತಲೆ ಹಾಕುವುದಿಲ್ಲ. ಎಂತಹ ಸಂಕಷ್ಟ ಬಂದರೂ ಎದುರಿಸುವುದಾಗಿ ಹೇಳುತ್ತಿದ್ದಾರೆ. ☯

☞ 5

4 ☞

ಅನಿಲ್ ಕುಮಾರ್ ಕೆಫೆಯಲ್ಲೂ ಸಹ ಕೆಲಸ ಮಾಡಬೇಕಾಯ್ತು. ಈ ಮಧ್ಯೆ ಅನಿಗೆ ಸಾಮಾಜಿಕ ಕಳಕಳಿಯ ರೀಲ್ಸ್‌ಗಳ ಹುಚ್ಚು ಹಿಡಿದಿತ್ತು. ಸಮಾಜಕ್ಕೆ ಉತ್ತಮ ಸಂದೇಶ ಕೊಡುವ ಸಾಕಷ್ಟು ರೀಲ್ಸ್‌ಗಳು ತನ್ನ ಇನ್‌ಸ್ಟಾಗ್ರಾಂ ಮೂಲಕ ಅಪ್‌ಲೋಡ್ ಮಾಡಿದ್ದಳು. ಕೆಲವು ರೀಲ್ಸ್‌ಗಳಲ್ಲಿ ಅನಿಲ್ ಕುಮಾರ್ ಸಹ ಹೆಣ್ಣಿನ ವೇಷ ಧರಿಸಿ ಪಾತ್ರ ಮಾಡಬೇಕಾಯ್ತು. ಅನಿ ಹೇಳುತ್ತಿದ್ದ ಪ್ರತಿಯೊಂದು ಕೆಲಸ ಮಾಡಲೇಬೇಕಿತ್ತು. ಇಲ್ಲದಿದ್ದಲ್ಲಿ ಕಿರುಕುಳ ತಪ್ಪಿದ್ದಲ್ಲ. ಸೀರೆ, ನೈಟಿ, ಮೂಗಿಗೆ ಮೂಗುತಿ, ಕಿವಿಗೆ ಓಲೆ ಧರಿಸುವುದೇ ಒಂದು ಕಿರುಕಿರಿ ಭಾಸವಾಗುತ್ತಿತ್ತು. ತಾನು ಇರುವ ರೀಲ್ಸ್‌ಗಳನ್ನ ಎರೇಸ್ ಮಾಡುವಂತೆ ಮನವಿ ಮಾಡಿದ್ರೂ ಕೇರ್ ಎನ್ನುತ್ತಿರಲಿಲ್ಲ ಅನಿ. ತನ್ನ ಕುಟುಂಬದವರು ನೋಡಿದ್ರೆ ಕೆಟ್ಟದಾಗಿ ತಿಳಿದುಕೊಳ್ತಾರೆ ಎಂದು ಕೇಳಿಕೊಂಡ್ರೂ ಅನಿ ಮನಸ್ಸು ಕರಗಲಿಲ್ಲ. ಹಾಗೂ ಹೀಗೂ ಐದು ತಿಂಗಳು ಉರುಳಿ ಹೋಗಿತ್ತು. ಅನಿಯ ಮತ್ತೊಂದು ಸ್ಕೆಚ್ ಅನಿಲ್ ಕುಮಾರ್ ಕಿವಿಗೆ ಬಿದ್ದಿದೆ. ಅಧಿಕೃತವಾಗಿ ಅನಿಲ್‌ನ ಅಕ್ಷತಾ ಮಾಡುವ ಸ್ಕೆಚ್ ಗೊತ್ತಾಗಿದೆ. ಮುಂದಿನ ತಿಂಗಳು ಶಸ್ತ್ರಚಿಕಿತ್ಸೆಗಾಗಿ ಬಾಂಬೆಗೆ ತೆರಳಲು ನಿರ್ಧಾರವಾಗಿದೆ. ಈ ಮಾಹಿತಿ ಅರಿತ ಅನಿಲ್ ಅಲ್ಲಿಂದ ತಪ್ಪಿಸಿಕೊಳ್ಳಲು ಸಮಯ ಕಾಯುತ್ತಿದ್ರು.



ಮಾರ್ಚ್ 6 ಕೆಫೆಯಲ್ಲಿ ಒಬ್ಬನೇ ಕೆಲಸ ಮಾಡುತ್ತಿದ್ದಾಗ ತನ್ನ ದಾಖಲೆಗಳು ಕೈಗೆ ಸಿಕ್ಕಿದೆ. ದಾಖಲೆಗಳ ಸಮೇತ ಅನಿಲ್ ಎಸ್ಕೇಪ್ ಆಗಿದ್ದಾರೆ. ನೇರವಾಗಿ ನಂಜನಗೂಡಿಗೆ ಪ್ರಯಾಣ ಬೆಳೆಸಿದ್ದಾರೆ. ಎಷ್ಟು ಹುಡುಕಾಡಿದ್ರೂ ಅನಿಲ್ ಅ|| ಅಕ್ಷತಾ ಕಾಣಿಸಿಲ್ಲ.ಮೊಬೈಲ್ ಸ್ವಿಚ್ ಆಫ್. ತಪ್ಪಿಸಿಕೊಂಡು ಓಡಿರುವುದು ಅನಿಗೆ ಖಚಿತವಾಗಿದೆ. ಹಿಂದೆಯೇ ತನ್ನ ಟೀಂನ ನಂಜನಗೂಡಿಗೆ ಅಟ್ಟಿದ್ದಾಳೆ. ಕೆಲವು ದಿನಗಳ ನಂತರ ಅನಿಲ್ ಕುಮಾರ್ ಸಿಕ್ಕಿದ್ದಾರೆ. ವಾಪಸ್ ಬರುವಂತೆ ಪುಸಲಾಯಿಸಿದ್ದಾರೆ. ಬೆದರಿಕೆ ಹಾಕಿದ್ದಾರೆ. ಕರಾಳ ದಿನಗಳನ್ನ ನೆನೆಸಿಕೊಂಡ ಅನಿಲ್ ಮತ್ತೆ ಹಿಂದಿರುಗಲು ನಿರಾಕರಿಸಿದ್ದಾರೆ. ಅನಿ ಟೀಂ ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಹಿಂದಕ್ಕೆ ತೆರಳಿದೆ.

ವಿಶೇಷವೆಂದ್ರೆ, ಅನಿಲ್ ದೈಹಿಕವಾಗಿ ಲೈಂಗಿಕವಾಗಿ ಸಮರ್ಥನಿದ್ರೂ, ಟ್ರಾನ್ಸ್‌ಜೆಂಡರ್ ಸರ್ಟಿಫಿಕೇಟ್ ದೊರೆತಿದೆ. ಆಧಾರ್ ಕಾರ್ಡ್‌ನಲ್ಲಿ ಸಹ ಲಿಂಗ ಬದಲಾವಣೆ ಬದಲಾಯಿಸಲಾಗಿದೆ. ಟ್ರಾನ್ಸ್‌ಜೆಂಡರ್ ಎಂದು ನಮೂದಿಸಲಾಗಿದೆ. ಎಲ್ಲಾ ದಾಖಲೆ ಸಮೇತ ಅನಿಲ್ ಕುಮಾರ್ ಎಸ್ಕೇಪ್ ಆಗಿದ್ದು ಅನಿಗೆ ಟೆನ್ಷನ್ ತಂದಿದೆ. ಮಂಗಳಮುಖಿ ಅಲ್ಲದಿದ್ರೂ, ಮಂಗಳಮುಖಿಯಂತೆ ಸರ್ಟಿಫಿಕೇಟ್‌ಗಳನ್ನ ಸೃಷ್ಟಿಸಿರುವುದು ಭಾರಿ ತಲೆನೋವಾಗಿ ಪರಿಣಮಿಸಿದೆ. ಹಿಂದು ಮುಂದು ನೋಡದ ಸಮಾಜ ಕಲ್ಯಾಣ ಇಲಾಖೆ ಯಾವುದೇ ನಿಯಮಗಳನ್ನ ಪಾಲಿಸದೆ ಸರ್ಟಿಫಿಕೇಟ್‌ಗಳನ್ನ ನೀಡಿ ತಗಲಾಕಿಕೊಂಡಿದೆ. ಸರ್ಟಿಫಿಕೇಟ್‌ಗಳನ್ನ ಹಿಂದಿರುಗಿಸುವಂತೆ ಅನಿಲ್ ಕುಮಾರ್‌ಗೆ ಒತ್ತಡಗಳು ಹೆಚ್ಚಾಗಿದೆ. ಸುಮಾರು ನೂರಾರು ಕಾಲ್‌ಗಳು ಬಂದಿವೆ. ಮನೆ ಮುಂದೆ ಗಲಾಟೆಗಳು ಮಾಡಿದ್ದಾರೆ. ತನ್ನ ದೇಹ ಬಳಸಿ ಮಾಡಿಕೊಂಡ 3 ಲಕ್ಷ ಹಣ ನೀಡುವಂತೆ ಅನಿಲ್ ಕುಮಾರ್ ಕೇಳಿಕೊಂಡಾಗ ಅನಿಯಿಂದ ಧಮಕಿ ಬಂದಿದೆ. ನನ್ನ ಮನೆಯಿಂದ 5 ಲಕ್ಷ ಹಣ ಹಾಗೂ ಚಿನ್ನಾಭರಣ ಕಳ್ಳತನ ಮಾಡಿದ್ದಾನೆಂದು ಸುಳ್ಳು ಕಂಪ್ಲೇಂಟ್ ದಾಖಲಿಸಿ ಜೈಲಿಗೆ ಕಳಿಸುವುದಾಗಿ ಅನಿ ಎಚ್ಚರಿಕೆ ನೀಡಿದ್ದಾಳೆ. ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಸಹ ಫೋನ್ ಮಾಡಿ ಬೇಡಿಕೊಂಡಿದ್ದಾರೆ. ಪೊಲೀಸರು ಬರ್ತಾರೆ ಎಂದು ಹೆದರಿಸಿದ್ದಾರೆ. ತನಗೆ ಸೇರಬೇಕಾದ ಹಣ ನೀಡುವಂತೆ ಅನಿಲ್ ಕುಮಾರ್ ಪಟ್ಟು ಹಿಡಿದಿದ್ದಾರೆ.

ಅನಿಯಿಂದ ಬಂದ ಫೈನಲ್ ವಾರ್ನಿಂಗ್ ಹಾಗೂ ಅಧಿಕಾರಿಯಿಂದ ಬಂದ ಕರೆಯನ್ನ ರೆಕಾರ್ಡ್ ಮಾಡಿಕೊಂಡ ಅನಿಲ್ ಕುಮಾರ್ ನೇರವಾಗಿ ನಂಜನಗೂಡು ಟೌನ್ ಠಾಣೆಗೆ ತೆರಳಿ ದೂರು ನೀಡಿದ್ದಾರೆ. ಲಷ್ಕರ್ ಪೊಲೀಸ್ ಠಾಣಾ ವ್ಯಾಪ್ತಿಯಿಂದ ಕಿಡ್ನಾಪ್ ಆಗಿರುವುದರಿಂದ ಅದೇ ಠಾಣೆಯಲ್ಲಿ ದೂರು ದಾಖಲಿಸುವಂತೆ ಪೊಲೀಸರು ಸಲಹೆ ನೀಡಿದ್ದಾರೆ. ಮತ್ತೊಂದೆಡೆ ಮತ್ತೆ ಕರೆಸಿಕೊಳ್ಳುವ ಹುನ್ನಾರ ಸಹ ಹೆಚ್ಚಾಗಿದೆ. ಕೂಡಲೇ ಎಚ್ಚೆತ್ತ ಅನಿಲ್ ಕುಮಾರ್ ದಾಖಲೆ ಸಮೇತ ಮೈಸೂರಿನ ಲಷ್ಕರ್ ಪೊಲೀಸ್ ಠಾಣೆ ಮೆಟ್ಟಿಲೇರಿ ತನಗಾದ ಅನ್ಯಾಯವನ್ನ ನಿವೇದಿಸಿಕೊಂಡು ಅನಿ ವಿರುದ್ಧ ದೂರು ದಾಖಲಿಸಿದ್ದಾರೆ. ಮಂಗಳೂರಿನಲ್ಲಿ ಕಳ್ಳತನ ಪ್ರಕರಣ ದಾಖಲಿಸುವುದಾಗಿ ಅನಿ ಬೆದರಿಕೆ ಹಾಕಿದರೂ ಅನಿಲ್ ಕುಮಾರ್ ಜಗ್ಗಿಲ್ಲ. ಯಾವುದೇ ಬೆದರಿಕೆ ಬಂದ್ರೂ ಎದುರಿಸಲು ಸಿದ್ದವೆಂದು ಸಜ್ಜಾಗಿರುವ ಅನಿಲ್ ತನಗೆ ನ್ಯಾಯ ಬೇಕು ಹಾಗೂ ರಕ್ಷಣೆ ಬೇಕೆಂದು ಮೈಸೂರು ಪೊಲೀಸರ ಮೊರೆ ಹೋಗಿದ್ದಾರೆ. ಈ ಮೂಲಕ ಬಲವಂತವಾಗಿ ಮಂಗಳಮುಖಿಯಾಗಿ ಕನ್ವರ್ಟ್ ಮಾಡುವ ರಾಕೆಟ್ ಅಸ್ತಿತ್ವದಲ್ಲಿರುವ ಸಂದೇಶ ಇದರಲ್ಲಿ ಅಡಗಿದೆ. ಅಮಾಯಕ ಯುವಕರನ್ನ ಕರಾಳ ದಂಧೆಗೆ ಸಿಲುಕಿಸುವ ಹುನ್ನಾರಗಳು ನಡೆಯುತ್ತಲೇ ಇವೆ. ಅನಿ ಹಿಂದೆ ಎಂತಹ ಪ್ರಭಾವಿ ಕೈಗಳಿದ್ರೂ ಖಾಕಿ ಪಡೆ ಹೆಡೆಮುರಿ ಕಟ್ಟಬೇಕಿದೆ. ಇಲ್ಲದಿದ್ರೆ, ಮುಗ್ದರು ಇಂತಹ ಚಕ್ರವ್ಯೂಹದಲ್ಲಿ ಸಿಲುಕುವ ಪ್ರಕರಣಗಳು ಹೆಚ್ಚಾಗುತ್ತವೆ. ಈ ಪ್ರಕರಣವನ್ನ ಮೈಸೂರು ಪೊಲೀಸರು ಗಂಭೀರವಾಗಿ ಪರಿಗಣಿಸಬೇಕಿದೆ. ಇಲ್ಲಿ ಯಾರೇ ತಪ್ಪಿತಸ್ಥರಿದ್ರೂ ಕಾನೂನಿನ ಚೌಕಟ್ಟಿನಲ್ಲಿ ಸಿಲುಕಿಸಬೇಕಿದೆ.ಅನಿಲ್ ಕುಮಾರ್ ಇಷ್ಟಪಟ್ಟು ಮಂಗಳಮುಖಿಯಾಗಲು ಹೋದನೇ ಅಥವಾ ಬಲವಂತವಾಗಿ ಮಂಗಳಮುಖಿ ಮಾಡುವ ಸಂಚು ನಡೆಯಿತೇ ತನಿಖೆಯಲ್ಲಿ ಸಾಬೀತಾಗಬೇಕಿದೆ. ಒಟ್ಟಾರೆ ಈ ಪ್ರಕರಣವನ್ನ ಪೊಲೀಸರು ಗಂಭೀರವಾಗಿ ಪರಿಗಣಿಸಬೇಕಿದೆ... ☯





## ಮಂಗಳಮುಖಿ ದಂಧೆಯಿಂದ ಪಾರಾದ ಅನಿಲ್ ಕುಮಾರ್!


ಮಂಗಳಮುಖಿಯಾಗುವ ಕರಾಳ ದಂಧೆಯಿಂದ ತಪ್ಪಿಸಿಕೊಂಡು ಓಡಿ ಬಂದ ಅನಿಲ್ ಕುಮಾರ್‌ಗೆ ಕಳೆದ ಐದು ತಿಂಗಳಲ್ಲಿ ನಡೆದ ಕಹಿ ಘಟನೆಗಳು ಶಾಕಿಂಗ್ ಎಂದೇ ಹೇಳಬೇಕು. ಆರಂಭದ ದಿನಗಳಲ್ಲಿ ಅನಿಲ್ ಜೊತೆಗೆ ಇನ್ನಿಬ್ಬರೂ ಸಹ ಸಿಲುಕಿದ್ದರು. ಸಮಯ ನೋಡಿ ಅವರು ತಪ್ಪಿಸಿಕೊಂಡರೆಂದು ಹೇಳುವ ಅನಿಲ್ ತನಗಾದ ಅನುಭವಗಳ ವಿಡಿಯೋ ತುಣುಕುಗಳನ್ನ ತೋರಿಸಿ ಗದ್ಗದಿತರಾಗುತ್ತಾರೆ. ಸೆಕ್ಸ್‌ವರ್ಕ್‌ನಲ್ಲಿ ತೊಡಗುವ ಬಗೆ ಹೇಗೆಂಬ ಟ್ರೈನಿಂಗ್ ನೀಡುವ ವಿಡಿಯೋ ಶಾಕ್ ನೀಡುತ್ತದೆ.ಖಾಸಗಿ ಅಂಗಗಳ ಬಳಕೆ ಹೇಗೆಂದು ತರಬೇತಿ ನೀಡಲಾಗುತ್ತದೆ. ಅನುಭವಿ ಮಂಗಳಮುಖಿಯರು ಡೈರೆಕ್ಷನ್‌ಗಳನ್ನ ಕೊಡುತ್ತಾರೆ.ಅಂತಹ ಒಂದು ವಿಡಿಯೋ ತಮ್ಮ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿರುವ ಅನಿಲ್ ಕುಮಾರ್ ತಮ್ಮ ಮೇಲೆ ನಡೆದ ಕ್ರೌರ್ಯಕ್ಕೆ ಸಾಕ್ಷಿ ಇದೆ ಎನ್ನುತ್ತಾರೆ. ಅವರು ಹೇಳಿದಂತೆ ಕೇಳದಿದ್ರೂ ಟಾರ್ಚರ್ ಕೊಡುವ ವಿಡಿಯೋ ಸಹ ಇಟ್ಟುಕೊಂಡಿದ್ದಾರೆ. ಇವರ ಹಿಂದೆ ದೊಡ್ಡ ವ್ಯಕ್ತಿಗಳ ಕೈವಾಡ ಇದೆ ಎನ್ನುವ ಅನಿಲ್ ಕುಮಾರ್ ತನಗೆ ರಕ್ಷಣೆ ಬೇಕೆಂದು ಅವಲತ್ತುಕೊಂಡಿದ್ದಾರೆ. ☯

## ಅನಿಲ್ ಹೇಳಿಕೆಯಲ್ಲಿ ಗೊಂದಲ!

ಮಂಗಳಮುಖಿ ಕರಾಳದಂಧೆಯಲ್ಲಿ ಸಿಲುಕಿದ ಅನಿಲ್ ಕುಮಾರ್ ಹೇಳಿಕೆಯಲ್ಲಿ ಸಾಕಷ್ಟು ಗೊಂದಲಗಳೂ ಇವೆ. ಮೊದಲನೆಯದಾಗಿ ಇದರ ಹಿಂದಿರುವ ಜಾಲ ಟಾರ್ಗೆಟ್ ಮಾಡುವುದೇ ಸ್ಫುರದ್ರೂಪಿ ಯುವಕರನ್ನ. ಅನಿಲ್ ಕುಮಾರ್ ಸ್ಫುರದ್ರೂಪಿಯಲ್ಲ. ಈತನನ್ನ ಕಿಡ್ನಾಪ್ ಮಾಡುವ ಪ್ರಮೇಯ ಇವರಿಗೆ ಇತ್ತಾ ಎಂಬ ಸಂಶಯ ಮೂಡುತ್ತದೆ. ಕಿಡ್ನಾಪ್ ಆಗಿ ಐದು ತಿಂಗಳು ಕಳೆದ್ರೂ, ಮನೆಯವರು ಮಿಸ್ಸಿಂಗ್ ಕಂಪ್ಲೇಂಟ್ ಕೊಟ್ಟಿಲ್ಲ ಯಾಕೆ ಎಂಬ ಪ್ರಶ್ನೆಗೆ ಉತ್ತರಿಸುವ ಅನಿಲ್ ತಾನು ಆಗಾಗ ಕೆಲಸದ ನಿಮಿತ್ತ ಮನೆ ಬಿಟ್ರೆ, ತಿಂಗಳ ಕಾಲ ಹಿಂದಿರುಗುತ್ತಿರಲಿಲ್ಲವಂತೆ.ಹೀಗಾಗಿ ಮನೆಯವ್ರು ಮಿಸ್ಸಿಂಗ್ ದೂರು ದಾಖಲಿಸಿಲ್ಲವೆಂದು ಸಮರ್ಥಿಸಿಕೊಂಡಿದ್ದಾರೆ. ಒಟ್ಟಾರೆ ಈ ಪ್ರಕರಣದಲ್ಲಿ ಯಾರೇ ತಪ್ಪಿತಸ್ಥರು ಇದ್ದರೂ ಕಾನೂನು ಪರಿಧಿಯಲ್ಲಿ ಶಿಕ್ಷೆ ಆಗಬೇಕು.ಹಾಗೂ ಇಂತಹ ಪಿಡುಗಿಗೆ ಪೊಲೀಸರು ಬ್ರೇಕ್ ಹಾಕಬೇಕು... ☯


UNIQUE DISABILITY ID
Government of India
Name: ಅನಿಲ್ ಕುಮಾರ್ ಆರ್
Anil Kumar R
UDID: KA2390219970139639
Disability Type: Blindness
Year of Birth: 1997
% of Disability: 90% (Ninety Percent)
Date of Issue: 16/09/2021
Valid upto: Permanent
Issuing Authority Sign


UNIQUE DISABILITY ID
Government of India
STATE ID: N/A
Aadhaar No. ********3436
Address of the Card Issuing Authority State/District level
K.r. Hospital, Irwin Road, Opp.mmc And Ri, Mysore, Karnataka - 570001


Personal Information
Name
Anil Kumar R
Address as per e-KYC
, Door No 20-10-T-28/4, Mangalore, Near Narayana Hotel, Dakshina Kannada, Karnataka-575001
Click Here to Change the Address
Gender
Female
Date of Birth
21-05-1997
Mobile Number
7090564475
Click Here to Change the Mobile Number


भारत सरकार
Government of India
आधार
Issue Date: 22/07/2011
ಅನಿಲ್ ಕುಮಾರ್ ಆರ್
Anil Kumar R
ಜನ್ಮ ದಿನಾಂಕ / DOB: 21/05/1997
ಪುರುಷ / Male
4711 0400 3436
मेरा आधार, मेरी पहचान

# ಸುಪನಾತಿ ಸುಂದರಿಯ ಕಾಟಕ್ಕೆ ಬಲಿಯಾದ ಯುವಕ!

ದಕ್ಷಿಣ ಕನ್ನಡ

ಮೋಹನ್ ಬೋಳಂಗಡಿ

ಇದೊಂದು ವಿಚಿತ್ರವಾದ ಘಟನೆ. ಯುವಕನೊಬ್ಬನನ್ನು ಇನ್‌ಸ್ಟಾಗ್ರಾಮ್ ಮೂಲಕ ಪರಿಚಯ ಮಾಡಿಕೊಂಡು ಆತನನ್ನು ಉಪಾಯದಿಂದ ಮದುವೆಯಾಗಿ ಕೊನೆಗೆ ಆತನೇ ಇಲಿ ಪಾಶಾಣ ಸೇವಿಸಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿಯನ್ನು ಸೃಷ್ಟಿಸಿದ ಸುಪನಾತಿ ಸುಂದರಿಯ ಕತೆಯಿದು. ರಾಜ್ಯಕ್ಕೆ ಮುಖ್ಯಮಂತ್ರಿಗಳನ್ನು ನೀಡಿದಂತಹ ಕಾರ್ಕಳದಲ್ಲಿ ಇಂತಹ ಖತರ್ನಾಕ್ ಐಟಮ್ ಗರ್ಲ್ ಇದ್ದಳು ಎನ್ನುವುದನ್ನು ನಂಬಲಿಕ್ಕೆ ಸಾಧ್ಯವಾಗುತ್ತಿಲ್ಲ. ಆದರೆ ನಂಬಲೇಬೇಕು. ಯುವಕನ ಆತ್ಮಹತ್ಯೆಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ನಡೆಸಿದಂತಹ ಕಾರ್ಕಳ ನಗರ ಪೊಲೀಸರಿಗೆ ಸುಪನಾತಿ ಸುಂದರಿಯ ಇನ್ನಷ್ಟು ಮದುವೆಯ ಕಥೆಗಳು ಗೊತ್ತಾಗಿದ್ದು ಕೊನೆಗೆ ಆಕೆಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ. ನ್ಯಾಯಾಲಯ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿದ್ದರಿಂದ ಹಿರಿಯಡ್ಕದ ಸಬ್ ಜೈಲಿಗೆ ಬಿಟ್ಟು ಬಂದಿದ್ದಾರೆ.



### ಯಾರೀಕೆ?

ಕಾರ್ಕಳದ ಯುವತಿ ಸೌಮ್ಯ ಶೆಟ್ಟಿ. ವಯಸ್ಸು ಸುಮಾರು 27. ಈ ಪ್ರಾಯದಲ್ಲೇ ಆಡಬಾರದ ಆಟಗಳನ್ನೆಲ್ಲ ಆಡಿ ಇದೀಗ ಆತ್ಮಹತ್ಯೆಗೆ ಪ್ರಚೋದನೆ ಎಂಬ ಪ್ರಕರಣದಲ್ಲಿ ಜೈಲು ಪಾಲಾಗಿದ್ದಾಳೆ. ಇಷ್ಟಕ್ಕೂ ಈಕೆ ಜೈಲು ಪಾಲಾಗಲು ಕಾರಣವಾದ ಅಂಶ ಎಂದರೆ ಆಕೆಯೇ ಒತ್ತಡ ಹೇರಿ ಮದುವೆಯಾಗಿದ್ದ ಸುದೀಪ್ ರೈ ಎಂಬ 32 ರ ಹರೆಯದ ಯುವಕ ಆತ್ಮಹತ್ಯೆ ಮಾಡಿಕೊಂಡದ್ದು. ನಿಜಕ್ಕೂ ಇದು ಆತ್ಮಹತ್ಯೆಯೋ ಅಥವಾ ಕೊಲೆಯೋ ಎಂಬ ಬಗ್ಗೆ ಸಂಶಯಗಳಿವೆ.

ಸೌಮ್ಯ ಶೆಟ್ಟಿ ವಾಸ್ತವವಾಗಿ ಮೇಕಪ್ ಆರ್ಟಿಸ್ಟ್. ತುಂಬಾ ಸುಂದರವಾಗಿದ್ದಾಳೆ. ಅರಳು ಹುರಿದಂತೆ ಮಾತನಾಡುತ್ತಾಳೆ. ಸುಳ್ಳನ್ನು ಸತ್ಯದ ತಲೆಯ ಮೇಲೆ ಹೊಡೆದಂತೆ ಮಾತನಾಡಿ ನಂಬಿಸುವಲ್ಲಿ ನಿಷ್ಣಾತಳು. ಈಕೆ ಇನ್‌ಸ್ಟಾಗ್ರಾಮ್‌ನಲ್ಲಿ ಸಕ್ರಿಯಳಾಗಿದ್ದಾಳೆ. ದಿನಕ್ಕೊಂದು ಪೋಸ್ಟ್ ಹಾಕುತ್ತಿದ್ದಳು. ಇದನ್ನು ಗಮನಿಸಿದ ಯುವಕ ಸುದೀಪ್ ರೈ ಎಂಬ ನತದೃಷ್ಟ. ಎಸ್‌ಎಸ್‌ಎಲ್‌ಸಿವರೆಗೆ ವ್ಯಾಸಂಗ ಮಾಡಿದ್ದ ಸುದೀಪ್ ರೈಯ ಮನೆ ಇರುವುದು ನೆಲ್ಯಾಡಿ ಎಂಬಲ್ಲಿ. ಅವರ ತಂದೆ ದಾಮೋದರ್ ರೈ ಕೃಷಿಕರು. ಮಧ್ಯಮ ವರ್ಗದ ಕುಟುಂಬ. ಮನೆ







ಹುಡುಗಿ ನೋಡುವ ಶಾಸ್ತ್ರವೂ ನಡೆಯಿತು. ಸುದೀಪ್ ರೈಯ ಹೆತ್ತವರು ಮತ್ತು ನಿಕಟ ಸಂಬಂಧಿಕರು ಸೌಮ್ಯ ಶೆಟ್ಟಿಯ ಕಾರ್ಕಳ ಕಾಬೆಟ್ಟುವಿನ ಮನೆಗೆ ಹೋದರು. ಅಲ್ಲಿ ಉಪಚಾರವೂ ನಡೆಯಿತು. ಮದುವೆ ದಿನಾಂಕ ಮತ್ತು ಸ್ಥಳ ನಿಗದಿಯ ಬಗ್ಗೆ ಮಾತುಕತೆ ನಡೆಯಲಿಲ್ಲ. ಎರಡೂ ಮನೆಯವರಿಗೆ ದೈವಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳು ಇದ್ದುದರಿಂದ ಅದು ಮುಗಿದ ನಂತರ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಮದುವೆ ದಿನಾಂಕ ಗೊತ್ತು ಪಡಿಸುವುದು ಎಂದು ತೀರ್ಮಾನ ಆಗಿತ್ತು.

ತದನಂತರದ ಬೆಳವಣಿಗೆಯಲ್ಲಿ ಸೌಮ್ಯ ಶೆಟ್ಟಿಯ ಸೋಶಿಯಲ್ ಮೀಡಿಯಾ ಎಕೌಂಟ್‌ನಲ್ಲಿ ಮದುವೆಯ ಫೋಟೋ ಮತ್ತು ವಿವಾಹ ರಿಜಿಸ್ಟ್ರಿಯ ವಿವರಗಳು ಬಂತೋ ಅದನ್ನು ಬಂಟ್ವಾಳ ಸಮೀಪದ ಸಿದ್ಧಕಟ್ಟೆಯ ಯುವಕನೊಬ್ಬ ಗಮನಿಸಿದ. ಆತನಿಗೆ ಸೌಮ್ಯಶೆಟ್ಟಿ ಹಿನ್ನೆಲೆ ಗೊತ್ತಿತ್ತು. ಅದನ್ನು ಆತ ಸುದೀಪ್‌ರೈಯೊಂದಿಗೆ ಹಂಚಿಕೊಂಡ. ಆಗ ಸುದೀಪ್ ರೈಗೆ ತಾನು ಹೊಂಡಕ್ಕೆ ಬಿದ್ದ ಅನುಭವ ಆಗಿತ್ತು. ಇದೇ ವೇಳೆ ಸೌಮ್ಯ ಶೆಟ್ಟಿಯ ಕಡೆಯವರು ಸುದೀಪ್ ರೈಯ ಮನೆಗೆ ಹೋದರು. ಅವರ ಆಸ್ತಿಪಾಸ್ತಿ, ಸಾಮಾಜಿಕ ಗೌರವ ಎಲ್ಲವನ್ನೂ ತಿಳಿದುಕೊಂಡರು. ಅವರಿಗೆ ಮಿಕ ಬಲೆಗೆ ಬಿದ್ದಿದೆ



ಹೆಣ್ಮಕ್ಕಳಿಗೆ ಮದುವೆಯಾಗಿದೆ. ಸುದೀಪ್‌ಗೂ ಮದುವೆ ಮಾಡಲು ಕನ್ಯೆ ಹುಡುಕುತ್ತಿದ್ದರು. ಸುದೀಪ್ ರೈ ಹೆಚ್ಚಾಗಿ ಇರುತ್ತಿದ್ದದ್ದು ಬೆಳ್ತಂಗಡಿ ಸಮೀಪದ ಲಾಯಿಲದ ಮಾವನ ಮನೆಯಲ್ಲಿ. ಸುದೀಪ್ ಸೋಲಾರ್ ಸಂಸ್ಥೆಯೊಂದರ ಮಾರಾಟ ಪ್ರತಿನಿಧಿಯಾಗಿದ್ದ. ರಿಯಲ್ ಎಸ್ಟೇಟ್ ವ್ಯವಹಾರವನ್ನೂ ಮಾಡುತ್ತಿದ್ದರು. ಕೈಯಲ್ಲಿ ಹಣ ಓಡಾಡುತ್ತಿತ್ತು. ಸ್ವಂತ ಕಾರು ಇತ್ತು. ಸೋಶಿಯಲ್ ಮೀಡಿಯಾದಲ್ಲಿ ಸಕ್ರಿಯರು ಆಗಿದ್ದರು. ಅವರಿಗೆ ಇನ್‌ಸ್ಟಾಗ್ರಾಮ್‌ನಲ್ಲಿ ಪರಿಚಯವಾದವಳೇ ಸೌಮ್ಯ ಶೆಟ್ಟಿ. ಒಂದೇ ಜಾತಿಗೆ ಸೇರಿದವರು. ಆಕೆಯ ಇನ್‌ಸ್ಟಾಗ್ರಾಮ್ ಪೋಸ್ಟ್‌ಗಳನ್ನು ನೋಡಿ ಸುದೀಪ್ ರೈ ಫಿದಾ ಆಗಿದ್ದರು. ಆಕೆಯ ಮೊಬೈಲ್ ನಂಬರನ್ನು ಪಡೆದುಕೊಂಡು ಸಂಪರ್ಕ ಸಾಧಿಸಿದ್ದರು. ತದನಂತರ ಅವರಿಬ್ಬರು ಒಬ್ಬರನೊಬ್ಬರು ಇಷ್ಟಪಡಲು ಆರಂಭಿಸಿದ್ದರು. ಈ ಸಂದರ್ಭದಲ್ಲಿ ಸುದೀಪ್ ರೈ ಅವರು ತನ್ನ ಹೆತ್ತವರೊಂದಿಗೆ ಈ ವಿಚಾರವನ್ನು ಹಂಚಿಕೊಂಡಿದ್ದರು. ಅದಕ್ಕೆ ಅವರೂ ಒಪ್ಪಿಕೊಂಡಿದ್ದರು. ಎರಡೂ ಮನೆಯವರು ಒಪ್ಪಿಕೊಂಡ ನಂತರ ಇನ್ನೇನೂ ಉಳಿದಿರಲಿಲ್ಲ. ಶಾಸ್ತ್ರಸಂಪ್ರದಾಯದ ಪ್ರಕಾರ ಮದುವೆ ಮಾಡುವುದು ನಿಶ್ಚಿತವಾಗಿತ್ತು.

### ಹುಡುಗಿ ನೋಡುವ ಶಾಸ್ತ್ರ

ಎರಡೂ ಮನೆಯವರು ಒಪ್ಪಿದ ನಂತರ ಮನೆಯವರು ಸುದೀಪ್ ರೈಯ ಮನೆಗೆ ಬರುವ ಕಾರ್ಯಕ್ರಮ ಇತ್ತು. ಈ ಮಧ್ಯೆ ಸೌಮ್ಯ ಶೆಟ್ಟಿಯು ಸುದೀಪ್ ರೈಯ ಮೇಲೆ ಒತ್ತಡ ಹೇರಿ ಬೆಳ್ತಂಗಡಿಯ ದೇವಸ್ಥಾನವೊಂದರಲ್ಲಿ ಮದುವೆ ಶಾಸ್ತ್ರ ಮಾಡಿಕೊಂಡು ಆ ದಾಖಲೆಯನ್ನು ಇಟ್ಟುಕೊಂಡು ಪುತ್ತೂರು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ವಿವಾಹ ನೋಂದಣಿಯನ್ನೂ ಮಾಡಿಸಿಕೊಂಡರು. ಈ ವಿಚಾರವನ್ನು ಸೌಮ್ಯ ಶೆಟ್ಟಿ ತನ್ನ ಸೋಶಿಯಲ್ ಮೀಡಿಯಾ ಗ್ರೂಪಿನಲ್ಲಿ ಹಂಚಿಕೊಂಡರು.

### ಎಡವಟ್ಟು ಆದದ್ದೇ ಇಲ್ಲಿ!


ಯಾವಾಗ ಸೌಮ್ಯ ಶೆಟ್ಟಿಯ



ಎನ್ನುವುದು ಅರ್ಥವಾಗಿತ್ತು.

ದಿನಗಳು ಕಳೆದಂತೆ ಸೌಮ್ಯ ಶೆಟ್ಟಿಯ ಕಿರುಕುಳ ಸುದೀಪ್ ರೈಗೆ ಹೆಚ್ಚಾಗತೊಡಗಿತು. ಆದಷ್ಟು ಬೇಗ ವಿವಾಹಕ್ಕೆ ಒತ್ತಾಯಿಸತೊಡಗಿದ್ದಳು. ಆಕೆಯ ಹಿನ್ನೆಲೆ ಗೊತ್ತಾಗಿದ್ದರಿಂದ ಸುದೀಪ್ ರೈ ಒಂದೆರಡು ದಿನಗಳ ಕಾಲ ಒತ್ತಡದಿಂದ ಮೊಬೈಲ್ ಸ್ವಿಚ್‌ಆಫ್ ಮಾಡಿಕೊಂಡಿದ್ದ. ಆಗ ಕೆರಳಿದ ಸೌಮ್ಯ ಶೆಟ್ಟಿ ತನ್ನ ದ್ವಿಚಕ್ರ ವಾಹನದಲ್ಲಿ ಆತನ ಮನೆಗೆ ಹೋದಳು. ಸ್ಥಳೀಯವಾಗಿ ಬ್ಯಾಂಕಿನ

☞ 10



Draft Summary
[FORM - 1]
[See rule:4(2)]
MEMORANDUM OF MARRIAGE

Joint Photo of the Bride and BrideGroom

| | |
|---|---|
| 1. Date of Marriage | 06-02-2026 |
| 2.Place of Marriage (with sufficient particulars to locate the place) | Shree Sathyanarayana Temple Kuthrottu, Shree Sathyanarayana Temple Kuthrottu, Mangalore, Beltangadi, Beltangadi Hobli, Nada, Karnataka 574214 |
| 3.(a) Full name of the bridegroom | B Sudeep |
| (b) Name of the Father | B Damodar |
| (c) Name of the Mother | Pushpalatha |
| (d) His age | 30 |
| (e) Usual place of residence | Beedi School House, Padubettu, Mangalore, Puttur, Uppinangadi Hobli, Nelyadi, Karnataka 574422 |
| (f) Address | Beedi School House, Padubettu, Mangalore, Puttur, Uppinangadi Hobli, Nelyadi, Karnataka 574422 |
| (g) Status of the bridegroom at the time of Marriage. Whether unmarried/ widower/ divorced: | Unmarried |
| (h) Signature of bridegroom, with date: | |
| 4.(a) Full name of the bride | Sowmya |
| (b) Name of the Father | Harish Shetty |
| (c) Name of the Mother | Mallika |
| (d) Her age | 28 |
| (e) Usual place of residence | Sowmya Nivasa, Banglagudde, Udupi, Karkala, Karkala Hobli, Kukkundoor, Karnataka 574104 |
| (f) Address | Sowmya Nivasa, Banglagudde, Udupi, Karkala, Karkala Hobli, Kukkundoor, Karnataka 574104 |
| (g) Status of the bride at the time of Marriage. Whether unmarried/ widow/ divorced: | Unmarried |
| (h) Signature of bride, with date: | |
| 5.(a) Full name of the witness: (Specify the | Sri Harish Shetty, Father of Bride |



Government of Karnataka
Certificate of Registration of Hindu Marriage
FORM II-A
[See Rule 4(5)]
(Under the Hindu Marriage Act, 1955)
(Central Act, XXV of 1955)

This is to certify that Smt. Sowmya Daughter of Harish Shetty Residing at Sowmya Nivasa, Banglagudde, Udupi, Karkala, Karkala Hobli, Kukkundoor, Karnataka-574104 and Sri B Sudeep Son of B Damodar Residing at Beedi School House, Padubettu, Mangalore, Puttur, Uppinangadi Hobli, Nelyadi, Karnataka-574422 have furnished the particulars in memorandum declaring that their marriage has been solemnised on 06-02-2026 and that the same has been registered on 17-02-2026 entered as PUT-HM00858-2025-26

Digitally signed by Kishor Kumar H S
Date: 2026.02.17 18:49:15 +05:30
Reason: Marriage Registration
Location: Puttur SR

Signature of Marriage Officer

Station : Puttur
Marriage Number : PUT-HM00858-2025-26
Date : 17-02-2026

# ಲವರ್‌ನೊಂದಿಗೆ ಸೇರಿ ಪತಿಗೆ ಮಹೂರ್ತವಿಟ್ಟ ಖತರ್ನಾಕ್ ಪತ್ನಿ!
# ಪೊಲೀಸರ ಚಾಕಚಕ್ಯ ತನಿಖೆಯಿಂದ ಬಯಲಾದ ಕೊಲೆ ರಹಸ್ಯ



ಆರೋಪಿ ರೇಷ್ಮಾ

**ದಾಂಪತ್ಯ ಜೀವನದಲ್ಲಿ ಉಂಟಾದ ಅಸಮಾಧಾನ, ಅಕ್ರಮ ಸಂಬಂಧ ಮತ್ತು ದ್ವೇಷದ ಅಂತ್ಯ ಹೇಗೆ ಭೀಕರ ರೂಪ ತಾಳಬಹುದು ಎಂಬುದಕ್ಕೆ ಗೌರಿಬಿದನೂರಿನಲ್ಲಿ ನಡೆದ ಈ ಕೊಲೆ ಪ್ರಕರಣ ಜೀವಂತ ಉದಾಹರಣೆಯಾಗಿದೆ. ಪತ್ನಿಯೇ ತನ್ನ ಪ್ರಿಯಕರನೊಂದಿಗೆ ಸೇರಿ ಪತಿಯನ್ನು ಕೊಲೆ ಮಾಡಲು ಸಂಚು ರೂಪಿಸಿ, ಅದನ್ನು ನಿಖರವಾಗಿ ಜಾರಿಗೊಳಿಸಿರುವ ಘಟನೆ ಜಿಲ್ಲೆಯಲ್ಲಿ ಭಾರೀ ಸಂಚಲನ ಮೂಡಿಸಿದೆ. ಆರಂಭದಲ್ಲಿ ಅನುಮಾನಾಸ್ಪದ ಸಾವು ಎಂದು ಕಂಡುಬಂದ ಪ್ರಕರಣವನ್ನು ಪೊಲೀಸರು ಸೂಕ್ಷ್ಮವಾಗಿ ತನಿಖೆ ನಡೆಸಿ ಕೊಲೆಯ ಹಿಂದಿನ ಕ್ರೂರ ಸತ್ಯವನ್ನು ಬಯಲಿಗೆಳೆದಿದ್ದಾರೆ.**

**ಚಿಕ್ಕಬಳ್ಳಾಪುರ**
ಎನ್. ಬ್ರಹ್ಮಚಾರಿ


ಕೊಲೆಯಾದ ಶಿವಕುಮಾರ್ ಅ|| ಸಾಧಿಕ್

ಗೌರಿಬಿದನೂರು ನಗರದ ವಿ.ವಿ. ಪುರಂ ಬಡಾವಣೆಯಲ್ಲಿ ಮಾರ್ಚ್ 27ರಂದು 45 ವರ್ಷದ ಶಿವಕುಮಾರ್ ಅಲಿಯಾಸ್ ಸಾಧಿಕ್ ಭಾಷಾ ಶವವಾಗಿ ಪತ್ತೆಯಾಗಿದ್ದ. ಘಟನೆ ನಡೆದ ಸ್ಥಳಕ್ಕೆ ಆಗಮಿಸಿದ ಪೊಲೀಸರು ಪ್ರಾಥಮಿಕವಾಗಿ ಪರಿಶೀಲನೆ ನಡೆಸಿದಾಗ, ಮೃತದೇಹದ ಮೇಲೆ ಕಂಡುಬಂದ ಗಾಯಗಳ ಗುರುತುಗಳು ಹಾಗೂ ಮನೆಯ ಒಳಗಿನ ಪರಿಸ್ಥಿತಿ ಹಲವು ಪ್ರಶ್ನೆಗಳನ್ನು ಹುಟ್ಟಿಸಿತು. ಸಹಜ ಸಾವು ಎಂದು ನಿರ್ಧರಿಸಲು ಸಾಧ್ಯವಾಗದ ಕಾರಣ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತನಿಖೆಯನ್ನು ವೇಗಗೊಳಿಸಲಾಯಿತು. ಸ್ಥಳದಲ್ಲಿದ್ದ ಪತ್ನಿ ರೇಷ್ಮಾಳ ವರ್ತನೆಯೂ ಪೊಲೀಸರಿಗೆ ಅನುಮಾನಾಸ್ಪದವಾಗಿ ಕಂಡುಬಂದಿತು.

ಶಿವಕುಮಾರ್ ಮೂಲತಃ ದೊಡ್ಡಬಳ್ಳಾಪುರ ತಾಲ್ಲೂಕಿನ ಬಿಸುವನಹಳ್ಳಿ ಗ್ರಾಮದವನು. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ರೇಷ್ಮಾಳನ್ನು ಪ್ರೀತಿಸಿ ಅಂತರ್ಧರ್ಮೀಯವಾಗಿ ವಿವಾಹವಾಗಿದ್ದ. ಆರಂಭದಲ್ಲಿ ದಂಪತಿಗಳ ಜೀವನ ಸುಖಕರವಾಗಿದ್ದರೂ, ಕಾಲಕ್ರಮೇಣ ಅವರ ನಡುವಿನ ಸಂಬಂಧದಲ್ಲಿ




ಎಸ್ಪಿ ಕುಶಾಲ್ ಚೌಕ್ಸೆ

ಬಿರುಕುಗಳು ಮೂಡತೊಡಗಿದವು. ಶಿವಕುಮಾರ್ ಕೆಲಸಕ್ಕೆ ಹೋಗದೆ ಮನೆಯಲ್ಲೇ ಕಾಲ ಕಳೆಯುತ್ತಿದ್ದು, ಪತ್ನಿಯ ಆದಾಯದ ಮೇಲೆ ಅವಲಂಬಿತನಾಗಿದ್ದನೆಂದು ತಿಳಿದುಬಂದಿದೆ. ಇದಲ್ಲದೆ ಮದ್ಯಪಾನದ ಚಟ ಹೆಚ್ಚಾಗಿ, ನಿತ್ಯವೂ ಕುಡಿದು ಬಂದು ಮನೆಯಲ್ಲಿ ಜಗಳ ಮಾಡುವುದು ಸಾಮಾನ್ಯವಾಗಿತ್ತು.

ಈ ರೀತಿಯ ವರ್ತನೆಗಳಿಂದ ಬೇಸತ್ತ ರೇಷ್ಮಾಳ ಮನಸ್ಸಿನಲ್ಲಿ ಗಂಡನ ವಿರುದ್ಧ ಅಸಹನೆ ಹೆಚ್ಚಾಗತೊಡಗಿತು. ಇದೇ ಸಮಯದಲ್ಲಿ ಆಕೆಗೆ ಶಾರುಖ್ ಎಂಬ ಯುವಕನೊಂದಿಗೆ ಪರಿಚಯವಾಗಿ, ಅದು ಕ್ರಮೇಣ ಅಕ್ರಮ ಸಂಬಂಧವಾಗಿ ಬೆಳೆದಿತು. ಪತಿಯೊಂದಿಗೆ ದಿನನಿತ್ಯದ ಜಗಳಗಳು, ಮಾನಸಿಕ ಒತ್ತಡ ಮತ್ತು ಪ್ರಿಯಕರನ ಪ್ರಭಾವ ಈ ಎಲ್ಲಾ ಅಂಶಗಳು ಸೇರಿ ರೇಷ್ಮಾಳನ್ನು ಅಪರಾಧದ ದಾರಿಗೆ ತಳ್ಳಿದವು. ಕೊನೆಗೆ ಗಂಡನನ್ನು ಶಾಶ್ವತವಾಗಿ ದೂರ ಮಾಡುವ ನಿರ್ಧಾರಕ್ಕೆ ಬಂದ ಆಕೆ, ಪ್ರಿಯಕರನೊಂದಿಗೆ ಸೇರಿ ಕೊಲೆ ಸಂಚು ರೂಪಿಸಿದ್ದಾಳೆ.

ಸಂಚು ರೂಪಿಸುವ ಸಂದರ್ಭದಲ್ಲಿ ಶಾರುಖ್ ತನ್ನ ಸ್ನೇಹಿತರ ಸಹಾಯವನ್ನು ಪಡೆದುಕೊಂಡನು. ಆಂಧ್ರಪ್ರದೇಶದ ತೆನಾಲಿಯಿಂದ ಪಾರ್ಥ, ಅಕ್ಷಯ್, ಆನಂದಬಾಬು ಮತ್ತು ರಾಮು ಎಂಬ ನಾಲ್ವರನ್ನು ಗೌರಿಬಿದನೂರಿಗೆ ಕರೆಸಿಕೊಂಡನು. ಕೊಲೆಗೆ ಸೂಕ್ತ ಸಮಯ, ವಿಧಾನ ಮತ್ತು ತಪ್ಪಿಸಿಕೊಳ್ಳುವ ಮಾರ್ಗಗಳ ಕುರಿತು ಪೂರ್ವಯೋಜನೆ ಮಾಡಲಾಗಿತ್ತು. ಎಲ್ಲಾ ವಿವರಗಳನ್ನು ನಿಖರವಾಗಿ ಯೋಜಿಸಿ, ಘಟನೆ ನಡೆದ ದಿನ ರಾತ್ರಿ ಸಮಯವನ್ನು ಆಯ್ಕೆ ಮಾಡಿದರು.

ಯೋಜನೆಯಂತೆ ಆರೋಪಿಗಳು ಶಿವಕುಮಾರ್ ಮನೆಗೆ ನುಗ್ಗಿದರು. ಮನೆಯಲ್ಲಿದ್ದ ಮಕ್ಕಳನ್ನು ಬೇರೆ ಕೊಠಡಿಗೆ ಕಳುಹಿಸಿ, ಬಾಗಿಲು ಮುಚ್ಚಿಕೊಂಡು ಮಲಗಿದ್ದ ಶಿವಕುಮಾರ್ ಮೇಲೆ ಏಕಾಏಕಿ ದಾಳಿ ನಡೆಸಿದರು. ಅವನ ಕೈಕಾಲು ಹಾಗೂ ಬಾಯಿಯನ್ನು ಬಿಗಿಯಾಗಿ ಹಿಡಿದು, ಕಟ್ಟಿಗೆ ಮತ್ತು ಕಬ್ಬಿಣದ ರಾಡ್ ಬಳಸಿ ಹಿಗ್ಗಾಮುಗ್ಗಾ ಹಲ್ಲೆ ಮಾಡಿದರು. ಯಾವುದೇ ರೀತಿಯ ಪ್ರತಿರೋಧ ಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿ ಶಿವಕುಮಾರ್ ಸ್ಥಳದಲ್ಲೇ ಪ್ರಾಣ ಕಳೆದುಕೊಂಡನು. ಈ ಕೊಲೆ ಕ್ರೂರತೆಯ ತೀವ್ರತೆಯನ್ನು ನೋಡಿದರೆ, ಅದು ಪೂರ್ವಯೋಜಿತವಾಗಿದ್ದು ಸ್ಪಷ್ಟವಾಗುತ್ತದೆ.


ಆರೋಪಿ ಶಾರುಖ್

ಕೊಲೆ ನಡೆದ ಬಳಿಕ ಆರೋಪಿಗಳು ಸ್ಥಳದಿಂದ ಪರಾರಿಯಾದರು. ಪತ್ನಿ ರೇಷ್ಮಾ ಮಾತ್ರ ಏನೂ ತಿಳಿಯದಂತೆ ನಡೆದುಕೊಂಡು ಪ್ರಕರಣವನ್ನು ತಪ್ಪು ದಾರಿಗೆ ತಳ್ಳಲು ಪ್ರಯತ್ನಿಸಿದ್ದಾಳೆ. ಆದರೆ ಪೊಲೀಸರ ಅನುಭವ ಮತ್ತು ಪರಿಶೀಲನಾ ದೃಷ್ಟಿಯಿಂದ ಆಕೆಯ ವರ್ತನೆ ಸಂಶಯಾಸ್ಪದವಾಗಿ ಕಂಡಿತು. ವಿಚಾರಣೆ ವೇಳೆ ನೀಡಿದ ಹೇಳಿಕೆಗಳಲ್ಲಿ ವೈಷಮ್ಯ ಕಂಡುಬಂದ ಹಿನ್ನೆಲೆಯಲ್ಲಿ ಪೊಲೀಸರು ಆಕೆಯನ್ನು ಕಠಿಣವಾಗಿ ವಿಚಾರಣೆ ನಡೆಸಿದರು.

ಕೊನೆಗೆ ರೇಷ್ಮಾ ಸತ್ಯವನ್ನು ಬಿಚ್ಚಿಟ್ಟಳು. ತನ್ನ ಪ್ರಿಯಕರ ಶಾರುಖ್ ಜೊತೆಗೂಡಿ ಪತಿಯನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಳು. ಈ ಒಪ್ಪಿಗೆಯ ನಂತರ ತನಿಖೆಗೆ ಸ್ಪಷ್ಟ ದಿಕ್ಕು ದೊರಕಿತು. ತಕ್ಷಣವೇ ಆರೋಪಿಗಳ ಪತ್ತೆಗಾಗಿ ವಿಶೇಷ ತಂಡ ರಚಿಸಿ ಕಾರ್ಯಾಚರಣೆ ಆರಂಭಿಸಲಾಯಿತು.

ಆರೋಪಿಗಳು ಆಂಧ್ರಪ್ರದೇಶದ ತೆನಾಲಿಯಲ್ಲಿ ತಲೆಮರೆಸಿಕೊಂಡಿರುವ ಮಾಹಿತಿ ಲಭ್ಯವಾಗುತ್ತಿದ್ದಂತೆ, ಪೊಲೀಸರು ಅಲ್ಲಿ ದಾಳಿ ನಡೆಸಿ ಎಲ್ಲರನ್ನು ಬಂಧಿಸಿದರು. ಶಾರುಖ್ (23), ಪಾರ್ಥ (20), ಅಕ್ಷಯ್ (20), ಆನಂದಬಾಬು (29) ಮತ್ತು ರಾಮು (28)ರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕೊಲೆ ಪೂರ್ವಯೋಜಿತ ಸಂಚುವಿನ ಫಲಿತಾಂಶವಾಗಿರುವುದು ದೃಢಪಟ್ಟಿತು. ಆರೋಪಿಗಳ ಬಂಧನದೊಂದಿಗೆ ಪ್ರಕರಣ ಸಂಪೂರ್ಣವಾಗಿ ಬಯಲಾಯಿತು.

ಈ ಪ್ರಕರಣದ ಭೇದನೆಯಲ್ಲಿ ಗೌರಿಬಿದನೂರು ಪೊಲೀಸ್ ವೃತ್ತ ನಿರೀಕ್ಷಕ ಅಂಜನ್, ಎಎಸ್‌ಐ ಹರೀಶ್, ಟೌನ್ ಪಿಎಸ್‌ಐ ವರಲಕ್ಷ್ಮಿ ಹಾಗೂ ಸಿಬ್ಬಂದಿಗಳ ತಂಡ ಪ್ರಮುಖ ಪಾತ್ರ ವಹಿಸಿದೆ. ಜಿಲ್ಲಾ ಎಸ್ಪಿ ಕುಶಾಲ್ ಚೌಕ್ಸೆ ಅವರ ಮಾರ್ಗದರ್ಶನದಲ್ಲಿ ನಡೆದ ಈ ಕಾರ್ಯಾಚರಣೆ ಪೊಲೀಸರ ತ್ವರಿತ ಮತ್ತು ನಿಖರ ಕಾರ್ಯಕ್ಷಮತೆಯನ್ನು ಮತ್ತೊಮ್ಮೆ ತೋರಿಸಿದೆ. ಅತಿ ಕಡಿಮೆ ಅವಧಿಯಲ್ಲಿ ಪ್ರಕರಣವನ್ನು ಭೇದಿಸಿರುವುದು ಪೊಲೀಸರ ಪರಿಶ್ರಮಕ್ಕೆ ಸಾಕ್ಷಿಯಾಗಿದೆ.

ಈ ಘಟನೆಯು ಸಮಾಜಕ್ಕೆ ಮಹತ್ವದ ಪಾಠವನ್ನೂ ನೀಡುತ್ತದೆ. ದಾಂಪತ್ಯ ಜೀವನದಲ್ಲಿ ಉಂಟಾಗುವ ಸಮಸ್ಯೆಗಳನ್ನು ಸಂವಾದದ ಮೂಲಕ ಪರಿಹರಿಸದೇ, ತಪ್ಪು ನಿರ್ಧಾರಗಳನ್ನು ತೆಗೆದುಕೊಂಡರೆ ಅದರ ಪರಿಣಾಮಗಳು ಎಷ್ಟು ಭೀಕರವಾಗಿರಬಹುದು ಎಂಬುದನ್ನು ಇದು ತೋರಿಸುತ್ತದೆ. ಅಕ್ರಮ ಸಂಬಂಧಗಳು ಮತ್ತು ದ್ವೇಷವು ಕೊನೆಗೆ ಒಂದು ಜೀವವನ್ನೇ ಕಳೆದುಹಾಕುವ ಮಟ್ಟಕ್ಕೆ ತಲುಪಬಹುದು ಎಂಬುದಕ್ಕೆ ಈ ಪ್ರಕರಣ ಸ್ಪಷ್ಟ ಉದಾಹರಣೆ. ಒಟ್ಟಿನಲ್ಲಿ, ಗೌರಿಬಿದನೂರಿನ ಈ ಭೀಕರ ಕೊಲೆ ಪ್ರಕರಣ ಕುಟುಂಬ ಮೌಲ್ಯಗಳ ಕುಸಿತ,



ಮಾನಸಿಕ ಒತ್ತಡ ಮತ್ತು ಅಸಹನೆಯ ದುಷ್ಪರಿಣಾಮಗಳನ್ನು ಎತ್ತಿಹಿಡಿಯುತ್ತದೆ. ಕಾನೂನಿನ ಕಣ್ಣು ತಪ್ಪಿಸಿ ಯಾವುದೇ ಅಪರಾಧವೂ ಹೆಚ್ಚು ಕಾಲ ಮರೆಮಾಚಲು ಸಾಧ್ಯವಿಲ್ಲ ಎಂಬುದನ್ನು ಈ ಪ್ರಕರಣ ಮತ್ತೊಮ್ಮೆ ಸಾಬೀತುಪಡಿಸಿದೆ. ಪೊಲೀಸರ ಚಾಕಚಕ್ಯ ತನಿಖೆ ಮತ್ತು ಸಮಯೋಚಿತ ಕ್ರಮದಿಂದ ಸತ್ಯ ಹೊರಬಂದಿದ್ದು, ಅಪರಾಧಿಗಳಿಗೆ ಕಾನೂನು ಶಿಕ್ಷೆ ಅನಿವಾರ್ಯವಾಗಿದೆ.


ಆರೋಪಿಗಳಾದ ಅಕ್ಷಯ್, ರಾಮು, ಪಾರ್ಥ ಹಾಗೂ ಆನಂದ



ಪೊಲೀಸ್ ಕಸ್ಟಡಿಯಲ್ಲಿ ಆರೋಪಿಗಳು

## ಮೂಗ ಪ್ರೇಮಿಗಳ ಕ್ರೂರ ಸಂಚು ಬಯಲು ಮಾಡಿದ ನಂಜನಗೂಡು ಪೊಲೀಸರು

# ವಿಡಿಯೋ ಕಾಲ್ ಅಕ್ರಮ ಸಂಬಂಧಕ್ಕೆ ಬಲಿಯಾದ ಪತಿ!

**ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೇವೀರಮ್ಮನಹಳ್ಳಿ ಗ್ರಾಮದಲ್ಲಿ ನಡೆದಿರುವ ಈ ಪ್ರಕರಣ ಸಾಮಾನ್ಯ ಕೊಲೆ ಪ್ರಕರಣವಲ್ಲ. ಇದು ಸಂಪೂರ್ಣವಾಗಿ 'ಮೌನದ ಭಾಷೆ'ಯಲ್ಲಿ ರೂಪುಗೊಂಡು, ಸಂಜ್ಞೆಗಳ ಮೂಲಕವೇ ಸಂಚು ರೂಪಿಸಿ, ಭೀಕರ ಅಂತ್ಯ ಕಂಡ ಅಪರೂಪದ ಕ್ರೈಮ್ ಸ್ಟೋರಿ. ಕೊಲೆಯಾದ ವ್ಯಕ್ತಿ ಮಾತು ಬಾರದವನು, ಆರೋಪಿಗಳಾದ ಪತ್ನಿ, ಪ್ರಿಯಕರ ಹಾಗೂ ಸಹಚರವೂ ಮಾತು ಬಾರದವರೇ ಎಂಬುದು ಈ ಪ್ರಕರಣವನ್ನು ಇನ್ನಷ್ಟು ವಿಚಿತ್ರ ಮತ್ತು ಸವಾಲಿನದಾಗಿ ಮಾಡಿದೆ. ಪೊಲೀಸ್ ತನಿಖೆಯ ದೃಷ್ಟಿಯಿಂದಲೂ ಇದು ಅಪರೂಪದ ಹಾಗೂ ಗಂಭೀರ ಪ್ರಕರಣವಾಗಿದ್ದು, ತಾಂತ್ರಿಕ ಸಾಕ್ಷಿ ಮತ್ತು ತಜ್ಞರ ನೆರವಿನಿಂದ ಭೇದಿಸಲಾಗಿದೆ.**


ಕೊಲೆಯಾದ ಸ್ವಾಮಿ


ಆರೋಪಿ ಸವಿತಾ

ಮೈಸೂರು

✍ ಟಿ.ಎನ್. ಕೃಷ್ಣಕುಮಾರ್

ಸ್ವಾಮಿ (28) ಎಂಬ ಯುವಕ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದನು. ಆತನು ಸಹ ಮಾತು ಬಾರದವನೇ ಆಗಿದ್ದು, ಮೈಸೂರಿನ ಮಂಡಕಳ್ಳಿ ಗ್ರಾಮದ ಸವಿತಾ ಎಂಬ ಯುವತಿಯನ್ನು ಪರಿಚಯವಾಗಿ ಪ್ರೀತಿಸಿ ವಿವಾಹವಾಗಿದ್ದನು. ಸವಿತಾ ಕೂಡ ಮಾತು ಬಾರದವಳೇ ಆಗಿದ್ದರೂ, ಇಬ್ಬರ ನಡುವೆ ಉತ್ತಮ ಬಾಂಧವ್ಯ ಬೆಳೆದು ಕುಟುಂಬ ಜೀವನ ಸುಗಮವಾಗಿ ಸಾಗುತ್ತಿತ್ತು. ಇವರಿಗೆ ಒಂದು ಹೆಣ್ಣು ಮಗು ಜನಿಸಿದ್ದು, ಕುಟುಂಬದಲ್ಲಿ ಸಂತೋಷ ನೆಲೆಸಿತ್ತು. ಆದರೆ ಮೂರು ವರ್ಷಗಳಾದರೂ ಮಗುವಿಗೆ ಮಾತು ಬರದ ಹಿನ್ನಲೆ ದಂಪತಿ ಮೈಸೂರಿನ ವಾಕ್ ಮತ್ತು ಶ್ರವಣ ಸಂಸ್ಥೆಗೆ ಚಿಕಿತ್ಸೆಗಾಗಿ ಹೋಗುತ್ತಿದ್ದರು. ಇದೇ ಸಂದರ್ಭದಲ್ಲಿ ಅವರ ಜೀವನಕ್ಕೆ ಹೊಸ ವ್ಯಕ್ತಿಯ ಪ್ರವೇಶವಾಗಿದ್ದು, ಅದೇ ಮುಂದೆ ಈ ದುರಂತಕ್ಕೆ ಕಾರಣವಾಯಿತು.


ಪತ್ನಿ ಸವಿತಾ ಹಾಗೂ ಮಗುವಿನೊಂದಿಗೆ ಸ್ವಾಮಿ

ಚಿಕಿತ್ಸೆಗಾಗಿ ಭೇಟಿ ನೀಡುತ್ತಿದ್ದ ಸಮಯದಲ್ಲಿ ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕಿನ ಹನುಮಾಪುರ ಗ್ರಾಮದ ಶ್ರೀನಿವಾಸ ಎಂಬಾತ ಇವರಿಗೆ ಪರಿಚಯವಾಗಿದ್ದನು. ಆತನು ಸಹ ಮಾತು ಬಾರದವನಾಗಿದ್ದು, ತನ್ನ ಸ್ನೇಹಿತ ಗಂಗಾಧರನೊಂದಿಗೆ ಸಂಪರ್ಕದಲ್ಲಿದ್ದನು. ಮೊದಲಿಗೆ ಸಹಾನುಭೂತಿಯ ನೆಲೆಯಲ್ಲಿ ಸ್ವಾಮಿ ಕುಟುಂಬಕ್ಕೆ ನೆರವು ನೀಡುತ್ತಿದ್ದ ಶ್ರೀನಿವಾಸ, ವಿಶೇಷವಾಗಿ ಮಗುವಿನ ಚಿಕಿತ್ಸೆಗಾಗಿ ಹಣಕಾಸಿನ ಸಹಾಯ ಮಾಡುತ್ತಿದ್ದನು. ಈ ಸಹಾಯವೇ ನಿಧಾನವಾಗಿ ಸವಿತಾಳೊಂದಿಗೆ ಆತನ ಆತ್ಮೀಯತೆಯನ್ನು ಹೆಚ್ಚಿಸಿತು. ಮಾತು ಇಲ್ಲದಿದ್ದರೂ ಸಂಜ್ಞೆಗಳ ಮೂಲಕವೇ ಇವರಿಬ್ಬರ ನಡುವೆ ಸಂಭಾಷಣೆ ನಡೆಯುತ್ತಿದ್ದು, ವಿಡಿಯೋ ಕಾಲ್ ಮೂಲಕ ಅವರ ಸಂಪರ್ಕ ಮತ್ತಷ್ಟು ಗಾಢವಾಯಿತು.


ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ

ಸಮಯ ಕಳೆದಂತೆ ಈ ಸ್ನೇಹ ಅಕ್ರಮ ಸಂಬಂಧಕ್ಕೆ ತಿರುಗಿದ್ದು, ಸವಿತಾ ತನ್ನ ಪತಿಯನ್ನೇ ಕಡೆಗಣಿಸಿ ಶ್ರೀನಿವಾಸನತ್ತ ಹೆಚ್ಚು ಆಕರ್ಷಿತಳಾಗಿದ್ದಾಳೆ. ಆಗಾಗ ಕುಣಿಗಲ್ ಭಾಗಕ್ಕೆ ಹೋಗಿ ಬರುವ ಮಟ್ಟಿಗೆ ಈ ಸಂಬಂಧ ಬೆಳೆದಿತ್ತು. ಪತ್ನಿಯ ಈ ವರ್ತನೆ ಗಮನಿಸಿದ ಸ್ವಾಮಿ, ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದನು. ಆದರೆ ಈ ವಿರೋಧವೇ ಅವನಿಗೆ ಜೀವಕ್ಕೆ ಅಪಾಯವಾಗುತ್ತದೆ ಎಂಬುದನ್ನು ಆತನು ಊಹಿಸಿರಲಿಲ್ಲ. ಪತಿಯನ್ನು ತಮ್ಮ ಸಂಬಂಧಕ್ಕೆ ಅಡ್ಡಿಯಾಗುತ್ತಿರುವ ವ್ಯಕ್ತಿಯೆಂದು ಕಂಡ ಸವಿತಾ ಮತ್ತು ಶ್ರೀನಿವಾಸ, ಅವನನ್ನು ಶಾಶ್ವತವಾಗಿ ದೂರ ಮಾಡುವ ಸಂಚು ರೂಪಿಸಿದರು.

ಈ ಸಂಚಿನಲ್ಲಿ ಶ್ರೀನಿವಾಸ ತನ್ನ ಸ್ನೇಹಿತ ಗಂಗಾಧರನನ್ನೂ ಸೇರಿಸಿಕೊಂಡನು. ಮೂವರು ಸೇರಿ ಫೆಬ್ರವರಿ 12ರಂದು ಸ್ವಾಮಿಯನ್ನು ಕುಣಿಗಲ್ ಭಾಗಕ್ಕೆ ಕರೆಸಿಕೊಳ್ಳುವ ಯೋಜನೆ ರೂಪಿಸಿದರು. ಹಣ ಸಹಾಯ ಮಾಡುವ ನೆಪದಲ್ಲಿ ಸ್ವಾಮಿಯನ್ನು ಕರೆಸಿಕೊಂಡು, ಆತನೊಂದಿಗೆ ಮದ್ಯಪಾನ ಪಾರ್ಟಿ ನಡೆಸಿದರು. ಮದ್ಯದ ಅಮಲಿನಲ್ಲಿ ಸ್ವಾಮಿ ಅಸಹಾಯಕರಾಗಿದ್ದಾಗ, ಮೂವರು ಸೇರಿ ಅವನ ಮೇಲೆ ದಾಳಿ ಮಾಡಿ ಕೊಲೆಗೈದರು. ನಂತರ ಶವವನ್ನು ಪತ್ತೆಯಾಗದಂತೆ ಮಾಡಲು ಸೊಂಟಕ್ಕೆ ಕಲ್ಲು ಕಟ್ಟಿ ಬಾವಿಗೆ ಎಸೆದರು. ಈ ರೀತಿಯಾಗಿ ಸಂಪೂರ್ಣವಾಗಿ ಸಂಜ್ಞೆಗಳ ಮೂಲಕವೇ ಸಂಚು ರೂಪಿಸಿ, ಯಾವುದೇ ಶಬ್ದವಿಲ್ಲದೆ ಈ ಕೊಲೆ ನಡೆದಿತ್ತು.


ಮೃತ ಸ್ವಾಮಿಯ ತಾಯಿ ಹಾಗೂ ಸಂಬಂಧಿ

ಕೊಲೆ ಮಾಡಿದ ಬಳಿಕ ಸವಿತಾ ತನ್ನ ಮೇಲಿನ ಅನುಮಾನ ತಪ್ಪಿಸಲು ನಾಟಕೀಯವಾಗಿ ವರ್ತಿಸಿದ್ದಾಳೆ. ಪತಿ ಕಾಣೆಯಾಗಿದ್ದಾನೆ ಎಂದು ನಂಜನಗೂಡು ಗ್ರಾಮಾಂತರ ಠಾಣೆಗೆ ದೂರು ನೀಡಲು ಬಂದಿದ್ದಾಳೆ. ಮೊದಲಿಗೆ ಮಾತು ಬಾರದ ವ್ಯಕ್ತಿಯ ದೂರು ಎಂಬ ಕಾರಣಕ್ಕೆ ಪೊಲೀಸರು ಹೆಚ್ಚಿನ ಗಮನ ಹರಿಸದಿದ್ದರೂ, ನಂತರ ಮಿಸ್ಸಿಂಗ್ ಕಂಪ್ಲೇಂಟ್ ದಾಖಲಿಸಿ ತನಿಖೆ ಪ್ರಾರಂಭಿಸಿದರು. ಸವಿತಾ ಆಗಾಗ ಠಾಣೆಗೆ ಬಂದು ಪತಿಯನ್ನು ಹುಡುಕಿ ಕೊಡಿ ಎಂದು ಮನವಿ ಮಾಡುತ್ತಿದ್ದಳು. ಈ ವರ್ತನೆ ಪೊಲೀಸರಿಗೆ ಆರಂಭದಲ್ಲಿ ನಂಬಿಕೆ ಮೂಡಿಸಿದರೂ, ನಂತರ ಅವಳ ವರ್ತನೆಯಲ್ಲಿ ಕಂಡ ಬದಲಾವಣೆ ಅನುಮಾನ ಹುಟ್ಟಿಸಿತು.


ಪೊಲೀಸರು ಸ್ವಾಮಿಯ ಮೊಬೈಲ್ ದಾಖಲೆಗಳನ್ನು ಪರಿಶೀಲಿಸಿದಾಗ, ಸವಿತಾ ಮತ್ತು ಶ್ರೀನಿವಾಸ ನಡುವಿನ ಅನೇಕ ವಿಡಿಯೋ ಕಾಲ್ ಸಂಭಾಷಣೆಗಳು ಬೆಳಕಿಗೆ ಬಂದವು. ಇದರಿಂದ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿತು. ಆದರೆ ಇಲ್ಲಿ ದೊಡ್ಡ ಸವಾಲು ಏನೆಂದರೆ, ಆರೋಪಿಗಳೆಲ್ಲರೂ ಮಾತು ಬಾರದವರಾಗಿದ್ದರಿಂದ ವಿಚಾರಣೆ ನಡೆಸುವುದು ಬಹಳ ಕಷ್ಟವಾಗಿತ್ತು. ಅವರ ಸಂಜ್ಞೆಗಳನ್ನು ಅರ್ಥಮಾಡಿಕೊಳ್ಳುವುದು ಪೊಲೀಸರಿಗೆ ಸಾಧ್ಯವಾಗುತ್ತಿರಲಿಲ್ಲ.


ಸವಿತಾ ಲವರ್ ಶ್ರೀನಿವಾಸ


ಕೊಲೆಗೆ ಸಹಕರಿಸಿದ ಗಂಗಾಧರ್

### ಮಾತಿಲ್ಲದ ಹಂತಕರ ಭೀಕರ ಸಂಚು ಬಹಿರಂಗ!

ಈ ಸಂದರ್ಭದಲ್ಲಿ ಪೊಲೀಸರು ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ತಜ್ಞರ ನೆರವು ಪಡೆದರು. ತಜ್ಞರು ಆರೋಪಿಗಳ ಸಂಜ್ಞೆಗಳ ಭಾಷೆಯನ್ನು ಅರ್ಥಮಾಡಿಕೊಂಡು ಪೊಲೀಸರಿಗೆ ವಿವರಿಸಿದರು. ತೀವ್ರ ವಿಚಾರಣೆ ಮತ್ತು ತಾಂತ್ರಿಕ ಸಾಕ್ಷಿಗಳ ಆಧಾರದ ಮೇಲೆ ಕೊನೆಗೆ ಸತ್ಯ ಹೊರಬಂದಿತು. ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಸ್ವಾಮಿಯನ್ನು ಕೊಲೆ ಮಾಡಲಾಗಿದೆ ಎಂಬುದು ದೃಢಪಟ್ಟಿತು.



ಆರೋಪಿಗಳಿಂದ ಪಡೆದ ಮಾಹಿತಿಯ ಆಧಾರದ ಮೇಲೆ ಪೊಲೀಸರು ಬಾವಿಯಲ್ಲಿ ಶೋಧ ನಡೆಸಿದಾಗ, ಕೊಳೆತ ಸ್ಥಿತಿಯಲ್ಲಿದ್ದ ಸ್ವಾಮಿಯ ಶವ ಪತ್ತೆಯಾಯಿತು. ಸುಮಾರು ಒಂದು ತಿಂಗಳ ಬಳಿಕ ಪತ್ತೆಯಾದ ಈ ಶವ ಪ್ರಕರಣಕ್ಕೆ ಅಂತಿಮ ಸಾಕ್ಷಿಯಾಯಿತು. ತಕ್ಷಣವೇ ಸವಿತಾ, ಶ್ರೀನಿವಾಸ ಮತ್ತು ಗಂಗಾಧರರನ್ನು ಬಂಧಿಸಿ ನ್ಯಾಯಾಂಗ ವಶಕ್ಕೆ ಒಪ್ಪಿಸಲಾಯಿತು.

ಈ ಕುರಿತು ಮೈಸೂರು ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರು ಪ್ರತಿಕ್ರಿಯೆ ನೀಡಿ, 'ಇದು ಅತ್ಯಂತ ಸವಾಲಿನ ಪ್ರಕರಣವಾಗಿತ್ತು. ಆರೋಪಿಗಳೆಲ್ಲರೂ ಮಾತು ಬಾರದವರಾಗಿದ್ದರಿಂದ ವಿಚಾರಣೆ ನಡೆಸುವುದು ಕಷ್ಟಕರವಾಗಿತ್ತು. ಆದರೂ ತಾಂತ್ರಿಕ ಸಾಕ್ಷಿಗಳು, ಮೊಬೈಲ್ ಡೇಟಾ ಹಾಗೂ ವಾಕ್ ಮತ್ತು ಶ್ರವಣ ಸಂಸ್ಥೆಯ ತಜ್ಞರ ಸಹಕಾರದಿಂದ ಪ್ರಕರಣವನ್ನು ಯಶಸ್ವಿಯಾಗಿ ಭೇದಿಸಲಾಗಿದೆ. ಯಾವುದೇ ಅಪರಾಧವೂ ಮರೆಯಾಗುವುದಿಲ್ಲ ಎಂಬುದಕ್ಕೆ ಇದು ಉದಾಹರಣೆ' ಎಂದು ತಿಳಿಸಿದ್ದಾರೆ.

ಈ ಪ್ರಕರಣದಲ್ಲಿ ಪೊಲೀಸರಿಗೆ ಎದುರಾದ ಪ್ರಮುಖ ಸವಾಲು ಭಾಷೆಯ ಅಡೆತಡೆ. ಮಾತು ಬಾರದ ಆರೋಪಿಗಳಿಂದ ಮಾಹಿತಿ ಪಡೆಯುವುದು ಸುಲಭವಾಗಿರಲಿಲ್ಲ. ಆದರೆ ತಾಂತ್ರಿಕ ಸಾಕ್ಷಿ, ಮೊಬೈಲ್ ಡೇಟಾ ಹಾಗೂ ತಜ್ಞರ ಸಹಾಯದಿಂದ ಪೊಲೀಸರು ಈ ರಹಸ್ಯವನ್ನು ಭೇದಿಸಿದ್ದಾರೆ. ಇದು ಪೊಲೀಸರ ತಾಳ್ಮೆ, ತಂತ್ರಜ್ಞಾನ ಬಳಕೆ ಮತ್ತು ತನಿಖಾ ಕೌಶಲ್ಯದ ನೈಜ ಉದಾಹರಣೆಯಾಗಿದೆ.

ಒಟ್ಟಾರೆ, ಈ ಪ್ರಕರಣ ಸಮಾಜಕ್ಕೆ ಮಹತ್ವದ ಸಂದೇಶ ನೀಡುತ್ತದೆ. ಮಾತು ಇಲ್ಲದಿದ್ದರೂ ಅಪರಾಧದ ಗುರುತು ಮರೆಮಾಚಲು ಸಾಧ್ಯವಿಲ್ಲ ಎಂಬುದನ್ನು ಇದು ತೋರಿಸಿದೆ. ಅಕ್ರಮ ಸಂಬಂಧದ ಪರಿಣಾಮವಾಗಿ ಒಂದು ಕುಟುಂಬ ನಾಶವಾಗಿದ್ದು, ನಿರಪರಾಧ ವ್ಯಕ್ತಿಯೊಬ್ಬನು ಜೀವ ಕಳೆದುಕೊಂಡಿದ್ದಾನೆ. ಒಂದು ಮಗು ತಂದೆಯಿಲ್ಲದೆ ಅನಾಥವಾಗಿದೆ.

ನಂಜನಗೂಡು ಗ್ರಾಮಾಂತರ ಪೊಲೀಸರ ಈ ಸಾಧನೆ ಕ್ರೈಮ್ ತನಿಖಾ ಕ್ಷೇತ್ರದಲ್ಲಿ ಮಾದರಿಯಾಗಿದೆ. 'ಸೈಲೆಂಟ್ ಮರ್ಡರ್' ಎಂದು ಕರೆಯಬಹುದಾದ ಈ ಪ್ರಕರಣ, ಮೌನದಲ್ಲೂ ಅಪರಾಧ ಹೇಗೆ ರೂಪುಗೊಳ್ಳಬಹುದು ಎಂಬುದನ್ನು ಸ್ಪಷ್ಟವಾಗಿ ತೋರಿಸಿದೆ. ಪೊಲೀಸರು ತೋರಿದ ಹಠ ಮತ್ತು ಸಮರ್ಪಣೆಯಿಂದ ಈ ರಹಸ್ಯ ಬಹಿರಂಗಗೊಂಡಿದ್ದು, ನ್ಯಾಯಕ್ಕೆ ದಾರಿ ಮಾಡಿಕೊಟ್ಟಿದೆ. ☯



## ಪತ್ನಿಯನ್ನು ಕೊಲ್ಲುವ ಮೊದಲು ಊರಿಗೆ ಬಂದು ಬಾಡೂಟ ಹಾಕಿಸಿದ ಗಂಡ

# ರಾಜಕೀಯ ಆಸೆಗಾಗಿ ಹೆಂಡತಿಯ ಜೀವವೇ ಬಲಿ!



**ರಾಜಕೀಯ ಪ್ರವೇಶದ ಕನಸು ಮತ್ತು ಆಸ್ತಿ ವಿವಾದದ ನಡುವೆ ಸಿಲುಕಿದ ಕುಟುಂಬ ಕಲಹ ಕೊನೆಗೆ ಭೀಕರ ಹತ್ಯೆಗೆ ತಲುಪಿದ ಘಟನೆ ನಗರದಲ್ಲಿ ಬೆಳಕಿಗೆ ಬಂದಿದೆ. ಪತ್ನಿ ಕಾವ್ಯಾಳನ್ನು ಕ್ರೂರವಾಗಿ ಕೊಲೆ ಮಾಡಿದ ಆರೋಪದ ಮೇಲೆ ಗಂಡ ದನಿಯಪ್ಪನನ್ನು ಪೊಲೀಸರು ಬಂಧಿಸಿದ್ದು, ಪ್ರಕರಣದ ಹಿನ್ನಲೆ ಹಲವು ಪ್ರಶ್ನೆಗಳನ್ನು ಎಬ್ಬಿಸಿದೆ. ಆಸ್ತಿ ಮಾರಾಟಕ್ಕೆ ಪತ್ನಿ ವಿರೋಧ ವ್ಯಕ್ತಪಡಿಸಿದ್ದೇ ಈ ಕೃತ್ಯಕ್ಕೆ ಕಾರಣವಾಗಿರಬಹುದು ಎಂದು ಶಂಕಿಸಲಾಗಿದೆ.**

ರಾಜಕೀಯ ಪ್ರವೇಶದ ಕನಸು, ಆಸ್ತಿ ವಿವಾದ, ಕುಟುಂಬದೊಳಗಿನ ಭಿನ್ನಾಭಿಪ್ರಾಯ ಎಲ್ಲಾ ಸೇರಿ ಕೊನೆಗೆ ಪತ್ನಿಯೇ ಬಲಿಯಾಗುವಂತೆ ಮಾಡಿದ ಹೃದಯವಿದ್ರಾವಕ ಘಟನೆ ಬೆಂಗಳೂರಿನಲ್ಲಿ ಬೆಳಕಿಗೆ ಬಂದಿದೆ. ಪತ್ನಿ ಕಾವ್ಯಾ (34)ಳನ್ನು ಕೊಲೆ ಮಾಡಿದ ಆರೋಪದ ಮೇಲೆ ಗಂಡ ದನಿಯಪ್ಪನನ್ನು ಪೊಲೀಸರು ಬಂಧಿಸಿದ್ದು, ಪ್ರಕರಣದ ಹಿನ್ನಲೆ ಹಾಗೂ ಬೆಳವಣಿಗೆಗಳು ಅನೇಕ ಅನುಮಾನಗಳಿಗೆ ಕಾರಣವಾಗಿವೆ. ಈ ಘಟನೆಯು ಕುಟುಂಬ ಸಂಬಂಧಗಳ ನಾಜೂಕನ್ನು ಮತ್ತೊಮ್ಮೆ ನೆನಪಿಸುವಂತಾಗಿದೆ.

ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಮೂಲದ ದನಿಯಪ್ಪ (45), ಕಳೆದ ಕೆಲವು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದ್ದು, ಕಟ್ಟಡ ನಿರ್ಮಾಣ ವ್ಯವಹಾರದಲ್ಲಿ ತೊಡಗಿಕೊಂಡಿದ್ದನು. ತನ್ನ ವ್ಯಾಪಾರದಿಂದ ಉತ್ತಮ ಹಣ ಸಂಪಾದಿಸಿದ್ದ ದನಿಯಪ್ಪ, ಪೀಣ್ಯಾ ಪ್ರದೇಶದಲ್ಲಿ ಸುಮಾರು 3 ಕೋಟಿ ರೂಪಾಯಿ ಮೌಲ್ಯದ ಸುಸಜ್ಜಿತ ಮನೆಯನ್ನು ನಿರ್ಮಿಸಿದ್ದನು. ಆದರೆ ಈ ಮನೆ ಪತ್ನಿ ಕಾವ್ಯಾ ಹೆಸರಿನಲ್ಲಿ ದಾಖಲಾಗಿತ್ತು. ಇನ್ನುಳಿದ ಕೆಲವು ಆಸ್ತಿಗಳನ್ನು ತನ್ನ ತಾಯಿ ಹೆಸರಿನಲ್ಲಿ ಇಟ್ಟುಕೊಂಡಿದ್ದನು. ಈ ಆಸ್ತಿ ಹಂಚಿಕೆ ಮತ್ತು ಮಾಲೀಕತ್ವದ ವಿಚಾರವು ದಂಪತಿಗಳ ನಡುವೆ ನಿಧಾನವಾಗಿ ಬಿರುಕು ಮೂಡಿಸುತ್ತಾ ಬಂದಿತ್ತು ಎಂದು ತನಿಖೆಯಿಂದ ತಿಳಿದುಬಂದಿದೆ.

ದನಿಯಪ್ಪನಿಗೆ ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಬೇಕೆಂಬ ಬಲವಾದ ಆಸೆ ಇತ್ತು. ತನ್ನ ಊರಾದ ಅಥಣಿಗೆ ಮರಳಿ ಹೋಗಿ, ಅಲ್ಲಿಂದ ರಾಜಕೀಯ ಬದುಕು ಆರಂಭಿಸಬೇಕು ಎಂಬ ಕನಸು ಕಾಣುತ್ತಿದ್ದನು. ಇದಕ್ಕಾಗಿ ಬೆಂಗಳೂರಿನಲ್ಲಿರುವ ಎಲ್ಲಾ ಆಸ್ತಿಗಳನ್ನು ಮಾರಾಟ ಮಾಡಿ, ದೊಡ್ಡ ಮೊತ್ತದ ಹಣವನ್ನು ಸಂಗ್ರಹಿಸಿ ರಾಜಕೀಯದಲ್ಲಿ ಹೂಡಿಕೆ ಮಾಡುವ ಯೋಜನೆ ರೂಪಿಸಿದ್ದನು. ಆದರೆ ಈ ನಿರ್ಧಾರಕ್ಕೆ ಪತ್ನಿ ಕಾವ್ಯಾ ಸ್ಪಷ್ಟವಾಗಿ ವಿರೋಧ ವ್ಯಕ್ತಪಡಿಸಿದ್ದಳು. ಮಕ್ಕಳ ಭವಿಷ್ಯ ಹಾಗೂ ಶಿಕ್ಷಣದ ಹಿತದೃಷ್ಟಿಯಿಂದ ಬೆಂಗಳೂರಲ್ಲೇ ಉಳಿಯಬೇಕು ಎಂಬುದು ಆಕೆಯ ನಿಲುವಾಗಿತ್ತು.

ಈ ವಿಚಾರವಾಗಿ ದಂಪತಿಗಳ ನಡುವೆ ಆಗಾಗ್ಗೆ ಜಗಳಗಳು ನಡೆಯುತ್ತಿದ್ದವು. ಹೀಗಿದ್ದರೂ ದನಿಯಪ್ಪ ತನ್ನ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಘಟನೆಗೆ ಕೆಲ ದಿನಗಳ ಮುನ್ನ, ಆತ ತನ್ನ ಊರಾದ ಅಥಣಿಯಲ್ಲಿ ಭರ್ಜರಿಯಾಗಿ ಬಾಡೂಟ ಏರ್ಪಡಿಸಿ, ಗ್ರಾಮಸ್ಥರು ಮತ್ತು ಪರಿಚಿತರನ್ನು ಆಹ್ವಾನಿಸಿದ್ದನು. ಈ ಬಾಡೂಟದ ಮೂಲಕ ಸ್ಥಳೀಯರಲ್ಲಿ ತನ್ನ ಪ್ರಭಾವ ಹೆಚ್ಚಿಸಿಕೊಳ್ಳಲು ಹಾಗೂ ರಾಜಕೀಯ ಪ್ರವೇಶಕ್ಕೆ ವೇದಿಕೆ ಸಿದ್ಧಪಡಿಸಲು ಪ್ರಯತ್ನಿಸಿದ್ದನೆಂಬ ಮಾತುಗಳು ಕೇಳಿಬರುತ್ತಿವೆ. ಊರಿನ ಜನರ ಮುಂದೆ ತನ್ನ ಸಾಮರ್ಥ್ಯವನ್ನು ತೋರಿಸುವ ಉದ್ದೇಶವೂ ಇದಾಗಿತ್ತು ಎಂದು ಪೊಲೀಸರು ಶಂಕಿಸುತ್ತಿದ್ದಾರೆ.

ಬಾಡೂಟ ಕಾರ್ಯಕ್ರಮದ ನಂತರ ಸೋಮವಾರ ಬೆಂಗಳೂರಿಗೆ ಹಿಂದಿರುಗಿದ ದನಿಯಪ್ಪ, ಮನೆಗೆ ಬಂದ ಕೂಡಲೇ ಮತ್ತೆ ಆಸ್ತಿ ಮಾರಾಟದ ವಿಷಯವಾಗಿ ಪತ್ನಿಯೊಂದಿಗೆ ಮಾತಿನ ಚಕಮಕಿ ಆರಂಭಿಸಿದ್ದಾನೆ. ಕಾವ್ಯಾ ತನ್ನ ನಿರ್ಧಾರದಲ್ಲಿ ಅಡ್ಡಿಯಿಲ್ಲದೆ ನಿಂತಿದ್ದಳು. 'ಬೆಂಗಳೂರು ಬಿಟ್ಟು ಹೋಗುವುದಿಲ್ಲ, ಮನೆ ಮಾರಾಟಕ್ಕೂ ಒಪ್ಪುವುದಿಲ್ಲ' ಎಂಬ ಸ್ಪಷ್ಟ ನಿಲುವು ತಾಳಿದ್ದಳು. ಈ ಮಾತುಗಳು ದನಿಯಪ್ಪನ ಕೋಪವನ್ನು ಮತ್ತಷ್ಟು ಹೆಚ್ಚಿಸಿದ್ದವು.



ಮಕ್ಕಳು ಶಾಲೆಗೆ ತೆರಳಿದ ಬಳಿಕ, ದಂಪತಿಗಳ ನಡುವಿನ ಜಗಳ ತಾರಕಕ್ಕೇರಿದೆ. ಆಕ್ರೋಶದ ಅಬ್ಬರದಲ್ಲಿ ದನಿಯಪ್ಪ ತನ್ನ ನಿಯಂತ್ರಣ ಕಳೆದುಕೊಂಡು, ಪತ್ನಿ ಕಾವ್ಯಾಳ ಮೇಲೆ ದಾಳಿ ನಡೆಸಿದ್ದಾನೆ. ಕೊನೆಗೆ ಕುತ್ತಿಗೆಯ ಮೇಲೆ ಕಾಲಿಟ್ಟು ತುಳಿದು ಕ್ರೂರವಾಗಿ ಹತ್ಯೆ ಮಾಡಿದ್ದಾನೆ ಎಂಬ ಆರೋಪ ಕೇಳಿಬಂದಿದೆ. ಈ ಕೃತ್ಯವು ಪೂರ್ವಯೋಜಿತವೇ ಅಥವಾ ಕ್ಷಣಿಕ ಆಕ್ರೋಶದ ಪರಿಣಾಮವೇ ಎಂಬುದನ್ನು ಪೊಲೀಸರು ತನಿಖೆ ಮೂಲಕ ತಿಳಿದುಕೊಳ್ಳುತ್ತಿದ್ದಾರೆ.

ಘಟನೆಯ ನಂತರ ದನಿಯಪ್ಪ ತನ್ನ ಮೇಲೆ ಅನುಮಾನ ಬಾರದಂತೆ ಪರಿಸ್ಥಿತಿಯನ್ನು ನಿಯಂತ್ರಿಸಲು ಯತ್ನಿಸಿದ್ದಾನೆ ಎಂಬ ಶಂಕೆಯೂ ವ್ಯಕ್ತವಾಗಿದೆ. ಆದರೆ ಮಹಿಳೆಯ ಸಾವಿನ ಬಗ್ಗೆ ಅನುಮಾನಗೊಂಡ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದಾಗ ಪ್ರಕರಣದ ನಿಜ ಸ್ವರೂಪ ಬಹಿರಂಗವಾಗಿದೆ. ನಂತರ ದನಿಯಪ್ಪನನ್ನು ವಶಕ್ಕೆ ಪಡೆದು ತೀವ್ರ ವಿಚಾರಣೆ ನಡೆಸಿದಾಗ, ಘಟನೆಗೆ ಸಂಬಂಧಿಸಿದ ಪ್ರಮುಖ ಮಾಹಿತಿ ಹೊರಬಂದಿದೆ.

ಈ ಪ್ರಕರಣವು ಕುಟುಂಬದೊಳಗಿನ ಸಮಸ್ಯೆಗಳು ಹೇಗೆ ಭೀಕರ ಅಂತ್ಯಕ್ಕೆ ದಾರಿ ಮಾಡಿಕೊಡಬಹುದು ಎಂಬುದಕ್ಕೆ ಜೀವಂತ ಉದಾಹರಣೆಯಾಗಿದೆ. ಆಸ್ತಿ, ಆಸೆ, ಮತ್ತು ಅಹಂಕಾರ ಎಲ್ಲಾ ಸೇರಿ ಒಂದು ಕುಟುಂಬವನ್ನು ಸಂಪೂರ್ಣವಾಗಿ ನಾಶಮಾಡಿವೆ. ಮಕ್ಕಳ ಭವಿಷ್ಯ ಅತಂತ್ರವಾಗಿದ್ದು, ತಾಯಿ ಕಳೆದುಕೊಂಡ ನೋವು ಅವರನ್ನು ಕಾಡುತ್ತಿದೆ.


ಆರೋಪಿ ದನಿಯಪ್ಪ

ಪ್ರಸ್ತುತ ದನಿಯಪ್ಪನನ್ನು ಪೊಲೀಸರು ಬಂಧಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಪ್ರಕರಣದ ಎಲ್ಲಾ ಆಯಾಮಗಳನ್ನು ಪರಿಶೀಲಿಸಲಾಗುತ್ತಿದೆ. ಕೊಲೆ ಪೂರ್ವಯೋಜಿತವಾಗಿತ್ತೇ? ಅಥವಾ ಕ್ಷಣಿಕ ಕೋಪವೇ ಕಾರಣವಾಯಿತೇ? ಎಂಬುದರ ಬಗ್ಗೆ ಪೊಲೀಸರು ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುತ್ತಿದ್ದಾರೆ. ಜೊತೆಗೆ ದನಿಯಪ್ಪನ ರಾಜಕೀಯ ಸಂಪರ್ಕಗಳು ಹಾಗೂ ಆಸ್ತಿ ವ್ಯವಹಾರಗಳ ಕುರಿತೂ ತನಿಖೆ ನಡೆಯುತ್ತಿದೆ.

ಒಟ್ಟಿನಲ್ಲಿ, ಈ ಘಟನೆ ಸಮಾಜಕ್ಕೆ ಎಚ್ಚರಿಕೆಯ ಗಂಟೆ ಆಗಿದ್ದು, ಕುಟುಂಬದೊಳಗಿನ ಭಿನ್ನಾಭಿಪ್ರಾಯಗಳನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳುವ ಅಗತ್ಯವನ್ನು ಒತ್ತಿಹೇಳುತ್ತದೆ. ರಾಜಕೀಯ ಆಸೆಗಾಗಿ ಪತ್ನಿಯನ್ನೇ ಬಲಿಯಾಗಿಸಿದ ಈ ಕ್ರೂರ ಕೃತ್ಯವು ಜನರಲ್ಲಿ ತೀವ್ರ ಆಕ್ರೋಶಕ್ಕೂ ಕಾರಣವಾಗಿದೆ. ಪೊಲೀಸರು ಪ್ರಕರಣದ ಸಂಪೂರ್ಣ ಸತ್ಯವನ್ನು ಬಹಿರಂಗಪಡಿಸುವತ್ತ ಮುಂದಾಗಿದ್ದಾರೆ. ☯

# ಸುಪನಾತಿ ಸುಂದರಿಯ ಕಾಟಕ್ಕೆ ಬಲಿಯಾದ ಯುವಕ!


6 ☜

ಸಿಬ್ಬಂದಿ ಎಂದು ಪರಿಚಯಿಸಿಕೊಂಡು ಮನೆ ವಿಳಾಸ ಕೇಳಿದ್ದಳು. ಅಲ್ಲಿ ದಾರಿ ತಪ್ಪಿ ವಾಪಾಸು ಬರುವ ಸಂದರ್ಭದಲ್ಲಿ ಆಕೆಗೆ ಸುದೀಪ್ ರೈ ತನ್ನ ತಾಯಿಯೊಂದಿಗೆ ಕಾರಿನಲ್ಲಿ ಹೋಗುತ್ತಿರುವುದು ಕಂಡಿದೆ. ನೆಲ್ಯಾಡಿ ಪೇಟೆಯಲ್ಲಿಯೇ ಸೌಮ್ಯ ಶೆಟ್ಟಿ ಸುದೀಪ್ ರೈಯ ಕಾರನ್ನು ಅಡ್ಡ ಹಾಕಿ ರಂಪಾಟ ಎಬ್ಬಿಸಿದ್ದಳು. ಮಾಹಿತಿ ತಿಳಿದು ನೆಲ್ಯಾಡಿ ಹೊರಠಾಣೆಯ ಪೊಲೀಸರು ಸ್ಥಳಕ್ಕೆ ಬಂದು ಪರಿಸ್ಥಿತಿಯನ್ನು ನಿಯಂತ್ರಿಸಿದರು. ತದನಂತರ ಸೌಮ್ಯ ಶೆಟ್ಟಿ ಸುದೀಪ್ ರೈಯ ಕಾರಿನಲ್ಲಿಯೇ ಬೆಳ್ತಂಗಡಿಗೆ ಹೋದಳು. ಅಲ್ಲಿ ಸುದೀಪ್ ರೈಯ ತಾಯಿಯನ್ನು ಕಾರಿನಿಂದ ಇಳಿಸಿ ಕಳುಹಿಸಿ ಅವರನ್ನು ಕರಕೊಂಡು ಕಾರ್ಕಳಕ್ಕೆ ಹೋಗಿದ್ದಳು.



**ಆಸ್ಪತ್ರೆಗೆ ಸುದೀಪ್ ರೈ !**

ಈ ಘಟನೆ ನಡೆದು ಎರಡು ದಿನ ಕಳೆಯುವಷ್ಟರಲ್ಲಿ ಸುದೀಪ್‌ರೈ ಗೆ ಹೊಟ್ಟೆ ನೋವು ಆರಂಭವಾಗಿತ್ತು. ಸೌಮ್ಯ ಶೆಟ್ಟಿಯ ಮನೆಯವರು ಫುಡ್ ಪಾಯಿಸನ್ ಆಗಿರಬೇಕು ಎಂದು ಕಾರ್ಕಳದ ಗಾಜ್ರಿಯಾ ಆಸ್ಪತ್ರೆಗೆ ದಾಖಲಿಸಿದರು. ಎರಡು ದಿನಗಳ ಟ್ರೀಟ್‌ಮೆಂಟ್ ನಡೆದಾಗ ಆತನಿಗೆ ವಿಷ ಪ್ರಾಶನವಾಗಿರುವುದು ಖಚಿತವಾಯಿತು. ತದನಂತರ ಹೆಚ್ಚಿನ ಚಿಕಿತ್ಸೆಗೆ ಉಡುಪಿಯ ಆದರ್ಶ ಆಸ್ಪತ್ರೆಗೆ ದಾಖಲಿಸಲಾಯಿತು. ಈ ಸಂದರ್ಭದಲ್ಲಿ ಸುದೀಪ್ ರೈಯ ಮನೆಯವರಿಗೆ ಮಾಹಿತಿ ನೀಡಲಾಯಿತು. ಅವರು ಬಂದು ನೋಡಿದಾಗ ಸುದೀಪ್ ರೈ ಪರಿಸ್ಥಿತಿ ಚಿಂತಾಜನಕವಾಗಿತ್ತು. ಅವರು ಸುದೀಪ್ ರೈಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಯೆನಪೋಯ ಆಸ್ಪತ್ರೆಗೆ ದಾಖಲಿಸಿದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಮಾರ್ಚ್ 29ರಂದು ಸುದೀಪ್ ರೈ ಮೃತಪಟ್ಟರು. ಈ ಬಗ್ಗೆ ಅವರ ತಂದೆ ದಾಮೋದರ್ ರೈ ನೀಡಿದ ದೂರಿನಂತೆ ಕಾರ್ಕಳ ನಗರ ಠಾಣೆಯಲ್ಲಿ ಕೇಸು ದಾಖಲಾಯಿತು. ಅವರು ನೀಡಿದ ದೂರಿನಂತೆ ಸೌಮ್ಯ ಶೆಟ್ಟಿಯ ಕಿರುಕುಳದಿಂದಲೇ ಸುದೀಪ್ ರೈ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕೇಸು ದಾಖಲಾಗಿದ್ದು, ಇದೀಗ ಸೌಮ್ಯ ಶೆಟ್ಟಿಯನ್ನು ಬಂಧಿಸಲಾಗಿದೆ.



SHREE SATHYANARAYANA TEMPLE, KUTHROTTU
ಶ್ರೀ ಸತ್ಯನಾರಾಯಣ ದೇವಸ್ಥಾನ, ಕುತ್ರೊಟ್ಟು
Post : Permanu - 574 214, Belthangady, D.K. ಅಂಚೆ : ಪೆರ್ಮಾಣು - 574 214, ಬೆಳ್ತಂಗಡಿ, ದ.ಕ.

393 ವಿವಾಹ ದೃಢ ಪತ್ರಿಕೆ ತಾ 6/02/026

B. Sudeep

ವರನ ವಿಳಾಸ : ಆಧಾರ್ ನಂ - 4705 7287 3212. B. Damodar 2/272 Beedi School House Padubettu Nelyadi Post and Village, Kadaba Taluk Nelyadi. Po. Nelyadi DK. Karnataka - 574229. Mob : 7353051757. — ಪ್ರಾಯ 30 ವ

ವಧುವಿನ ವಿಳಾಸ : mob - 9663179963 Sowmya. 1-16/16 Sowmya Nivasa, Bangle gudde, Kukkundoor Post. Karkala Taluk, Po. karkala, Dist - Udupi. Karnataka - 574104. ಆಧಾರ್ ನಂ : 8010 4948 4412. — ಪ್ರಾಯ 28 ವ

ಸಹಿ ಸಹಿ

ಇವರ ವಿವಾಹವು ಈ ದಿನ ಶ್ರೀ ದೇವಸ್ಥಾನದಲ್ಲಿ ನಡೆದಿರುತ್ತದೆ ಎಂದು ದೃಢೀಕರಿಸುತ್ತೇನೆ.

ಸಹಿ

**ಎಷ್ಟನೇ ಮದುವೆ?**

ಸೌಮ್ಯ ಶೆಟ್ಟಿಯೇ ಹೇಳಿಕೊಳ್ಳುವಂತೆ ಆಕೆಗೆ 19ರ ಹರೆಯುದಲ್ಲಿ ಪ್ರಶಾಂತ್ ಎಂಬಾತನೊಂದಿಗೆ ಮದುವೆಯಾಗಿತ್ತು. ಇದೂ ಸಹ ಲವ್ ಕಂ ಆರೇಂಜ್ಡ್ ಮದುವೆ. ಕೇವಲ ಒಂದೇ ವರ್ಷದಲ್ಲಿ ಈ ಮದುವೆ ಮುರಿದು ಬಿದ್ದಿತ್ತು. ನ್ಯಾಯಾಲಯದಲ್ಲಿ ವಿವಾಹ ವಿಚ್ಛೇದನವೂ ಆಗಿತ್ತು. ತದನಂತರವೇ ಆಕೆಗೆ ಸುದೀಪ್ ರೈಯೊಂದಿಗೆ ಪರಿಚಯವಾಗಿ ಮದುವೆ ಆಗಿರುವುದು ಎಂದು ಹೇಳಿದ್ದರು. ಆದರೆ ಆಕೆ ಕೆಲವು ವರ್ಷಗಳ ಹಿಂದೆ ಕಾರ್ಕಳ ಅಯ್ಯಪ್ಪ ನಗರದ ಸಂಜಯ್ ಕುಮಾರ್ ಎಂಬಾತನೊಂದಿಗೆ ವಿವಾಹವಾಗಿದ್ದಳು. ಅವರಿಬ್ಬರು ಕಿನ್ನಿಗೋಳಿ ಸಮೀಪದ ಹೊಸಕಾಡು ಎಂಬಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಖಾಸಗಿ ಫೈನಾನ್ಸ್ ಕಂಪನಿಯೊಂದರಲ್ಲಿ ಉದ್ಯೋಗಿಯಾಗಿದ್ದ ಸಂಜಯ್ ಕುಮಾರ್‌ನನ್ನು ಸೌಮ್ಯ ಶೆಟ್ಟಿ ಮದುವೆ ನೋಂದಣಿ ಮಾಡಿಸಿಕೊಳ್ಳುವಂತೆ ಒತ್ತಾಯಿಸುತ್ತಿದ್ದಳು. ಈ ವಿಚಾರಕ್ಕೆ ಸಂಬಂಧಿಸಿದಂತೆ ಅವರ ಮಧ್ಯೆ ಗಲಾಟೆ ನಡೆದು ಸೌಮ್ಯ ಶೆಟ್ಟಿ ಪತಿ ಸಂಜಯ್ ಕುಮಾರ್ ಮತ್ತು ಆತನ ಹೆತ್ತವರ ವಿರುದ್ಧ ವರದಕ್ಷಿಣೆ ಹಿಂಸೆ ತಡೆಕಾಯ್ದೆಯನ್ವಯ ಮೂಲ್ಕಿ ಪೊಲೀಸ್ ಠಾಣೆಗೆ ದೂರು ನೀಡಿದ್ದಳು. ಮೂಲ್ಕಿ ಪೊಲೀಸರು ಕೇಸು ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಿ ಪ್ರಕರಣದ ತನಿಖೆಯನ್ನು ಪಾಂಡೇಶ್ವರದ ಮಹಿಳಾ ಠಾಣೆಗೆ ಹಸ್ತಾಂತರಿಸಿದ್ದರು. ಪಾಂಡೇಶ್ವರ ಮಹಿಳಾ ಠಾಣಾ ಪೊಲೀಸರು ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ. ಸದ್ಯ ಆ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ.




ಈ ಘಟನೆಯ ನಂತರ ಸೌಮ್ಯ ಶೆಟ್ಟಿಯ ಬಲೆಗೆ ಬಿದ್ದವರು ವೇಣು ಶೆಟ್ಟಿ. ಮೂಲ್ಕಿ ಮೂಲದ ವೇಣು ಶೆಟ್ಟಿ ರಂಗ ಕಲಾವಿದ. ಸೌಮ್ಯ ಶೆಟ್ಟಿ ಮೇಕಪ್ ಆರ್ಟಿಸ್ಟ್ ಆಗಿದ್ದು, ಕೆಲವೊಂದು ನಾಟಕ ತಂಡಗಳಲ್ಲಿ ರಂಗನಟಿಯಾಗಿಯೂ ಗುರುತಿಸಿಕೊಂಡಿದ್ದಳು. ಈ ಸಂದರ್ಭದಲ್ಲಿ ಅವರಿಬ್ಬರ ಮಧ್ಯೆ ಪರಿಚಯವಾಗಿತ್ತು. ಮದುವೆಯ ಹಂತಕ್ಕೂ ಹೋಗಿತ್ತು. ಈ ಮಧ್ಯೆ ಅವರಿಬ್ಬರ ಮಧ್ಯೆ ವಿರಸ ತೋರಿ ವೇಣು ಶೆಟ್ಟಿ ಈಕೆಯ ಸಹವಾಸ ಸಾಕು ಎಂದು ಮುಂಬೈಗೆ ಹೋಗಿದ್ದು ಈಕೆಯ ಬಲೆಗೆ ಬಿದ್ದು ಸುದೀಪ್ ರೈ ಪ್ರಾಣ ಕಳಕೊಂಡ ನಂತರ ಊರಿಗೆ ಬಂದು ಆತನ ಹೆತ್ತವರೊಂದಿಗೆ ನಿಂತುಕೊಂಡಿದ್ದಾರೆ. ಈಕೆಯ ವಿಚಾರಣೆಯ ಸಂದರ್ಭದಲ್ಲಿ ಆಕೆಗೆ ಮತ್ತೊಂದು ಮದುವೆಯಾಗಿರುವ ಮಾಹಿತಿಗಳು ಲಭ್ಯವಾಗುತ್ತಿದೆ. ಒಟ್ಟಾರೆಯಾಗಿ ಸೌಮ್ಯ ಶೆಟ್ಟಿ ಹಲವು ಯುವಕರ ಬಾಳಿನಲ್ಲಿ ಚೆಲ್ಲಾಟವಾಡಿದ್ದಾಳೆ. ಒಬ್ಬನ ಪ್ರಾಣ ಹೋಗಿದೆ. ಪರಿಣಾಮವಾಗಿ ಜೈಲು ಪಾಲಾಗಿದ್ದಾಳೆ. ☯





# ‘ರಿಂಕು’ ಕೊಲೆಗೆ ಮಾಟ ಮಂತ್ರ ಕಾರಣವೇ?

**ಶಿವಮೊಗ್ಗ**
✍ ಸಂತೋಷಕುಮಾರ



ರಿಂಕುನ ಮೃತದೇಹ

ಶಿವಮೊಗ್ಗ ಜಿಲ್ಲೆಯ ಸಾಗರ ಪಟ್ಟಣದಲ್ಲಿ ನಡೆದಿರುವ ‘ರಿಂಕು’ ಹತ್ಯೆ ಪ್ರಕರಣ ದಿನೇ ದಿನೇ ಹೊಸ ತಿರುವು ಪಡೆಯುತ್ತಿದ್ದು, ಪ್ರಕರಣದ ಸುತ್ತ ಮುತ್ತ ಮಾಟ ಮಂತ್ರದ ಗಾಳಿ ಸುದ್ದಿ ಭಾರೀ ಚರ್ಚೆಗೆ ಗ್ರಾಸವಾಗಿದೆ. ಜಂಬಗಾರು ಪ್ರದೇಶದ ಬಿ.ಎಚ್. ರಸ್ತೆಯಲ್ಲಿರುವ ರೂಫ್ ಟಾಪ್ ಕಫೆ - ಗೇಮ್ಸ್ ಝೋನ್‌ನಲ್ಲಿ ಏಪ್ರಿಲ್ 1, 2026 ರಂದು ನಡೆದ ಈ ಅಮಾನುಷ ಹತ್ಯೆ ಪ್ರಕರಣ ಈಗ ಕೇವಲ ವೈಯಕ್ತಿಕ ವೈಷಮ್ಯ ಅಥವಾ ಹಣಕಾಸಿನ ಗೊಂದಲಕ್ಕೆ ಸೀಮಿತವಾಗಿಲ್ಲ ಎನ್ನುವ ಅನುಮಾನಗಳು ಮೂಡಿವೆ. ಹೋಟೆಲ್ ಮಾಲೀಕ ಮೊಹಮ್ಮದ್ ಇಮ್ರಾನ್ ವಿರುದ್ಧ ಪ್ರಕರಣ ದಾಖಲಾಗಿದ್ದು, ಅವರು ಈಗ ಜೈಲಿನಲ್ಲಿ ಇದ್ದಾರೆ. ಆದರೆ ಕೊಲೆಗೆ ನಿಜವಾದ ಕಾರಣ ವೇನು ಎಂಬ ಪ್ರಶ್ನೆಗೆ ಇನ್ನೂ ಸ್ಪಷ್ಟ ಉತ್ತರ ಸಿಕ್ಕಿಲ್ಲ.



ಎಸ್ಪಿ ಬಿ. ನಿಖಿಲ್

ಪೊಲೀಸರ ತನಿಖೆ ಜೋರಾಗಿಯೇ ಮುಂದುವರಿದರೂ, ಸ್ಥಳೀಯರಲ್ಲಿ ಹರಿದಾಡುತ್ತಿರುವ ಮಾತುಗಳು ಪ್ರಕರಣಕ್ಕೆ ಮತ್ತೊಂದು ವಿಚಿತ್ರ ಆಯಾಮ ನೀಡಿವೆ. ಇಮ್ರಾನ್ ನಡೆಸುತ್ತಿದ್ದ ಹೋಟೆಲ್ ವ್ಯಾಪಾರ ಸರಿಯಾಗಿ ನಡೆಯದೇ, ನಿರಂತರ ನಷ್ಟ ಅನುಭವಿಸುತ್ತಿದ್ದ ಹಿನ್ನೆಲೆಯಲ್ಲಿ ಆತ ಮಾನಸಿಕ ಒತ್ತಡದಲ್ಲಿದ್ದ ಎನ್ನಲಾಗಿದೆ. ಇದೇ ಸಮಯದಲ್ಲಿ ಬಿಹಾರ ರಾಜ್ಯದ ಪಾಟ್ನಾ ಸಮೀಪದ ಬಲಿಯಾರಿ ಗ್ರಾಮ ಮೂಲದ ರಿಂಕು ಮತ್ತು ಅವನ ಸಂಬಂಧಿ ಸೂರಜ್ ಅವರನ್ನು ಕೆಲಸಕ್ಕೆ ಕರೆತಂದಿದ್ದ. ಆರಂಭದಲ್ಲಿ ಎಲ್ಲವೂ ಸರಿಯಾಗಿದ್ದರೂ, ನಂತರದ ದಿನಗಳಲ್ಲಿ ರಿಂಕು ಹತ್ತಿರದ ಹೋಟೆಲ್ ಸಿಬ್ಬಂದಿಯೊಂದಿಗೆ ಹೆಚ್ಚು ಸಂಪರ್ಕ ಬೆಳೆಸಿಕೊಂಡಿದ್ದ ಎನ್ನಲಾಗುತ್ತಿದೆ.



ಆರೋಪಿ ಮೊಹಮ್ಮದ್ ಇಮ್ರಾನ್

ಇದೇ ವಿಚಾರ ಇಮ್ರಾನ್‌ಗೆ ಅನುಮಾನ ಹುಟ್ಟುವಂತೆ ಮಾಡಿದ್ದು, ತನ್ನ ಹೋಟೆಲ್ ವ್ಯವಹಾರಕ್ಕೆ ಹಾನಿ ಉಂಟಾಗುತ್ತಿದೆ ಎಂಬ ಭಾವನೆ ಹೆಚ್ಚಾಗಲು ಕಾರಣವಾಯಿತು. ಅಲ್ಲದೆ, ಹೋಟೆಲ್ ಗಲ್ಲಾಪೆಟ್ಟಿಗೆಯಲ್ಲಿ ‘ಮಂತ್ರಿಸಿದ ತಾಮ್ರದ ತಗಡುಗಳು’ ಸಿಕ್ಕಿವೆ ಎಂಬ ಮಾತುಗಳು ಪ್ರಕರಣಕ್ಕೆ ಮತ್ತಷ್ಟು ರಹಸ್ಯದ ಬಣ್ಣ ಹಚ್ಚಿವೆ. ಈ ತಗಡುಗಳನ್ನು ಯಾರು ಇಟ್ಟರು? ರಿಂಕು ಇದರಲ್ಲಿ ಭಾಗಿಯಾಗಿದ್ದನಾ? ಅಥವಾ ಇವೆಲ್ಲವೂ ಕೇವಲ ಗಾಳಿಸುದ್ದಿಯೇ? ಎಂಬ ಪ್ರಶ್ನೆಗಳು ಉದ್ಭವಿಸಿವೆ.

☞ 14


ರಾಜ್ಯದಲ್ಲಿ ಎರಡು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆ ಬಳಿಕ ಕಾಂಗ್ರೆಸ್‌ನಲ್ಲಿ ಅಸಮಾಧಾನದ ಹೊಗೆ ಎದ್ದಿದೆ ಇದು ಮುಂದಿನ ದಿನಗಳಲ್ಲಿ ಯಾವ ರೀತಿಯಲ್ಲಿ ಪಕ್ಷದ ಮೇಲೆ ಪರಿಣಾಮ ಬೀರುತ್ತೋ ಗೊತ್ತಿಲ್ಲ. ಆದರೆ ಬಹುದೊಡ್ಡ ಬೆಳವಣಿಗೆಯಂತು ಆಗಿಯೇ ಆಗುತ್ತದೆ ಎಂಬುದರ ಸೂಚನೆ ಈಗ ಸಿಗಲಾರಂಭಿಸಿದೆ ಮುಂದಿನ ದಿನಗಳಲ್ಲಿ ಅಲ್ಪ ಸಂಖ್ಯಾತರು ತಿರುಗಿ ಬೀಳುವ ಲಕ್ಷಣಗಳು ಗೋಚರಿಸುತ್ತಿವೆ ಅಲ್ಪ ಸಂಖ್ಯಾತರ ಉದ್ಧಾರದ ಬಗ್ಗೆ ಮಾತನಾಡುತ್ತಾ ಪ್ರಮುಖ ಓಟ್ ಬ್ಯಾಂಕ್ ಮಾಡಿಕೊಂಡಿದ್ದ ಕಾಂಗ್ರೆಸ್ ಉಪಚುನಾವಣೆಗೆ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನೀಡದೆ ಕುಟುಂಬ ರಾಜಕಾರಣಕ್ಕೆ ಮಣೆ ಹಾಕಿರುವುದು ಒಂದು ರೀತಿಯಲ್ಲಿ ಅಲ್ಪಸಂಖ್ಯಾತರಿಗೆ ಮಾಡಿದ ದ್ರೋಹದಂತೆ ಬಿಂಬಿತವಾಗುತ್ತಿದೆ ಇದನ್ನು ಕಾಂಗ್ರೆಸ್ ನಾಯಕರು ಹೇಗೆ ಸರಿಪಡಿಸಿಕೊಳ್ಳುತ್ತಾರೆ ಎಂಬುದೇ ಸದ್ಯಕ್ಕಿರುವ ಪ್ರಶ್ನೆಯಾಗಿದೆ.





# ಕೈ ವಿರುದ್ಧ ತಿರುಗಿ ಬಿದ್ರಾ ಅಲ್ಪಸಂಖ್ಯಾತರು?

ರಾಜ್ಯದಲ್ಲಿ ಈ ಹಿಂದೆ ಜೆಡಿಎಸ್ ಬಲಿಷ್ಠವಾಗಿತ್ತು. ಹೀಗಾಗಿ ಅಲ್ಪ ಸಂಖ್ಯಾತರಿಗೆ ಕಾಂಗ್ರೆಸ್ ಹೊರತು ಪಡಿಸಿ ಜೆಡಿಎಸ್ ನ ಆಯ್ಕೆಯಿತ್ತು. ಆದರೆ ಒಂದಷ್ಟು ವರ್ಷಗಳ ಕಾಲ ಜೆಡಿಎಸ್‌ನ ಕೈಹಿಡಿದಿದ್ದ ಮುಸ್ಲಿಂ ನಾಯಕರು ಕಾಂಗ್ರೆಸ್ ಕಡೆಗೆ ಮುಖ ಮಾಡಿರುವುದು ಮತ್ತು ಬಿಜೆಪಿ


ಸಾದಿಕ್ ಪೈಲ್ವಾನ್


ಅಬ್ದುಲ್ ಜಬ್ಬಾರ್



ಅಫ್ಸರ್ ಕೊಡ್ಲಿಪೇಟೆ

ಜೊತೆ ಸೇರಿ ಸರ್ಕಾರ ರಚಿಸಿದ್ದು ಅಲ್ಪಸಂಖ್ಯಾತರು ದೂರ ಸರಿಯುವಂತೆ ಮಾಡಿತ್ತು. ಆದರೂ ಕಳೆದ 2023 ವಿಧಾನಸಭಾ ಚುನಾವಣೆ ತನಕವೂ ಜೆಡಿಎಸ್‌ನ ನಾಯಕರು ಅಲ್ಪ ಸಂಖ್ಯಾತರು ತಮ್ಮ ಕೈಹಿಡಿಯುತ್ತಾರೆಂದೇ ನಂಬಿದ್ದರು. ಆದರೆ ಅದು ಭ್ರಮೆಯಾಗಿತ್ತು. ಅವರೆಲ್ಲರೂ ಕಾಂಗ್ರೆಸ್ ಕಡೆಗೆ ಮುಖ ಮಾಡಿದರು.





2024ರ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಬಿಜೆಪಿ ನೇತೃತ್ವದ ಎನ್‌ಡಿಎ ಜೊತೆಗೆ ಕೈ ಜೋಡಿಸಿದ ಬಳಿಕ ಅಲ್ಪಸಂಖ್ಯಾತರು ಅವರಿಂದ ಸಂಪೂರ್ಣ ದೂರ ಸರಿದಿದ್ದಾರೆ. ಹೀಗಾಗಿ ಕಾಂಗ್ರೆಸ್‌ಗೆ ಅಲ್ಪ ಸಂಖ್ಯಾತರು ತಮ್ಮ ಜತೆಗಿರುತ್ತಾರೆ ಎಂಬ ನಂಬಿಕೆ ಇಮ್ಮಡಿಯಾಗಿದೆ. ಅಲ್ಪಸಂಖ್ಯಾತರು ಕೂಡ ಕಾಂಗ್ರೆಸ್‌ನ್ನು ನಂಬಿದ್ದರು. ಆದರೆ ದಾವಣಗೆರೆಯಲ್ಲಿ ಯಾವಾಗ ಮುಸ್ಲಿಂ ಅಭ್ಯರ್ಥಿಗೆ ಟಿಕೆಟ್ ನೀಡದೆ ಹೋದರೋ ಆಗಲೇ ಕಾಂಗ್ರೆಸ್‌ನಲ್ಲಿರುವ ಅಲ್ಪಸಂಖ್ಯಾತ ನಾಯಕರೇ ಸಿಡಿಮಿಡಿಗೊಳ್ಳುವಂತಾಗಿದೆ.





ಕೆಲವರು ಬಹಿರಂಗವಾಗಿ ಅದನ್ನು ತೋರ್ಪಡಿಸಿ ಬಂಡಾಯ ಎದ್ದು ಚುನಾಣೆಗೆ ಸ್ಪರ್ಧಿಸಿದ್ದರೆ, ಕೆಲವರ ಮನವೊಲಿಕೆ ಮಾಡುವ ಕೆಲಸ ಕಾರ್ಯ ನಡೆದು ಒಂದಷ್ಟು ಮಂದಿಯನ್ನು ಕಣದಿಂದ ಹಿಂದಕ್ಕೆ ಸರಿಯುವಂತೆ ಮಾಡುವ ಕೆಲಸವಾಯಿತು ಆದರೆ ಮುಖ್ಯವಾಗಿ ಕಾಂಗ್ರೆಸ್‌ನ ಮುಖಂಡ ಟಿಕೆಟ್ ಸಿಗದಕ್ಕೆ ಬಂಡಾಯವಾಗಿ ನಾಮಪತ್ರ ಸಲ್ಲಿಸಿದ್ದ ಸಾದಿಕ್ ಪೈಲ್ವಾನ್ ಅವರು ಎಷ್ಟೇ ಒತ್ತಡ ತಂದರೂ ನಾಮಪತ್ರ ಹಿಂತೆಗೆದುಕೊಂಡಿರಲಿಲ್ಲ. ಇದಾದ ನಂತರ ಖುದ್ದು ಸಿಎಂ ಸಿದ್ದರಾಮಯ್ಯರವರು ಮಾತನಾಡಿ ಕಣದಿಂದ ನಿವೃತ್ತಿ ಮಾಡುವ ಪ್ರಯತ್ನ ಮಾಡಿದರು. ಇದೆಲ್ಲದರ ನಡುವೆ ಮುಸ್ಲಿಂ ಸಮುದಾಯಕ್ಕೆ ಟಿಕೆಟ್ ನೀಡದ್ದಕ್ಕೆ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದ ಘಟನೆಯೂ ನಡೆದು ಹೋಯಿತು.


ಮೇಲ್ನೋಟಕ್ಕೆ ಅಸಮಾಧಾನದ ಕಾರಣದಿಂದಾಗಿ ದಾವಣಗೆರೆಯಲ್ಲಿ ಕಾಂಗ್ರೆಸ್ ವಿರೋಧಿ ಅಲೆಯೇ ಜಾಸ್ತಿಯಿರುವುದು ಎದ್ದು ಕಾಣಿಸುತ್ತಿದೆ. ಏಕೆಂದರೆ

ಬಿ.ಎಂ. ಲವಕುಮಾರ್

ಕಾಂಗ್ರೆಸ್ ನಿಂದ ಕುಟುಂಬ ರಾಜಕಾರಣಕ್ಕೆ ಮಣೆ ಹಾಕಲಾಗಿದೆ ಎಂಬ ಆರೋಪ ದೊಡ್ಡ ಮಟ್ಟದಲ್ಲಿದೆ. ದಾವಣಗೆರೆ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸಮರ್ಥ್ ಶ್ಯಾಮನೂರು ಅವರ ತಂದೆ ಶಾಸಕರಾಗಿದ್ದಾರೆ, ತಾಯಿ ಸಂಸದರಾಗಿದ್ದಾರೆ. ಹೀಗಿರುವಾಗ 27 ವರ್ಷದ ಸಮರ್ಥ್ ಶ್ಯಾಮನೂರಿಗೆ ಟಿಕೆಟ್ ಕೊಡುವ ಔಚಿತ್ಯ ಏನಿತ್ತು? ಎಂಬುದು ಅಲ್ಪಸಂಖ್ಯಾತ ನಾಯಕರ ಪ್ರಶ್ನೆಯಾಗಿತ್ತು. ಹೀಗಾಗಿ ಬಿಜೆಪಿಯನ್ನು ಹೊರತುಪಡಿಸಿ ಎಸ್‌ಡಿಪಿಐನ ಅಫ್ಸರ್ ಕೊಡ್ಲಿಪೇಟೆ, ಉಳಿದಂತೆ ಖಾದರ್ ಅದಿಲ್ ಬಾಷಾ ಸೇರಿ 14 ಮುಸ್ಲಿಂ ಅಭ್ಯರ್ಥಿಗಳು ಪಕ್ಷೇತರರಾಗಿ ಸ್ಪರ್ಧೆ ಮಾಡಿದ್ದರೂ ಅವರೆಲ್ಲರ ಸ್ಪರ್ಧೆ ಕಾಂಗ್ರೆಸ್ ವಿರುದ್ಧವೇ ಆಗಿದೆ.

ಇಲ್ಲಿ ಕಾಂಗ್ರೆಸ್ ಮತಗಳು ಹಂಚಿಹೋಗುವ ಲಕ್ಷಣಗಳು ಕಂಡು ಬಂದಿದ್ದು, ಅದರ ಪರಿಣಾಮ ಕಾಂಗ್ರೆಸ್ ಮೇಲೆ ಆಗಲಿದೆ. ಹೀಗಾಗಿಯೇ ಕಾಂಗ್ರೆಸ್ ನಾಯಕರು ಬೆಚ್ಚಿ ಬಿದ್ದಿದ್ದಾರೆ. ಕಾಂಗ್ರೆಸ್ ವಿರುದ್ಧವೇ ಬಂಡಾಯ ಮಾಡಿದ ಮುಸ್ಲಿಂ ನಾಯಕರ ತಲೆದಂಡಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದ್ದು, ಸಚಿವ ಜಮೀರ್ ಖಾನ್ ಸೇರಿದಂತೆ ಹಲವು ಮುಸ್ಲಿಂ ಮುಖಂಡರ ವಿರುದ್ಧ ಹೈಕಮಾಂಡ್ ಗೆ ದೂರು ಸಲ್ಲಿಕೆಯಾಗಿದೆ. ಸದ್ಯ ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ಅಬ್ದುಲ್ ಜಬ್ಬಾರ್ ರಾಜೀನಾಮೆ ನೀಡಿದ್ದಾರೆ. ಇದು ಚುನಾವಣಾ ಫಲಿತಾಂಶ ಬರುವ ಮುನ್ನವೇ ಕಾಂಗ್ರೆಸ್‌ನಲ್ಲಿ ಆಗುತ್ತಿರುವ ಬೆಳವಣಿಗೆಯಾಗಿದೆ.





ಮೇ.4ರಂದು ಫಲಿತಾಂಶ ಬರಲಿದ್ದು ಅವತ್ತು ಕಾಂಗ್ರೆಸ್ ಪರ ಫಲಿತಾಂಶ ಬಂದರೆ ಬಹುಶಃ ದಾವಣಗೆರೆಯ ಕಾಂಗ್ರೆಸ್ ನಾಯಕರ ನಡುವಿನ ಜಟಾಪಟಿ ತಣ್ಣಗೆ ಆಗಬಹುದು. ಒಂದು ವೇಳೆ ಕಾಂಗ್ರೆಸ್‌ಗೆ ವಿರುದ್ಧವಾಗಿ ಫಲಿತಾಂಶ ಬಂದರೆ ಅಸಮಾಧಾನದ ಹೊಗೆ ರಾಜ್ಯವ್ಯಾಪಿ ಹರಡಲೂಬಹುದು. ಆದರೂ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ನಡೆದ ವಿದ್ಯಮಾನಗಳು ಕಾಂಗ್ರೆಸ್ ಪಕ್ಷದ ಮುಖಂಡರ ನಿದ್ದೆಗೆಡಿಸಿದಂತು ನಿಜ. ಇಲ್ಲಿ ಹೈಕಮಾಂಡ್ ತೆಗೆದುಕೊಳ್ಳುವ ಕ್ರಮಗಳು ಪಕ್ಷದ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನುಂಟು ಮಾಡುವುದಂತು ನಿಜ.



ಅತ್ತ ಬಾಗಲಕೋಟೆಯಲ್ಲಿಯೂ ಕಾಂಗ್ರೆಸ್ ವಿಚಾರದಲ್ಲಿ ಎಲ್ಲವೂ ಸರಿಯಿದೆ ಎಂದರೆ ತಪ್ಪಾಗುತ್ತದೆ. ಅಲ್ಲಿ ಬಹಳ ಕಸರತ್ತು ನಡೆದು ಅಂತಿಮವಾಗಿ ಉಮೇಶ್ ಮೇಟಿ ಅವರಿಗೆ ಟಿಕೆಟ್ ನೀಡಲಾಗಿದೆ. ಸಿಎಂ ಸಿದ್ದರಾಮಯ್ಯ ಅವರ ಸಂಧಾನದ ಫಲವಾಗಿ ಉಮೇಶ್ ಮೇಟಿಗೆ ಟಿಕೆಟ್ ನೀಡಿದ್ದರೂ ಕುಟುಂಬದೊಳಗಿನ ಅಸಮಾಧಾನ ಕಡಿಮೆ ಆದಂತೆ ಕಾಣುತ್ತಿಲ್ಲ. ಹೀಗಾಗಿ ಅಲ್ಲಿಯೂ ಕಾಂಗ್ರೆಸ್‌ಗೆ ಗೆಲುವು ಸುಲಭವಾಗುತ್ತದೆ ಎನ್ನುವುದನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಏಕೆಂದರೆ ಬಿಜೆಪಿ ಅಲ್ಲಿ ವೀರಣ್ಣ ಚರಂತಿ ಮಠ ಅವರನ್ನು ಕಣಕ್ಕಿಳಿಸಿ ಹೋರಾಟ ನಡೆಸಿದೆ. ಸದ್ಯದ ಪರಿಸ್ಥಿತಿಗಳನ್ನು ಗಮನಿಸಿದ್ದೇ ಆದರೆ ಮಳೆ ನಿಂತರೂ ಮರದ ಹನಿ ನಿಂತಿಲ್ಲ ಎಂಬಂತೆ ಉಪಚುನಾವಣೆ ನಂತರದ ಬೆಳವಣಿಗೆಗಳು ಕಾಂಗ್ರೆಸ್‌ನಲ್ಲಿ ಗೋಚರಿಸುತ್ತಿವೆ.

ಉಪಚುನಾವಣೆಯಲ್ಲಿ ಆಗಿರುವ ಬೆಳವಣಿಗೆಗಳ ಬಗ್ಗೆ ರಾಜ್ಯದ ಹಿರಿಯ ನಾಯಕರು ಮತ್ತು ಹೈಕಮಾಂಡ್ ನಾಯಕರು ತಲೆಕೆಡಿಸಿಕೊಂಡಿದ್ದರೆ, ಕಾಂಗ್ರೆಸ್‌ನಲ್ಲಿರುವ ಮತ್ತೆ ಕೆಲವು ಹಿರಿಯ ಶಾಸಕರು ಸಚಿವ ಸ್ಥಾನಕ್ಕಾಗಿ ಕಸರತ್ತು ನಡೆಸಲು ಆರಂಭಿಸಿದ್ದಾರೆ. ಸುಮಾರು ಇಪ್ಪತ್ತರಿಂದ ಇಪ್ಪತ್ತೈದು ಮಂದಿ ಆಕಾಂಕ್ಷಿಗಳಿದ್ದು ಅವರೆಲ್ಲರೂ ತಮ್ಮ ಗಾಡ್ ಫಾದರ್‌ಗಳ ಮೂಲಕ ಲಾಬಿ ನಡೆಸುತ್ತಿದ್ದಾರೆ.



ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳಾಗುತ್ತಿವೆ. ಅಧಿಕಾರ ಇನ್ನು ಎರಡು ವರ್ಷ ಮಾತ್ರ ಬಾಕಿಯಿದೆ ಹೀಗಾಗಿ ಸಂಪುಟ ಪುನರ್ರಚನೆ ಮಾಡಿ ತಮಗೆ ಸಚಿವ ಸ್ಥಾನ ನೀಡಿ ಎಂಬುದು ಹಿರಿಯ ಶಾಸಕರ ಆಗ್ರಹವಾಗಿದೆ. ಆದರೆ ಸಂಪುಟ ಪುನರ್ರಚನೆಗೆ ಕೈಹಾಕುವುದು ಜೇನುಗೂಡಿಗೆ ಕಲ್ಲು ಹೊಡೆಯುವುದು ಒಂದೇ ಎಂಬಂತಾಗಿದೆ ಹೈಕಮಾಂಡ್ ಪರಿಸ್ಥಿತಿ. 2028ರ

☞ 14

# ಸೌಜನ್ಯ ಫೈಲ್ಸ್



27

ನಿರೂಪಣೆ :

ಮೋಹನ್ ಬೋಳಂಗಡಿ

## ಬಯಾಲಾಜಿಕಲ್ ಸ್ಯಾಂಪಲ್‌ನಲ್ಲಿ ಸರಿಯಾದ ವರದಿ ಬರಲೇ ಇಲ್ಲ!!

ಸೌಜನ್ಯ ಹತ್ಯಾ ಪ್ರಕರಣದಲ್ಲಿ ಪ್ರತ್ಯಕ್ಷದರ್ಶಿ ಸಾಕ್ಷಿಗಳಿಲ್ಲ. ಸೌಜನ್ಯ ಮತ್ತು ಸಂತೋಷ್‌ರಾವ್ ಮಣ್ಣಸಂಕದ ಬಳಿ ಇದ್ದರು ಎನ್ನುವುದಕ್ಕೆ ಸಾಕ್ಷಿಗಳಿದ್ದವು. ಆದರೆ ಆ ಎರಡೂ ಸಾಕ್ಷಿಗಳು ನ್ಯಾಯಾಲಯದ ಮುಂದೆ ಸಾಕ್ಷಿ ವಿಚಾರಣೆಗೆ ಬರಲಿಲ್ಲ. ಮೊದಲ ಸಾಕ್ಷಿ ಅಪಘಾತಕ್ಕೀಡಾಗಿ ಕೋಮಾ ಪರಿಸ್ಥಿತಿಯಲ್ಲಿ ಆಸ್ಪತ್ರೆಯಲ್ಲಿದ್ದುದರಿಂದ ನ್ಯಾಯಾಲಯಕ್ಕೆ ಬರಲು ಸಾಧ್ಯವಾಗದಿದ್ದರೆ ಎರಡನೇ ಸಾಕ್ಷಿಯನ್ನು ಪ್ರಾಸಿಕ್ಯೂಷನ್ ನ್ಯಾಯಾಲಯಕ್ಕೆ ಕರೆಸಲೇ ಇಲ್ಲ. ಈ ಕಾರಣದಿಂದಾಗಿಯೇ ನ್ಯಾಯಾಲಯದಲ್ಲಿ ವಿಚಾರಣೆ ನಡೆದು ತೀರ್ಪು ಪ್ರಕಟವಾದ ಸಂದರ್ಭದಲ್ಲಿ ನ್ಯಾಯಾಧೀಶರು ಬೆಟ್ಟು ಮಾಡಿದಂತಹ ಅಂಶ ಎಂದರೆ ಸಂತೋಷ್‌ರಾವ್ ಮಣ್ಣಸಂಕದಲ್ಲಿ ಇದ್ದ ಎನ್ನುವುದಕ್ಕೆ ಸಾಕ್ಷ್ಯ ಸಿಗಲಿಲ್ಲ ಎಂಬುದು. ಆದಕಾರಣದಿಂದಾಗಿ ಈ ಪ್ರಕರಣದಲ್ಲಿ ಪ್ರಮುಖ ಸಾಕ್ಷ್ಯವಾಗಿ ಪರಿಗಣಿಸಲ್ಪಡಬೇಕಾದದ್ದು ಫಾರೆನ್ಸಿಕ್ ಸಾಕ್ಷ್ಯಗಳು. ಪೊಲೀಸರು ತನಿಖಾ ಸಂದರ್ಭದಲ್ಲಿ ಫಾರೆನ್ಸಿಕ್ ಲ್ಯಾಬ್‌ಗೆ ಕಳುಹಿಸಿದ್ದ ಐಟವ್‌ಗಳನ್ನು ಪರೀಕ್ಷೆಗೊಳಪಡಿಸಿದಂತಹ ಎಫ್‌ಎಸ್‌ಎಲ್‌ನ ಸಹಾಯಕ ನಿರ್ದೇಶಕ ವಿನೋದ್ ಜೆ. ಲಕ್ಕಪ್ಪನ್ ಅವರು ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳಿದ್ದರು. ತಾನು ನೀಡಿದ್ದ ವರದಿಯ ಬಗ್ಗೆ ವಿವರಣೆಯನ್ನು ಒದಗಿಸಿದ್ದರು. ಪ್ರಾಸಿಕ್ಯೂಷನ್ ಪರ ವಕೀಲರ ಪ್ರಶ್ನೆಗಳಿಗೆ ಸುದೀರ್ಘವಾಗಿ ಉತ್ತರಿಸಿದ್ದರು. ಅವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಗುರಿಪಡಿಸಿದ್ದರು. ಅವರ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರಿಸಿದ್ದರು. ಅವರು ನ್ಯಾಯಾಲಯದಲ್ಲಿ ನೀಡಿದಂತಹ ಉತ್ತರಗಳ ಪ್ರಮುಖ ಅಂಶಗಳನ್ನು ಗಮನಿಸಬಹುದು.

ವಿನೋದ್ ಜೆ. ಲಕ್ಕಪ್ಪನ್ ಅವರು ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಮತ್ತು ಪಿಎಚ್‌ಡಿ ಪದವಿಯನ್ನು ಜೀವ ರಸಾಯನ ಶಾಸ್ತ್ರ ವಿಭಾಗದಲ್ಲಿ ಪಡೆದಿದ್ದವರು. ಸಾಮಾನ್ಯವಾಗಿ ರಕ್ತ ಮೂತ್ರ ಮತ್ತು ವೀರ್ಯ ಅಂದರೆ ಬಯಾಲಾಜಿಕಲ್ ಸ್ಯಾಂಪಲ್ಸ್‌ನ್ನು ಶೇಖರಿಸಿದ 72 ಗಂಟೆಯ ಒಳಗಾಗಿ ಸೂಕ್ತವಾಗಿ ಶೇಖರಣೆ ಮಾಡಿ ಎಫ್‌ಎಸ್‌ಎಲ್‌ಗೆ ಕಳುಹಿಸಿದಲ್ಲಿ ಸರಿಯಾದ ರೀತಿಯಲ್ಲಿ ವರದಿ ಬರುತ್ತದೆ. ಸೌಜನ್ಯ ಪ್ರಕರಣದಲ್ಲಿ ಆಕೆಗೆ ಸಂಬಂಧಪಟ್ಟಂತಹ ರಕ್ತ ಮತ್ತು ಇತರ ವಸ್ತುಗಳನ್ನು ಶೇಖರಿಸಿದ ದಿನಾಂಕ 20.10.2012 ಆಗಿರುತ್ತದೆ. ಅಂದರೆ ಸೌಜನ್ಯಳ ಪೋಸ್ಟ್‌ಮಾರ್ಟಂ ಮಾಡಿದ ದಿನದಿಂದ ಕೇವಲ 10 ದಿನದಲ್ಲಿ ಸ್ಯಾಂಪಲ್‌ಗಳನ್ನು ಪರೀಕ್ಷೆಗೆ ಕಳುಹಿಸಲಾಗಿದೆ. ಸ್ಯಾಂಪಲ್‌ಗಳು ಪರೀಕ್ಷೆಗೆ ಸ್ವೀಕರಿಸಿದ 10 ತಿಂಗಳ ನಂತರ ವರದಿಯನ್ನು ನೀಡಲಾಗಿದೆ. ಈ ಬಗ್ಗೆ ಒಬ್ಸರ್ವೇಷನ್ ಪುಸ್ತಕದಲ್ಲಿ ದಿನಾಂಕವನ್ನು ನಮೂದಿಸಲಾಗಿದೆ. ಆದರೆ ದಿನಾಂಕವನ್ನು ದಾಖಲೆ ನೋಡದೆ ಹೇಳಲು ಸಾಧ್ಯವಿಲ್ಲ. ಈ ವಸ್ತುಗಳನ್ನು ವೈದ್ಯರಾದ ಪುರುಷೋತ್ತಮ್ ಅವರು ಪಡೆದುಕೊಂಡಿದ್ದರು.

ಘಟನೆಯ ದಿನಾಂಕದ ಬಗ್ಗೆ ಮಾಹಿತಿ ಇರುವುದಿಲ್ಲ. ವೆಜಿನಲ್ ಸ್ವಾಬ್‌ನಲ್ಲಿ ಏನನ್ನು ತೆಗೆದಿದ್ದಾರೆ ಎನ್ನುವುದು ಗೊತ್ತಾಗುವುದಿಲ್ಲ. ಆ ವೆಜಿನಲ್ ಸ್ವಾಬ್‌ನಲ್ಲಿ ಯಾವುದಾದರೂ ಬೇರೆ ವಸ್ತುಗಳು ಇದ್ದರೆ ಕಂಡು ಹಿಡಿಯಲು ಸಾಧ್ಯವಿದೆ. ವೆಜಿನಲ್ ಸ್ವಾಬ್‌ನಲ್ಲಿ ಮಣ್ಣಿನಂಶ ಇತ್ತೋ ಇಲ್ವೋ ಎಂಬ ಬಗ್ಗೆ ಪರಿವೀಕ್ಷಣಾ ಪುಸ್ತಕದಲ್ಲಿ ಬರೆದಿರಬಹುದು ಎಂದು ನ್ಯಾಯಾಲಯಕ್ಕೆ ವಿವರಿಸಿದ ವಿನೋದ್ ಜೆ. ಲಕ್ಕಪ್ಪನ್‌ರವರು ನ್ಯಾಯಾಲಯದ ಮುಂದೆ ಇದ್ದಂತಹ ವೆಜಿನಲ್ ಸ್ವಾಬ್ ಪರಿಶೀಲಿಸಿ ಮಣ್ಣಿನಂಶ ಕಂಡು ಬರುತ್ತಿಲ್ಲ. ಆದರೆ ಅದನ್ನು ಶೇಖರಿಸಿದ ಬಾಟಲ್‌ನಲ್ಲಿ ಮಣ್ಣು ಇದೆ ಎಂದು ಒಪ್ಪಿಕೊಂಡರು.

ಪೊಲೀಸರು ತಂದು ಕೊಟ್ಟಿರುವ ವಸ್ತುಗಳನ್ನು ಪಡೆದುಕೊಳ್ಳುವ ಸಮಯದಲ್ಲಿ ಅವುಗಳನ್ನು ಪರಿಶೀಲನೆ ಮಾಡುವುದಿಲ್ಲ. ಆರೋಪಿಯ ಕೂದಲು ಅಲ್ಲದೆ ಬೇರೆ ಕೂದಲು ಸಹ ಕಂಡು ಬಂದಿದೆ. ಯಾರಾದರೂ ಅನುಮಾನಸ್ಪದ ವ್ಯಕ್ತಿಗಳು ಇದ್ದಲ್ಲಿ ಅವರ ರಕ್ತದ ಮಾದರಿಯನ್ನು ಪಡೆದುಕೊಂಡು ಈಗಲೂ ಸಹ ಅದರ ಡಿಎನ್‌ಎ ಪರೀಕ್ಷೆ ಮಾಡಿ ಹೋಲಿಕೆ ಮಾಡಬಹುದು ಎಂದು ನ್ಯಾಯಾಲಯಕ್ಕೆ ವಿವರಿಸಿದರು. ಸೌಜನ್ಯಳ ಉಗುರುಗಳಲ್ಲಿ ಆರೋಪಿಯ ರಕ್ತದ ಮಾದರಿ ಕಂಡು ಬಂದಿಲ್ಲ. ಈ ಪ್ರಕರಣ ದಲ್ಲಿ ಆರೋಪಿಯ ಮೈಮೇಲೆ ತರಚಿದ ಗಾಯಗಳು ಇದ್ದ ಪಕ್ಷದಲ್ಲಿ ಸೌಜನ್ಯಳ ಉಗುರುಗಳಲ್ಲಿ ಆ ಅಂಶಗಳು ಕಂಡು ಬರಬೇಕಿತ್ತು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.



ವಿಠಲಗೌಡ

ಸೌಜನ್ಯ ಪ್ರಕರಣದ ಮತ್ತೊಬ್ಬ ಸಾಕ್ಷಿ ಧರ್ಮಸ್ಥಳದಲ್ಲಿ ಅಂಗಡಿ ಹೊಂದಿರುವ ಉಮಾಕಾಂತ್ ಶೆಟ್ಟಿ ಅವರ ಮಗ ಅವಿನಾಶ್ ಶೆಟ್ಟಿ. ಸೌಜನ್ಯ ಕುಟುಂಬದ ಬಗ್ಗೆ ಅರಿವಿದ್ದ ಅವಿನಾಶ್ ಶೆಟ್ಟಿಯವರು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುತ್ತಾ ಸೌಜನ್ಯಳ ಮಾವ ವಿಠಲ ಗೌಡರು ಪರಿಚಿತರು. ಸೌಜನ್ಯ ನಾಪತ್ತೆಯಾದ ಬಗ್ಗೆ ವಿಠಲಗೌಡರು ತಿಳಿಸಿದ್ದರು. ಆ ಹಿನ್ನೆಲೆಯಲ್ಲಿ ಸುಮಾರು ಜನ ಸೇರಿ ಆಕೆಯನ್ನು ಹುಡುಕಿದರು. ಆಕೆಯ ಮನೆಗೆ ಹೋಗುವ ದಾರಿಯಲ್ಲಿ ಮತ್ತು ಮಣ್ಣಸಂಕದ ಪರಿಸರದಲ್ಲಿ ರಾತ್ರಿ 11.30ರವರೆಗೂ ಹುಡುಕಿದರೂ ಆಕೆ ಸಿಗಲಿಲ್ಲ. ಮರುದಿನ ಆಕೆಯ ಮೃತದೇಹ ಮಣ್ಣಸಂಕದಲ್ಲಿ ಸಿಕ್ಕಿತ್ತು. ಪೊಲೀಸರು ಬಂದು ಮಹಜರು ಮಾಡಿದರು. ಆ ಮಹಜರಿಗೆ ಸಹಿ ಮಾಡಿದ್ದೇನೆ ಎಂದು ನ್ಯಾಯಾಲಯಕ್ಕೆ ವಿವರಿಸಿ ಸಹಿಯನ್ನು ಗುರುತಿಸಿದರು. ಶವ ಪಂಚನಾಮೆ ಸಂದರ್ಭದಲ್ಲಿ ಸೌಜನ್ಯಳ ಸ್ಕೂಲ್ ಬ್ಯಾಗ್ ಮತ್ತು ಇತರ ವಸ್ತುಗಳನ್ನು ವಶಪಡಿಸಿಕೊಂಡರು. ಈ ವೇಳೆಯಲ್ಲಿ ರಾಘವೇಂದ್ರ, ಮತ್ತು ಕೃಷ್ಣ ಇದ್ದರು. ಬೆಳ್ತಂಗಡಿ ಸಬ್ ಇನ್ಸ್‌ಪೆಕ್ಟರ್ ಯೋಗೀಶ್ ಕುಮಾರ್ ಶವ ಮಹಜರು ಮಾಡಿದ್ದರು ಎಂದು ಅವರು ವಿವರಿಸಿದರು.



ಸಂತೋಷ್ ರಾವ್

ಆರೋಪಿ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸಿದ ಅವಿನಾಶ್ ಶೆಟ್ಟಿಯವರು ಸಂಜೆ 6.30ರ ವೇಳೆಗೆ ಮಣ್ಣಸಂಕದ ಬಳಿಗೆ ಹೋಗಿದ್ದು ಉಜಿರೆ ಮತ್ತು ಧರ್ಮಸ್ಥಳಕ್ಕೆ ಹೋಗುವವರು ಬಹಳಷ್ಟು ಮಂದಿ ಮಣ್ಣಸಂಕದ ಹತ್ತಿರ ಹೋಗುತ್ತಿರುತ್ತಾರೆ. ಮಣ್ಣಸಂಕದ ಹತ್ತಿರ ಪ್ರಕೃತಿ ಚಿಕಿತ್ಸಾಲಯ ಇದೆ. ಸೌಜನ್ಯ ಬಸ್ ನಿಲ್ದಾಣದಿಂದ ಆಕೆಯ ಮನೆಗೆ ಹೋಗುವ ದಾರಿಯಲ್ಲಿ ಸುಮಾರು 500 ಮೀಟರ್‌ನಷ್ಟು ಮುಖ್ಯ ರಸ್ತೆಗೆ ಕಾಣಿಸುತ್ತದೆ. ಆದರೆ ಸಾಕ್ಷಿದಾರರು ಅಲ್ಲಿ ತಿರುವು ಇರುವುದರಿಂದ ಕಾಣಿಸುವುದಿಲ್ಲ ಎಂದು ಸ್ಪಷ್ಟ ಪಡಿಸಿದರು.

ಆ ದಿನ ಸಂಜೆ ಅಂದರೆ 9.10.2012ರಂದು ಸುಮಾರು ಸಾವಿರದಷ್ಟು ಮಂದಿ ಸೌಜನ್ಯಳನ್ನು ಹುಡುಕಿದ್ದಾರೆ. ಆದರೆ ಯಾವುದೇ ಕುರುಹು ಸಿಗಲಿಲ್ಲ. ಮಾರನೇ ದಿನ ಮೃತದೇಹ ದೊರೆತ ಸ್ಥಳದಲ್ಲಿ ಹಿಂದಿನ ದಿನ ಹುಡುಕಿದ್ದೆವು. ಮೃತದೇಹ ದೊರೆತ ಸ್ಥಳದಿಂದ ಸುಮಾರು 1000 ಮೀಟರ್ ಎತ್ತರದಲ್ಲಿಯೂ ಹುಡುಕಿದ್ದೆವು. 9 ಮತ್ತು 10ನೇ ತಾರೀಕಿನಂದು ಮಳೆ ಬಂದಿತ್ತು. ಮೃತದೇಹ ದೊರೆತ ಸ್ಥಳದ ಕೆಳಗಡೆ ನೀರು ಹರಿಯುವ ತೋಡು ಇದೆ. ಅದರಲ್ಲಿ ಬಹಳ ನೀರು ಹರಿದಿತ್ತು. ತನ್ನ ಹೇಳಿಕೆಯಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಎಸ್‌ಐ ಯೋಗೀಶ್ ಕುಮಾರ್ ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದು ಹೇಳಿ ದಾಖಲೆಗಳನ್ನು ಗುರುತಿಸಿದರು.



ಧರ್ಮಸ್ಥಳದಲ್ಲಿ ವ್ಯಾಪಾರ ಮಾಡಿಕೊಂಡಿದ್ದ ವೆಂಕಟೇಶ್ ಎಂಬವರ ಮಗ ರಾಘವೇಂದ್ರ, ಈ ಪ್ರಕರಣದ ಇಪ್ಪತ್ತನೇ ಪ್ರಾಸಿಕ್ಯೂಷನ್ ಸಾಕ್ಷಿ. ದಿ. 10.11.2012ರಂದು ಬೆಳ್ತಂಗಡಿ ಪೊಲೀಸರು ಕರೆಸಿದ್ದರು. ಆದರೆ ವರ್ಷ ನೆನಪಿಲ್ಲ ಎಂದು ಹೇಳಿದ ರಾಘವೇಂದ್ರ ಅವರು ಬಂದ ಬಾಲಕಿಯ ಶವ ನೇತ್ರಾವತಿಯ ಮಣ್ಣಸಂಕದ ಹತ್ತಿರ ಇದ್ದು ಅಲ್ಲಿ ಪೊಲೀಸರು ತಯಾರಿಸಿದ್ದ ಪಂಚನಾಮೆಗೆ ಸಹಿ ಮಾಡಿದ್ದು ಅದನ್ನು ಗುರುತಿಸಿದರು. ಎಸ್‌ಐ ಯೋಗೀಶ್ ಅವರು ಅಲ್ಲಿ ಇದ್ದರು. ಆ ಸಂದರ್ಭದಲ್ಲಿ ಜನಾರ್ಧನ್ ಮತ್ತು ಅವಿನಾಶ್ ಇದ್ದರು. ಮೃತದೇಹವನ್ನು ಸರಕಾರಿ ಆಸ್ಪತ್ರೆಗೆ ಕೊಂಡೊಯ್ದರು. ಪೊಲೀಸರು ಒಂದು ಬ್ಯಾಗನ್ನು ತೆಗೆದುಕೊಂಡರು. ಪೊಲೀಸರಿಗೆ ನಾನು ಹೇಳಿಕೆ ನೀಡಿದ್ದೇನೆ ಎಂದು ನ್ಯಾಯಾಲಯದಲ್ಲಿ ಒಪ್ಪಿಕೊಂಡರು. ಪಾಟೀಸವಾಲಿಗೆ ಉತ್ತರಿಸಿದ ಅವರು ಸಾಕ್ಷಿಯಾಗಿ ಬರಲು ಪೊಲೀಸರು ನೋಟೀಸು ನೀಡಿರಲಿಲ್ಲ. ಹೇಳಿಕೆಯಲ್ಲಿ ಏನು ಬರೆದಿದ್ದಾರೆ ಎನ್ನುವುದು ಗೊತ್ತಿಲ್ಲ. ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಎಂದು ನ್ಯಾಯಾಲಯಕ್ಕೆ ತಿಳಿಸಿದರು.

ಈ ಪ್ರಕರಣದ 22ನೇ ಸಾಕ್ಷಿ ಗಣೇಶ್ ಪೆಲ್ಲತಡಕ. ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಹೆಡ್‌ಕಾನ್ಸ್‌ಟೇಬಲ್ ಆಗಿದ್ದರು. ಅವರು 2011-12ರಂದು ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸಿದ್ದರು. ಆಗ ಭಾಸ್ಕರ್ ರೈ ಅವರು ವೃತ್ತ ನಿರೀಕ್ಷಕರಾಗಿದ್ದರು. 9.10.2012ರಂದು ಬೆಳ್ತಂಗಡಿ ಠಾಣೆಯಲ್ಲಿ ಸೌಜನ್ಯ ಕಾಣೆಯಾಗಿದ್ದಾಳೆ ಎಂದು ದೂರು ಬಂದಿತ್ತು. ಮರುದಿನ ಎಸ್‌ಐ ಅವರಿಗೆ ಮಾಹಿತಿ ಬಂದ ಮೇರೆಗೆ ಅವರು ಇಲಾಖಾ ಜೀಪಿನಲ್ಲಿ ಧರ್ಮಸ್ಥಳದ ಮಣ್ಣಸಂಕಕ್ಕೆ ಹೋಗಿದ್ದು ಆ ಸಂದರ್ಭದಲ್ಲಿ ಜೀಪಿನ ಚಾಲಕರಾಗಿದ್ದವರು. ಮಣ್ಣಸಂಕದ ಬಳಿ ನೊಂದ ಬಾಲಕಿಯ ಶವ ಇತ್ತು. ಸರಕಾರಿ ಕ್ಯಾಮರಾದಲ್ಲಿ ಘಟನಾ ಸ್ಥಳದಲ್ಲಿ ವೀಡಿಯೋ ಮಾಡಿದ್ದು ಅದನ್ನು ಠಾಣೆಯ ಕಂಪ್ಯೂಟರ್‌ಗೆ ಕಾಪಿ ಮಾಡಿದ್ದರು. ತನಿಖಾಧಿಕಾರಿಗಳು ಹೇಳಿಕೆ ದಾಖಲಿಸಿಕೊಂಡಿದ್ದರು ಎಂದು ಸಾಕ್ಷಿದಾರರು ನ್ಯಾಯಾಲಯಕ್ಕೆ ವಿವರಿಸಿದರು. ಪಾಟೀಸವಾಲಿಗೆ ಉತ್ತರಿಸಿದ ಸಾಕ್ಷಿ ಗಣೇಶ್ ಅವರು ಕ್ಯಾಮೆರಾದಲ್ಲಿ ವೀಡಿಯೋ ಮಾಡಲು ನಾನು ಪರಿಣಿತಿ ಪಡೆದಿಲ್ಲ. ಕ್ಯಾಮರಾ ಮ್ಯಾನ್ ಬಾರದ ಕಾರಣಕ್ಕಾಗಿ ಅನಿವಾರ್ಯವಾಗಿ ವೀಡಿಯೋ ತೆಗೆದಿದ್ದೇನೆ. ಸರಕಾರಿ ಕ್ಯಾಮರಾದಲ್ಲಿ ವೀಡಿಯೋ ತೆಗೆದೆ ಎಂದು ಸಿಬಿಐ ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ. ಅಧಿ ಕೃತ ಚಾಲಕರು ಇಲ್ಲದ ಕಾರಣಕ್ಕಾಗಿ ಜೀಪನ್ನು ಚಲಾಯಿಸಿಕೊಂಡು ಹೋಗಿದ್ದೇನೆ. ನಾನು ಘಟನಾ ಸ್ಥಳಕ್ಕೆ ಹೋಗಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿ ಕಾರಿಗಳ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು ಒಂದು ವರ್ಷಗಳ ಕಾಲ ಪ್ರತಿಭಟನೆ ನಡೆಯಿತು ಎಂದರೆ ಸರಿ ಎಂದು ನ್ಯಾಯಾಲಯಕ್ಕೆ ವಿವರಿಸಿದರು.

ಮುಂದುವರಿಯುವುದು.....

# ಮದುವೆ ನಂಬಿಸಿ ಪ್ರೀತಿ ಲೈಂಗಿಕ ದೋಖಾ; ಇಂಜಿನಿಯರ್ ವಿರುದ್ಧ ಅತಿಥಿ ಶಿಕ್ಷಕಿಯ ದೂರು

ರಾಯಚೂರು

✍ ವೀರನಗೌಡ


ಮದುವೆಯಾಗುವುದಾಗಿ ನಂಬಿಸಿ ಹಲವು ವರ್ಷಗಳ ಕಾಲ ಪ್ರೀತಿಸಿ, ಬಳಿಕ ಕೈಕೊಟ್ಟ ಇಂಜಿನಿಯರ್ ವಿರುದ್ಧ ಅತಿಥಿ ಶಿಕ್ಷಕಿಯೊಬ್ಬರು ಮಹಿಳಾ ಪೊಲೀಸ್ ಠಾಣೆ ಮೆಟ್ಟಿಲೇರಿರುವ ಘಟನೆ ಜಿಲ್ಲೆಯಲ್ಲಿ ಬೆಳಕಿಗೆ ಬಂದಿದೆ. ಪ್ರೀತಿ ಹೆಸರಿನಲ್ಲಿ ದೀರ್ಘಕಾಲ ಸಂಬಂಧ ಬೆಳೆಸಿ, ಲೈಂಗಿಕವಾಗಿ ದುರುಪಯೋಗ ಮಾಡಿಕೊಂಡು ನಂತರ ಮದುವೆಗೆ ನಿರಾಕರಿಸಿದ್ದಾನೆ ಎಂಬ ಗಂಭೀರ ಆರೋಪದೊಂದಿಗೆ ಮಹಿಳೆ ದೂರು ದಾಖಲಿಸಿದ್ದು, ಪ್ರಕರಣ ಈಗ ಪೊಲೀಸ್ ತನಿಖೆಯಲ್ಲಿದೆ.

ದೇವದುರ್ಗ ತಾಲ್ಲೂಕಿನ ಮೂಲದ ಮಲ್ಲಿಕಾರ್ಜುನ್ ಎಂಬ ಇಂಜಿನಿಯರ್ ವಿರುದ್ಧ ಈ ದೂರು ದಾಖಲಾಗಿದೆ. ಸಂತ್ರಸ್ತೆ ಅತಿಥಿ ಶಿಕ್ಷಕಿಯಾಗಿದ್ದು, ಇಬ್ಬರೂ ಕಾಲೇಜು ದಿನಗಳಿಂದಲೇ ಪರಸ್ಪರ ಪರಿಚಯ ಹೊಂದಿದ್ದರು. ಈ ಪರಿಚಯವೇ ಮುಂದೆ ಪ್ರೀತಿಗೆ ತಿರುಗಿ, ಸುಮಾರು 7ರಿಂದ 8 ವರ್ಷಗಳ ಕಾಲ ಇಬ್ಬರೂ ಆತ್ಮೀಯ ಸಂಬಂಧದಲ್ಲಿ ಇದ್ದರು ಎನ್ನಲಾಗಿದೆ. ಮಂತ್ರಾಲಯ, ಆಲಮಟ್ಟಿ ಡ್ಯಾಂ ಸೇರಿದಂತೆ ಹಲವು ಸ್ಥಳಗಳಿಗೆ ಭೇಟಿ ನೀಡುತ್ತಾ, ಭವಿಷ್ಯದಲ್ಲಿ ಮದುವೆಯಾಗುವುದಾಗಿ ಯುವಕ ನಂಬಿಕೆ ಮೂಡಿಸಿದ್ದಾನೆ ಎಂದು ಮಹಿಳೆ ಆರೋಪಿಸಿದ್ದಾರೆ.


ಎಸ್ಪಿ ಅರುಣಾಂಗ್ಶು ಗಿರಿ


ಎಎಸ್ಪಿ ಕುಮಾರಸ್ವಾಮಿ







ಮದುವೆಯಾಗುತ್ತೇನೆ ಎಂಬ ಭರವಸೆಯನ್ನೇ ಆಧಾರ ಮಾಡಿಕೊಂಡು ಹಲವು ಬಾರಿ ತನ್ನೊಂದಿಗೆ ದೈಹಿಕ ಸಂಪರ್ಕ ಹೊಂದಿದ್ದಾನೆ. ಕೆಲ ಸಂದರ್ಭಗಳಲ್ಲಿ ಬಲವಂತಕ್ಕೂ ಮುಂದಾಗಿದ್ದಾನೆ ಎಂದು ಸಂತ್ರಸ್ತೆ ಗಂಭೀರವಾಗಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಈ ಎಲ್ಲಾ ಅವಧಿಯಲ್ಲಿ ಇಬ್ಬರ ನಡುವೆ ನಡೆದ ಸಂಭಾಷಣೆಗಳು, ಫೋಟೋಗಳು, ವಿಡಿಯೋಗಳು ಹಾಗೂ ಆಡಿಯೋ ದಾಖಲೆಗಳನ್ನು ಮಹಿಳೆ ಪೊಲೀಸರಿಗೆ ಸಲ್ಲಿಸಿದ್ದಾರೆ.

ಆದರೆ, ಮದುವೆ ವಿಚಾರ ಪ್ರಸ್ತಾಪವಾಗುತ್ತಿದ್ದಂತೆಯೇ ಯುವಕ ತನ್ನ ನಿಲುವು ಬದಲಿಸಿಕೊಂಡಿದ್ದಾನೆ. ಇಬ್ಬರೂ ಬೇರೆ ಜಾತಿಯವರು ಎಂಬ ಕಾರಣ ಮುಂದಿಟ್ಟು ಮದುವೆಗೆ ನಿರಾಕರಿಸಿದ್ದಾನೆ. ಜೊತೆಗೆ ವಿವಿಧ ಸುಳ್ಳು ನೆಪಗಳನ್ನು ಹೇಳುತ್ತಾ ದೂರ ಉಳಿಯಲು ಯತ್ನಿಸಿದ್ದಾನೆ ಎಂದು ಮಹಿಳೆ ಆರೋಪಿಸಿದ್ದಾರೆ. ಇದರಿಂದ ಮಾನಸಿಕವಾಗಿ ಕುಗ್ಗಿದ ಸಂತ್ರಸ್ತೆ ಕೊನೆಗೆ ನ್ಯಾಯಕ್ಕಾಗಿ ಪೊಲೀಸ್ ಠಾಣೆ ಮೊರೆ ಹೋಗಿದ್ದಾಳೆ.

ರಾಯಚೂರು ಸದರ್ ಬಜಾರ್ ಮಹಿಳಾ ಪೊಲೀಸ್ ಠಾಣೆಯಲ್ಲಿ ಮಲ್ಲಿಕಾರ್ಜುನ್ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಪ್ರಕರಣದ ತನಿಖೆ ಪ್ರಗತಿಯಲ್ಲಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ ಅವರ ಮಾರ್ಗದರ್ಶನದಲ್ಲಿ, ಎಎಸ್ಪಿ ಕುಮಾರಸ್ವಾಮಿ ಹಾಗೂ ಮಹಿಳಾ ಪೊಲೀಸ್ ಠಾಣೆಯ ಸಿಪಿಐ ಅಮರೇಶ್ ನೇತೃತ್ವದಲ್ಲಿ ಪೊಲೀಸರು ಸಾಕ್ಷ್ಯಾಧಾರಗಳನ್ನು ಪರಿಶೀಲಿಸುತ್ತಿದ್ದಾರೆ. 78 ವರ್ಷಗಳ ಸಂಬಂಧದ ಸ್ವರೂಪ, ಆರೋಪಗಳ ಸತ್ಯಾಸತ್ಯತೆ ಹಾಗೂ ಸಲ್ಲಿಸಲಾದ ಡಿಜಿಟಲ್ ಸಾಕ್ಷ್ಯಗಳ ವಿಶ್ಲೇಷಣೆ ನಡೆಯುತ್ತಿದೆ ಎಂದು ತಿಳಿದುಬಂದಿದೆ.

ಇನ್ನೊಂದೆಡೆ, ಪ್ರಕರಣ ದಾಖಲಾಗಿದ್ದರೂ ಆರೋಪಿಯನ್ನು ಬಂಧಿಸಲು ಪೊಲೀಸರು ವಿಳಂಬ ಮಾಡುತ್ತಿದ್ದಾರೆ ಎಂಬ ಆರೋಪವೂ ಕೇಳಿಬರುತ್ತಿದೆ. ಸಂತ್ರಸ್ತೆ ವಿವಿಧ ಸಂಘ ಸಂಸ್ಥೆಗಳ ಸಹಾಯ ಕೇಳಿದ್ದು, ತನ್ನೊಂದಿಗೆ ಪ್ರೀತಿ ಬೆಳೆಸಿದ ಯುವಕನೊಂದಿಗೆ ಮದುವೆ ಮಾಡಿಕೊಡಬೇಕು ಅಥವಾ ನ್ಯಾಯ ಒದಗಿಸಬೇಕು ಎಂದು ಮನವಿ ಮಾಡಿಕೊಂಡಿದ್ದಾಳೆ.


ಡಿವೈಎಸ್ಪಿ ಶಾಂತವೀರ


ಸಿಪಿಐ ಅಮರೇಶ್

ಸಂತ್ರಸ್ತೆ ಪ್ರಸ್ತುತ ಸರ್ಕಾರಿ ಶಾಲೆಯಲ್ಲಿ ಅತಿಥಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರೆ, ಆರೋಪಿ ಮಲ್ಲಿಕಾರ್ಜುನ್ ದೇವದುರ್ಗ ಜಲ ಸಂಪನ್ಮೂಲ ಇಲಾಖೆಯಡಿಯಲ್ಲಿ ಜೂನಿಯರ್ ಇಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಎಎಸ್ಪಿ ಕುಮಾರಸ್ವಾಮಿ, ಸಿಪಿಐ ಅಮರೇಶ್ ನೇತೃತ್ವದಲ್ಲಿ ತನಿಖೆ ಮುಂದುವರಿದಿದ್ದು, ಮುಂದಿನ ದಿನಗಳಲ್ಲಿ ಮಹತ್ವದ ಬೆಳವಣಿಗೆಗಳು ಸಾಧ್ಯವೆಂದು ನಿರೀಕ್ಷಿಸಲಾಗಿದೆ.


# ನಕಲಿ ಬಂಗಾರದ ನಾಣ್ಯಗಳ ಹೆಸರಿನಲ್ಲಿ 7.5 ಲಕ್ಷ ರೂ. ವಂಚನೆ

ಬೆಂಗಳೂರು ನಗರ ಜಿಲ್ಲೆಯ ನಿವಾಸಿ ರಾಮು ಎಸ್. ಅವರಿಗೆ ಸುಲಭವಾಗಿ ಹಣ ಗಳಿಸುವ ಆಸೆ ಮೂಡಿಸುವ ರೀತಿಯಲ್ಲಿ ಬಲೆ ಬೀಸಿದ ವಂಚಕರ ತಂಡವೊಂದು ಕೊನೆಗೂ ಪೊಲೀಸರ ಬಲೆಗೆ ಬಿದ್ದಿದೆ. ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಮಹಮದ್ ಅಲಿ ಅವಟಿ ಅಲಿಯಾಸ್ ಮಹಮದ್ ರಫೀಕ್ (36) ಹಾಗೂ ಇನ್ನೊಬ್ಬ ಸಹಚರ ಸೇರಿಕೊಂಡು ಅತ್ಯಂತ ಕುಶಲತೆಯಿಂದ ರೂಪಿಸಿದ ಯುಕ್ತಿಯ ಮೂಲಕ ರಾಮುವನ್ನು ಮೋಸಗೊಳಿಸಿರುವ ಪ್ರಕರಣ ಇದೀಗ ದಾವಣಗೆರೆ ಜಿಲ್ಲೆಯ ಮಾಯಕೊಂಡ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬೆಳಕಿಗೆ ಬಂದಿದೆ. ಆರೋಪಿಗಳು ರಾಮುವಿಗೆ 'ನಮಗೆ ಅಪರೂಪದ ಬಂಗಾರದ ನಾಣ್ಯಗಳು ಸಿಕ್ಕಿವೆ, ಅವುಗಳನ್ನು ಕಡಿಮೆ ದರದಲ್ಲಿ ನಿಮಗೆ ನೀಡುತ್ತೇವೆ' ಎಂಬ ಆಮಿಷ ಒಡ್ಡಿ, ನಂಬಿಕೆ ಗಳಿಸುವ ಸಲುವಾಗಿ ಹಲವು ಬಾರಿ ಸಂಪರ್ಕ ಸಾಧಿಸಿದ್ದರು. ಅವರ ಮಾತುಗಳಿಗೆ ನಂಬಿಕೆ ಬಿದ್ದ ರಾಮುವನ್ನು ದಾವಣಗೆರೆ ಜಿಲ್ಲೆಯ ಮಾಯಕೊಂಡ ತಾಲ್ಲೂಕಿನ ಬಾಡಾ ಗ್ರಾಮದ ಸಮೀಪಕ್ಕೆ ಕರೆಸಿ, ನಿಜವಾದ ಬಂಗಾರದ ನಾಣ್ಯಗಳಂತೆ ಕಾಣುವ ನಕಲಿ ವಸ್ತುಗಳನ್ನು ತೋರಿಸಿ ವಿಶ್ವಾಸ ಮೂಡಿಸಿದರು. ಬಳಿಕ ಒಪ್ಪಂದದಂತೆ ರೂ. 7,50,000 ನಗದು ಹಣವನ್ನು ಪಡೆದುಕೊಂಡು, ಸುಮಾರು ಎರಡು ಕೆಜಿ ತೂಕದ ನಕಲಿ ಬಂಗಾರದ ನಾಣ್ಯಗಳನ್ನು ನೀಡಿ ಅಲ್ಲಿಂದ ಪರಾರಿಯಾಗಿದ್ದಾರೆ.


ಆರೋಪಿಗಳಿಂದ ನಗದನ್ನು ವಶಪಡಿಸಿಕೊಂಡಿರುವ ಪೊಲೀಸ್ ತನಿಖಾ ತಂಡ

ಮನೆಗೆ ಹಿಂದಿರುಗಿದ ನಂತರ ಸಂಶಯಗೊಂಡ ರಾಮು ನಾಣ್ಯಗಳನ್ನು ಪರಿಶೀಲಿಸಿದಾಗ ಅವು ಸಂಪೂರ್ಣ ನಕಲಿ ಎಂಬುದು ತಿಳಿದುಬಂದಿದ್ದು, ತಕ್ಷಣವೇ ಆತ ಮಾಯಕೊಂಡ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾನೆ. ಪ್ರಕರಣದ ಗಂಭೀರತೆಯನ್ನು ಅರಿತ ಠಾಣೆಯ ಇನ್ಸ್‌ಪೆಕ್ಟರ್ ರಾಘವೇಂದ್ರ ಅವರು ತಕ್ಷಣವೇ ಪ್ರಕರಣವನ್ನು ದಾಖಲಿಸಿಕೊಂಡು, ದಾವಣಗೆರೆ ಜಿಲ್ಲಾ ಎಸ್ಪಿ ಡಾ. ಹೆಚ್.ಟಿ. ಶೇಖರ್ ಹಾಗೂ ಡಿವೈಎಸ್ಪಿ ಬಸವರಾಜ್ ಅವರಿಗೆ ಮಾಹಿತಿ ನೀಡಿದರು. ಈ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ ಎಸ್ಪಿ ಡಾ. ಹೆಚ್.ಟಿ. ಶೇಖರ್ ಅವರು ಆರೋಪಿಗಳನ್ನು ಶೀಘ್ರ ಬಂಧಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಅವರ ಮಾರ್ಗದರ್ಶನದಲ್ಲಿ ಸಿಪಿಐ ರಾಘವೇಂದ್ರ ಹಾಗೂ ಪೊಲೀಸ್ ತಂಡವು ತಾಂತ್ರಿಕ ಮಾಹಿತಿ ಮತ್ತು ಸ್ಥಳೀಯ ಮಾಹಿತಿ ಆಧರಿಸಿ ಸುರ್ಘ ತನಿಖೆ ನಡೆಸಿ, ಪ್ರಮುಖ ಆರೋಪಿ ಮಹಮದ್ ಅಲಿ ಅವಟಿ ಅಲಿಯಾಸ್ ರಫೀಕ್ ಅವರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ. ಬಂಧನದ ವೇಳೆ ಆರೋಪಿಯಿಂದ ರೂ. 7,50,000 ನಗದು ಹಣವನ್ನು ವಶಪಡಿಸಿಕೊಂಡಿದ್ದು, ಪ್ರಕರಣದ ಪ್ರಮುಖ ಸಾಕ್ಷ್ಯಗಳನ್ನು ಕೂಡ ಸಂಗ್ರಹಿಸಲಾಗಿದೆ.

ಈ ಸಂಬಂಧ ಮಾಯಕೊಂಡ ಪೊಲೀಸ್ ಠಾಣೆಯಲ್ಲಿ ಕ್ರೈಂ ನಂ. 24/26 ಅಡಿಯಲ್ಲಿ ಬಿಎನ್‌ಎಸ್ ಕಾಯ್ದೆಯ ಕಲಂ 316(2), 318(2) ಹಾಗೂ 3(5) ಅನ್ವಯ ಪ್ರಕರಣ ದಾಖಲಿಸಲಾಗಿದ್ದು, ಬಂಧಿತ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಕರಣದಲ್ಲಿ ಭಾಗಿಯಾಗಿರುವ ಇನ್ನೊಬ್ಬ ಆರೋಪಿ ಇನ್ನೂ ತಲೆಮರೆಸಿಕೊಂಡಿದ್ದು, ಅವನ ಬಂಧನಕ್ಕಾಗಿ ಪೊಲೀಸರು ಶೋಧ ಕಾರ್ಯವನ್ನು ತೀವ್ರಗೊಳಿಸಿದ್ದಾರೆ. ಇಂತಹ ನಕಲಿ ಬಂಗಾರದ ವ್ಯವಹಾರಗಳ ಮೂಲಕ ಸಾರ್ವಜನಿಕರನ್ನು ಮೋಸಗೊಳಿಸುವ ಜಾಲಗಳು ಸಕ್ರಿಯವಾಗಿರುವ ಸಾಧ್ಯತೆ ಇರುವುದರಿಂದ, ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು ಎಂದು ಪೊಲೀಸರು ಮನವಿ ಮಾಡಿದ್ದಾರೆ. ಯಾವುದೇ ಅನುಮಾನಾಸ್ಪದ ವ್ಯವಹಾರಗಳು ಕಂಡುಬಂದಲ್ಲಿ ತಕ್ಷಣ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಸೂಚಿಸಲಾಗಿದೆ. ಪ್ರಕರಣವನ್ನು ಯಶಸ್ವಿಯಾಗಿ ಭೇದಿಸಿದ ತನಿಖಾ ತಂಡದ ಕಾರ್ಯಕ್ಷಮತೆಯನ್ನು ಶ್ಲಾಘಿಸಿದ ಎಸ್ಪಿ ಡಾ. ಹೆಚ್.ಟಿ. ಶೇಖರ್ ಅವರು, ಇಂತಹ ವಂಚನೆ ಪ್ರಕರಣಗಳಿಗೆ ಕಡಿವಾಣ ಹಾಕಲು ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.


ಎಸ್ಪಿ ಡಾ. ಹೆಚ್.ಟಿ. ಶೇಖರ್

-ಹಿರಿಯೂರು ರಫೀಕ್

# ‘ಜೀವನ ಕಟ್ಟಿಕೊಡ್ತೀನಿ’ ಅಂತ ನಂಬಿಸಿ ಕೊನೆಗೆ ಜೀವವೇ ಕಿತ್ತುಕೊಂಡ ಹಂತಕ!

**ಬೆಂಗಳೂರು ನಗರವನ್ನು ಬೆಚ್ಚಿಬೀಳಿಸಿದ ಮತ್ತೊಂದು ಕ್ರೂರ ಘಟನೆ ಬೆಳಕಿಗೆ ಬಂದಿದ್ದು, ಪ್ರೀತಿಸಿ ಮದುವೆಯಾಗುವುದಾಗಿ ನಂಬಿಸಿದ್ದ ಪ್ರಿಯಕರನೇ ಯುವತಿಯ ಜೀವ ಕಿತ್ತುಕೊಂಡಿರುವುದು ಸಮಾಜವನ್ನು ಆಘಾತಕ್ಕೊಳಪಡಿಸಿದೆ. ಮೊದಲ ಪತ್ನಿಯನ್ನು ಬಿಟ್ಟು ಹೊಸ ಜೀವನ ಕಟ್ಟಿಕೊಳ್ಳುವ ಭರವಸೆ ನೀಡಿದ ವ್ಯಕ್ತಿ, ಕೊನೆಗೆ ತನ್ನ ಜೊತೆ ಬದುಕಲು ಬಂದಿದ್ದ 23 ವರ್ಷದ ಯುವತಿಯನ್ನು ಕೊಲೆ ಮಾಡಿ ಆತ್ಮಹತ್ಯೆಯಂತೆ ನಾಟಕವಾಡಿರುವ ಘಟನೆ ವರ್ತೂರು ಪೊಲೀಸ್ ಠಾಣೆ ವ್ಯಾಪ್ತಿಯ ಕೊಡತಿ ಬಳಿ ನಡೆದಿದೆ. ಈ ಘಟನೆ ಪ್ರೇಮ, ನಂಬಿಕೆ ಮತ್ತು ದ್ರೋಹದ ಕಹಿ ಮಿಶ್ರಣವಾಗಿ, ಮತ್ತೊಂದು ಜೀವ ಹಾನಿಗೆ ಕಾರಣವಾಗಿದೆ.**

ಕೊಡಗಿನ ಪೊನ್ನಂಪೇಟೆ ಮೂಲದ 23 ವರ್ಷದ ರಂಜಿತಾ ಮತ್ತು 29 ವರ್ಷದ ಅಯ್ಯಪ್ಪ ಈ ಪ್ರಕರಣದ ಕೇಂದ್ರ ಪಾತ್ರಗಳು. ಅಯ್ಯಪ್ಪ ಈಗಾಗಲೇ ವಿವಾಹಿತನಾಗಿದ್ದರೂ ತನ್ನ ಪತ್ನಿಯೊಂದಿಗೆ ಜಗಳ ಮಾಡಿಕೊಂಡು ದೂರವಾಗಿದ್ದ. ಈ ನಡುವೆ ತನ್ನದೇ ಊರಿನ ರಂಜಿತಾಳ ಜೊತೆ ಪರಿಚಯ ಬೆಳೆಸಿಕೊಂಡು, ಆಕೆಯೊಂದಿಗೆ ಪ್ರೇಮ ಸಂಬಂಧ ಬೆಳೆಸಿದ್ದ. ತನ್ನ ಹಿಂದಿನ ವಿವಾಹದ ವಿಚಾರ ತಿಳಿದಿದ್ದರೂ, ಅಯ್ಯಪ್ಪ ನೀಡಿದ ಭರವಸೆಗಳಿಗೆ ಮರುಳಾದ ರಂಜಿತಾ, ಆತನನ್ನು ನಂಬಿ ತನ್ನ ಜೀವನವನ್ನು ಅವನೊಂದಿಗೆ ಕಟ್ಟಿಕೊಳ್ಳಲು ಮುಂದಾಗಿದ್ದಳು. ‘ನಿನ್ನನ್ನೇ ಮದುವೆಯಾಗ್ತೀನಿ, ಒಳ್ಳೆಯ ಜೀವನ ಕೊಡ್ತೀನಿ’ ಎಂಬ ಮಾತುಗಳಿಂದ ಆಕೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡ ಅಯ್ಯಪ್ಪ, ಆಕೆಯ ಕುಟುಂಬವನ್ನೂ ಒಪ್ಪಿಸಿಕೊಂಡಿದ್ದ.


ಕೊಲೆಯಾದ ರಂಜಿತಾ

ಹೊಸ ಜೀವನದ ಕನಸುಗಳೊಂದಿಗೆ ರಂಜಿತಾ ಬೆಂಗಳೂರಿಗೆ ಬಂದಿದ್ದಳು. ಕೊಡತಿ ಪ್ರದೇಶದಲ್ಲಿ ಮನೆ ಬಾಡಿಗೆಗೆ ತೆಗೆದುಕೊಂಡು ಇಬ್ಬರೂ ಲಿವ್ ಇನ್ ಸಂಬಂಧದಲ್ಲಿ ವಾಸವಾಗಿದ್ದರು. ರಂಜಿತಾ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸ ಮಾಡುತ್ತಿದ್ದರೆ, ಅಯ್ಯಪ್ಪ ಡ್ರೈ ಫ್ರೂಟ್ಸ್ ಅಂಗಡಿಯಲ್ಲಿ ಸೂಪರ್‌ವೈಸರ್ ಆಗಿದ್ದ. ಆರಂಭದಲ್ಲಿ ಎಲ್ಲವೂ ಸರಾಗವಾಗಿದ್ದರೂ, ಕೆಲವೇ ವಾರಗಳಲ್ಲಿ ಅವರ ಸಂಬಂಧದಲ್ಲಿ ಬಿರುಕು ಮೂಡತೊಡಗಿತ್ತು. ಮದುವೆ ವಿಚಾರ, ಮೊದಲ ಪತ್ನಿಗೆ ವಿಚ್ಛೇದನ ನೀಡುವ ವಿಷಯ ಹಾಗೂ ಭವಿಷ್ಯದ ಬಗ್ಗೆ ನಡೆದ ಮಾತುಕತೆಗಳು ಜಗಳಕ್ಕೆ ಕಾರಣವಾಗುತ್ತಿದ್ದವು.

ಕಳೆದ ಒಂದು ವಾರದಿಂದ ಇವರಿಬ್ಬರ ನಡುವೆ ಜಗಳ ತೀವ್ರಗೊಂಡಿತ್ತು. ಅಯ್ಯಪ್ಪನ ವರ್ತನೆ ಕೂಡ ಬದಲಾಗಿದ್ದು, ಅವನು ರಂಜಿತಾಳ ಮೇಲೆ ದೌರ್ಜನ್ಯ ನಡೆಸುತ್ತಿದ್ದನೆಂಬ ಮಾಹಿತಿ ಹೊರಬಂದಿದೆ. ಮದುವೆಯಾಗುವುದಿಲ್ಲ ಎಂದು ಹೇಳಿ ಅವಳನ್ನು ಅವಮಾನಿಸುವುದು, ಬೈಯುವುದು ಮತ್ತು ಹೊಡೆಯುವುದು ದಿನನಿತ್ಯದ ಸಂಗತಿಯಾಗಿತ್ತು. ಈ ಬಗ್ಗೆ ರಂಜಿತಾ ತನ್ನ ಪೋಷಕರಿಗೂ ತಿಳಿಸಿದ್ದಳು. ಆದರೆ, ಆಕೆ ಭರವಸೆಯನ್ನೇ ಹಿಡಿದುಕೊಂಡು ಬದುಕಲು ಪ್ರಯತ್ನಿಸುತ್ತಿದ್ದಳು.

ಈ ನಡುವೆ ನಡೆದ ಒಂದು ರಾತ್ರಿ ಜಗಳವೇ ರಂಜಿತಾಳ ಜೀವಕ್ಕೆ ಅಂತ್ಯ ತಂದಿತು. ಮಧ್ಯರಾತ್ರಿ ವೇಳೆ ನಡೆದ ವಾಗ್ವಾದ ವಿಕೋಪಕ್ಕೆ ತಿರುಗಿದಾಗ, ಕೋಪದ ಹೊತ್ತಿನಲ್ಲಿ ಅಯ್ಯಪ್ಪ ವೈಯರ್ ತೆಗೆದುಕೊಂಡು ರಂಜಿತಾಳ ಕುತ್ತಿಗೆಗೆ ಸುತ್ತಿ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾನೆ. ಈ ಕೃತ್ಯವು ಪೂರ್ವನಿಯೋಜಿತವಾಗಿತ್ತೋ ಅಥವಾ ಆ ಕ್ಷಣದ ಆಕ್ರೋಶದಿಂದ ನಡೆದಿತ್ತೋ ಎಂಬುದು ತನಿಖೆಯ ವಿಷಯವಾಗಿದ್ದರೂ, ಅವನ ಕ್ರೂರತೆಯನ್ನು ಇದು ಸ್ಪಷ್ಟಪಡಿಸುತ್ತದೆ.

ಕೊಲೆ ಮಾಡಿದ ನಂತರ ತನ್ನ ಕೃತ್ಯವನ್ನು ಮರೆಮಾಚಲು ಅಯ್ಯಪ್ಪ ಕುತಂತ್ರ ರೂಪಿಸಿದ್ದಾನೆ. ರಂಜಿತಾ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ನಂಬಿಸಲು ಆಕೆಯನ್ನು ಫ್ಯಾನ್‌ಗೆ ನೇಣು ಬಿಗಿದಂತೆ ದೃಶ್ಯ ಸೃಷ್ಟಿಸಿದ್ದಾನೆ. ಬಳಿಕ ಮನೆ ಮಾಲೀಕರಿಗೆ ತಿಳಿಸಿ, ‘ಆಕೆ ಸೂಸೈಡ್ ಮಾಡಿಕೊಂಡಿದ್ದಾಳೆ’ ಎಂದು ನಾಟಕವಾಡಿ ಆಸ್ಪತ್ರೆಗೆ ಕರೆದೊಯ್ದಿದ್ದಾನೆ. ಅಲ್ಲದೇ ರಂಜಿತಾಳ ಪೋಷಕರಿಗೂ ಕರೆ ಮಾಡಿ ಇದೇ ಕಥೆಯನ್ನು ಹೇಳಿದ್ದಾನೆ.

ಆದರೆ, ವೈದ್ಯಕೀಯ ಪರೀಕ್ಷೆ ಮತ್ತು ಸ್ಥಳ ಪರಿಶೀಲನೆ ವೇಳೆ ಸತ್ಯ ಬಹಿರಂಗವಾಗಿದೆ. ರಂಜಿತಾಳ ಕುತ್ತಿಗೆಯ ಮೇಲೆ ಕಂಡುಬಂದ ಗುರುತುಗಳು ಇದು ಆತ್ಮಹತ್ಯೆಯಲ್ಲ, ಸ್ಪಷ್ಟವಾದ ಕೊಲೆ ಎಂಬುದನ್ನು ಸೂಚಿಸಿವೆ. ವರ್ತೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ತಕ್ಷಣ ತನಿಖೆ ಕೈಗೊಂಡರು. ಸ್ಥಳದಲ್ಲಿದ್ದ ಸಾಕ್ಷ್ಯಾಧಾರಗಳು ಹಾಗೂ ಅನುಮಾನಾಸ್ಪದ ವರ್ತನೆ ಆಧರಿಸಿ ಅಯ್ಯಪ್ಪನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು.

ತೀವ್ರ ವಿಚಾರಣೆ ವೇಳೆ ಅಯ್ಯಪ್ಪ ತನ್ನ ಕೃತ್ಯವನ್ನು ಒಪ್ಪಿಕೊಂಡಿದ್ದಾನೆ. ಮದುವೆ ವಿಚಾರಕ್ಕೆ ಸಂಬಂಧಿಸಿದ ಜಗಳವೇ ಈ ಕೊಲೆಗೆ ಕಾರಣ ಎಂದು ತಿಳಿದುಬಂದಿದೆ. ಮೊದಲ ಪತ್ನಿಗೆ ವಿಚ್ಛೇದನ ನೀಡದೇ ಇದ್ದರೂ, ರಂಜಿತಾ ಮದುವೆಗೆ ಒತ್ತಾಯಿಸುತ್ತಿದ್ದಳು. ಇದರಿಂದ ಬೇಸತ್ತ ಅಯ್ಯಪ್ಪ, ಆಕೆಯನ್ನು ಹತ್ಯೆ ಮಾಡಲು ಮುಂದಾಗಿದ್ದಾನೆ ಎಂಬ ಸಂಗತಿ ಬೆಳಕಿಗೆ ಬಂದಿದೆ.

ಸದ್ಯ ವರ್ತೂರು ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪೊಲೀಸರು ಪ್ರಕರಣದ ಎಲ್ಲಾ ಆಯಾಮಗಳನ್ನು ಪರಿಶೀಲಿಸುತ್ತಿದ್ದು, ಇನ್ನಷ್ಟು ವಿಚಾರಣೆ ಮುಂದುವರೆದಿದೆ.



ಆರೋಪಿ ಅಯ್ಯಪ್ಪ

ಈ ಘಟನೆ ಪ್ರೇಮದ ಹೆಸರಿನಲ್ಲಿ ನಡೆಯುವ ಮೋಸ ಮತ್ತು ನಂಬಿಕೆಯ ದುರುಪಯೋಗ ಎಷ್ಟು ಅಪಾಯಕಾರಿ ಆಗಬಹುದು ಎಂಬುದನ್ನು ತೋರಿಸುತ್ತದೆ. ಒಂದು ಯುವತಿಯ ಭವಿಷ್ಯ, ಕನಸುಗಳು ಮತ್ತು ಜೀವ ಚ್ಛ್ಯ ಒಂದೇ ಕ್ಷಣದಲ್ಲಿ ನಾಶವಾಗಿವೆ. ಪ್ರೀತಿ ಎಂಬ ಹೆಸರಿನಲ್ಲಿ ನೀಡುವ ಭರವಸೆಗಳು ಎಷ್ಟು ನಿಜವಾಗಿರುತ್ತವೆ ಎಂಬುದನ್ನು ಅರಿತುಕೊಳ್ಳುವ ಅಗತ್ಯವನ್ನು ಈ ಘಟನೆ ಮತ್ತೊಮ್ಮೆ ಒತ್ತಿಹೇಳುತ್ತದೆ.

ಒಟ್ಟಿನಲ್ಲಿ, ಈ ಪ್ರಕರಣವು ಸಮಾಜಕ್ಕೆ ಕಠಿಣ ಸಂದೇಶ ನೀಡುತ್ತದೆ ನಂಬಿಕೆ ಇಡುವಾಗ ಜಾಗ್ರತೆ ಅಗತ್ಯ, ಮತ್ತು ಕಾನೂನಿನ ಕಣ್ಣಿನಿಂದ ತಪ್ಪಿಸಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ಪ್ರೀತಿಯ ಹೆಸರಿನಲ್ಲಿ ನಡೆದ ಈ ದುರಂತ, ಮಾನವೀಯತೆ ಮತ್ತು ಜವಾಬ್ದಾರಿಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎಬ್ಬಿಸಿದೆ. ☯

---

10 ☜

ಇದಕ್ಕೆ ನಡುವೆ, ಹೋಟೆಲ್ ಆದಾಯ ಮತ್ತು ಖರ್ಚಿನ ನಡುವೆ ದೊಡ್ಡ ಅಂತರ ಕಂಡುಬಂದಿದ್ದು, ಹಣಕಾಸಿನ ಅವ್ಯವಸ್ಥೆಯೇ ಮೂಲ ಕಾರಣವಾಗಿರಬಹುದೆಂಬ ಶಂಕೆಯನ್ನೂ ಪೊಲೀಸರು ಪರಿಶೀಲಿಸುತ್ತಿದ್ದಾರೆ. ಇಮ್ರಾನ್ ತನ್ನ ಅನುಮಾನಗಳನ್ನು ರಿಂಕು ಮೇಲೆ ಕೇಂದ್ರೀಕರಿಸಿ, ಹಲವು ಬಾರಿ ಎಚ್ಚರಿಕೆ ನೀಡಿದ್ದಾನೆ ಎನ್ನಲಾಗಿದೆ. ಆದರೂ ರಿಂಕು ತನ್ನ ವರ್ತನೆ ಬದಲಿಸದೇ ಹತ್ತಿರದ ಹೋಟೆಲ್ ಸಂಪರ್ಕ ಮುಂದುವರಿಸಿದ್ದರಿಂದ, ಇಮ್ರಾನ್ ಕೋಪ ನಿಯಂತ್ರಣ ತಪ್ಪಿದ ಸ್ಥಿತಿಗೆ ತಲುಪಿದ್ದಾನೆ ಎಂಬ ಮಾಹಿತಿ ಲಭ್ಯವಾಗಿದೆ.


ಕೊಲೆಯಾದ ಹೋಟೆಲ್ ಮುಂದೆ ಪೊಲೀಸರು

ಘಟನೆಯ ದಿನ, ಇಮ್ರಾನ್ ತನ್ನ ಸಹಚರರನ್ನು ಕರೆಸಿ ರಿಂಕು ಮೇಲೆ ಕ್ರೂರ ದಾಳಿ ನಡೆಸಿದ ಎನ್ನಲಾಗಿದೆ. ಸ್ನೂಕರ್ ಸ್ಟಿಕ್, ಕಬ್ಬಿಣದ ರಾಡ್ ಮತ್ತು ಇತರ ವಸ್ತುಗಳಿಂದ ಹೊಡೆದು, ಕಣ್ಣಿಗೆ ಖಾರದ ಪುಡಿ ಎರಚಿ ಅಮಾನುಷವಾಗಿ ಹತ್ಯೆ ಮಾಡಲಾಗಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಈ ದಾಳಿ ಕೇವಲ ಕ್ಷಣಿಕ ಕೋಪದ ಪರಿಣಾಮವೇ, ಅಥವಾ ಪೂರ್ವ ನಿಯೋಜಿತವಾಗಿತ್ತೇ ಎಂಬುದೂ ತನಿಖೆಯ ಪ್ರಮುಖ ಅಂಶವಾಗಿದೆ.

ಒಟ್ಟಿನಲ್ಲಿ, ‘ರಿಂಕು’ ಹತ್ಯೆ ಪ್ರಕರಣವು ಈಗ ಎರಡು ದಿಕ್ಕಿನಲ್ಲಿ ಚರ್ಚೆಗೆ ಕಾರಣವಾಗಿದೆ ಒಂದು ಹಣಕಾಸಿನ ಗೊಂದಲ ಮತ್ತು ವೈಯಕ್ತಿಕ ವೈಷಮ್ಯ, ಇನ್ನೊಂದು ಮಾಟ ಮಂತ್ರದ ನಂಬಿಕೆ. ಆದರೆ ನಿಜಾಂಶವನ್ನು ಹೊರತರುವ ಜವಾಬ್ದಾರಿ ಸಾಗರ ಪೊಲೀಸರ ಮೇಲಿದೆ. ಗಾಳಿಸುದ್ದಿಗಳಿಗೆ ಮಣೆ ಹಾಕದೆ, ಸಾಕ್ಷ್ಯಾಧಾರಗಳ ಮೇಲೆ ಆಧಾರಿತ ತನಿಖೆ ನಡೆಯುತ್ತಿರುವುದರಿಂದ ಶೀಘ್ರದಲ್ಲೇ ಪ್ರಕರಣದ ಸತ್ಯ ಹೊರಬೀಳುವ ನಿರೀಕ್ಷೆಯಿದೆ. ☯

---

# ಕೈ ವಿರುದ್ಧ ತಿರುಗಿ ಬಿದ್ರಾ ಅಲ್ಪಸಂಖ್ಯಾತರು?

11 ☜

ವಿಧಾನಸಭಾ ಚುನಾವಣೆಗೆ ಕೇವಲ ಎರಡು ವರ್ಷವಷ್ಟೇ ಬಾಕಿ ಇರುವುದರಿಂದ ನಾಯಕತ್ವ ಬದಲಾವಣೆ ಸೇರಿದಂತೆ ಸಂಪುಟ ಪುನರ್‌ರಚನೆ ಮಾಡಿದರೆ ಅಸಮಾಧಾನ, ಆಕ್ರೋಶ, ಬಂಡಾಯಗಳು ಭುಗಿಲೇಳುವ ಸಾಧ್ಯತೆ ಇರುತ್ತದೆ. ಅದನ್ನು ತಣ್ಣಗೆ ಮಾಡಿ ಯಥಾಸ್ಥಿತಿಗೆ ತರುವ ಹೊತ್ತಿಗೆ ಚುನಾವಣೆ ಬರಲಿದ್ದು, ಅದಕ್ಕೂ ಸಿದ್ಧತೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

ಸಂಪುಟ ಪುನರ್‌ರಚನೆ ವಿಚಾರವಂತು ಹಿರಿಯ ಮತ್ತು ಕಿರಿಯ ಶಾಸಕರ ನಡುವಿನ ಕಿತ್ತಾಟಕ್ಕೆ ದಾರಿ ಮಾಡಿಕೊಟ್ಟರೂ ಅಚ್ಚರಿಯಿಲ್ಲ. ಈಗಾಗಲೇ ನೂತನವಾಗಿ ಆರಿಸಿ ಬಂದಿರುವ ಶಾಸಕರು ನಮಗೆ ಸಚಿವ ಸ್ಥಾನ ನೀಡಿ ಎಂದು ಹೈಕಮಾಂಡ್‌ಗೆ ಪತ್ರ ಬರೆದಿದ್ದ ವಿಚಾರಗಳು ಬಹಿರಂಗಗೊಂಡಿದ್ದವು. ಇದರ ನಡುವೆ ನಾವು ಹಿರಿಯರು ಪಕ್ಷಕ್ಕಾಗಿ ದುಡಿದುಕೊಂಡು ಬಂದಿದ್ದೇವೆ. ಹೀಗಾಗಿ ಇನ್ನುಳಿದ ಎರಡು ವರ್ಷದ ಅವಧಿ ಗಾದರೂ ನಮಗೆ ಅವಕಾಶ ಮಾಡಿಕೊಡಿ ಎಂದು ಹಿರಿಯ ಶಾಸಕರು ದುಂಬಾಲು ಬೀಳುತ್ತಿದ್ದಾರೆ. ಇಲ್ಲಿ ಅಧಿ ಕಾರ ಕೊಟ್ಟರೆ ಖುಷಿಪಡುತ್ತಾರೆ. ಕೊಡದೆ ಹೋದರೆ ತಿರುಗಿ ಬೀಳುತ್ತಾರೆ. ಹೀಗಾಗಿ ಏನೇ ಮಾಡಿದರೂ ಕಾಂಗ್ರೆಸ್‌ಗೆ ಸಂಕಷ್ಟ ತಪ್ಪಿದಲ್ಲ..

ಸದ್ಯ ರಾಜ್ಯ ನಾಯಕರು ಹೈಕಮಾಂಡ್ ಮೇಲೆ ಭಾರ ಹಾಕಿ ತೆಪ್ಪಗಾಗಿರುವಂತೆ ಗೋಚರಿಸುತ್ತದೆ. ರಾಜ್ಯ ಕಾಂಗ್ರೆಸ್ ಡಿಕೆಶಿ- ಸಿದ್ದರಾಮಯಯ ಹೀಗೆ ಎರಡು ಬಣಗಳಾಗಿ ಹೋಳಾಗಿದ್ದರೂ ಉಪಚುನಾವಣೆಯಲ್ಲಿ ನಾವೆಲ್ಲರೂ ಒಗ್ಗಟ್ಟಾಗಿದ್ದೇವೆ ಎಂಬುದನ್ನು ತೋರ್ಪಡಿಸಲು ಸರ್ವ ರೀತಿಯ ಪ್ರಯತ್ನಗಳನ್ನು ಮಾಡಿದ್ದಾರೆ. ಆದರೆ ಅಲ್ಪಸಂಖ್ಯಾತ ನಾಯಕರು ಸಿಡಿದೆದ್ದಿರುವುದು ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಮುಂದಿನ ವಿಧಾನಸಭಾ ಚುನಾವಣೆ ಹೊತ್ತಿಗೆ ಬಹುತೇಕ ಮುಸ್ಲಿಂ ನಾಯಕರು ಕಾಂಗ್ರೆಸ್ ನಿಂದ ದೂರವಾಗಿ ಪರ್ಯಾಯ ಪಕ್ಷದ ಕಡೆಗೆ ಒಲವು ತೋರಿದರೂ ಅಚ್ಚರಿ ಪಡಬೇಕಾಗಿಲ್ಲ. ಇದೆಲ್ಲ ಬೆಳವಣಿಗೆಯನ್ನು ಗಮನಿಸಿದರೆ ಕಾಂಗ್ರೆಸ್‌ಗೆ ಈಗಿನಿಂದಲೇ ಅಗ್ನಿಪರೀಕ್ಷೆ ಶುರುವಾಗಿದೆ ಎಂಬುದನ್ನು ತಳ್ಳಿಹಾಕುವಂತಿಲ್ಲ ಮುಂದಿನ ಬೆಳವಣಿಗೆಯನ್ನು ಕಾದು ನೋಡೋಣ. ☯

# ಮಾಜಿ ಶಾಸಕ ಅನ್ನದಾನಿ ವಿರುದ್ಧ ಅಕ್ರಮ ಸಂಬಂಧ ಆರೋಪ!
## ದಿಶಾ ಸಭೆಯಲ್ಲಿ ಗಂಡನ ಗೋಳಾಟ, ನ್ಯಾಯಕ್ಕಾಗಿ ಕುಮಾರಸ್ವಾಮಿ ಬಳಿ ಮೊರೆ

**ಮಂಡ್ಯ ಜಿಲ್ಲೆಯ ರಾಜಕೀಯ ವಲಯ ಹಾಗೂ ಸಾರ್ವಜನಿಕ ವಲಯದಲ್ಲಿ ದೊಡ್ಡ ಮಟ್ಟದ ಚರ್ಚೆಗೆ ಗ್ರಾಸವಾಗಿರುವ ಸಂಚಲನಕಾರಿ ಪ್ರಕರಣವೊಂದು ಬೆಳಕಿಗೆ ಬಂದಿದೆ. ಮಳವಳ್ಳಿ ಕ್ಷೇತ್ರದ ಜೆಡಿಎಸ್ ಮಾಜಿ ಶಾಸಕ ಡಾ. ಕೆ. ಅನ್ನದಾನಿ ವಿರುದ್ಧ ಅಕ್ರಮ ಸಂಬಂಧದ ಗಂಭೀರ ಆರೋಪ ಕೇಳಿಬಂದಿದ್ದು, ಈ ಆರೋಪವನ್ನು ವ್ಯಕ್ತಿಯೊಬ್ಬನು ಸಾರ್ವಜನಿಕವಾಗಿ ಹೊರಹಾಕಿ ನ್ಯಾಯಕ್ಕಾಗಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಬಳಿ ಮೊರೆ ಹೋಗಿರುವುದು ಪ್ರಕರಣಕ್ಕೆ ಇನ್ನಷ್ಟು ಗಂಭೀರತೆ ನೀಡಿದೆ. ಕುಟುಂಬ ಕಲಹದ ಮಟ್ಟವನ್ನು ಮೀರಿ ರಾಜಕೀಯ ವ್ಯಕ್ತಿಯ ಹೆಸರನ್ನು ಒಳಗೊಂಡಿರುವ ಈ ಪ್ರಕರಣ, ಈಗ ಪೊಲೀಸ್ ತನಿಖೆಗೆ ಅರ್ಹವಾಗುವಂತಹ ಅಂಶಗಳನ್ನೂ ಹೊಂದಿದೆ ಎಂಬ ಮಾತುಗಳು ಕೇಳಿಬರುತ್ತಿವೆ.**



ಈ ಘಟನೆ ಮಂಡ್ಯ ಜಿಲ್ಲಾ ಪಂಚಾಯತ್ ಕಚೇರಿಯಲ್ಲಿ ನಡೆದ 'ದಿಶಾ' ಸಭೆಯ ವೇಳೆ ನಡೆದಿದ್ದು, ಸಭೆಯಲ್ಲಿ ಭಾಗವಹಿಸಿದ್ದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಮುಂದೆ ಮಳವಳ್ಳಿ ಮೂಲದ ಪ್ರಸನ್ನಕುಮಾರ್ ಎಂಬ ವ್ಯಕ್ತಿ ತಾನು ಅನುಭವಿಸುತ್ತಿರುವ ಸಂಕಷ್ಟವನ್ನು ಕಣ್ಣೀರು ಹಾಕುತ್ತಾ ವಿವರಿಸಿದರು. ತನ್ನ ಪತ್ನಿಯೊಂದಿಗೆ ಮಾಜಿ ಶಾಸಕ ಅನ್ನದಾನಿ ಕಳೆದ ಸುಮಾರು ಹತ್ತು ವರ್ಷಗಳಿಂದ ಅಕ್ರಮ ಸಂಬಂಧ ಹೊಂದಿದ್ದಾರೆ ಎಂದು ಆರೋಪಿಸಿದ ಪ್ರಸನ್ನ, ಈ ಸಂಬಂಧದಿಂದ ತನ್ನ ಕುಟುಂಬ ಜೀವನ ಸಂಪೂರ್ಣವಾಗಿ ಹಾಳಾಗಿದೆ ಎಂದು ಹೇಳಿಕೊಂಡರು. ನ್ಯಾಯಕ್ಕಾಗಿ ಅವರು ಸಾರ್ವಜನಿಕವಾಗಿ ಕುಮಾರಸ್ವಾಮಿ ಅವರ ಕಾಲಿಗೆ ಬಿದ್ದು ಅಳಲು ತೋಡಿಕೊಂಡ ಘಟನೆ ಅಲ್ಲಿ ಇದ್ದ ಅಧಿಕಾರಿಗಳು ಹಾಗೂ ಜನರಲ್ಲಿ ಆಘಾತ ಮೂಡಿಸಿತು.

ಪ್ರಸನ್ನ ನೀಡಿದ ದೂರಿನ ಪ್ರಕಾರ, ತನ್ನ ಪತ್ನಿಗೆ ಅನ್ನದಾನಿ ಮೈಸೂರಿನಲ್ಲಿ ಸುಮಾರು 1.5 ಕೋಟಿ ರೂಪಾಯಿ ಮೌಲ್ಯದ ಐಷಾರಾಮಿ ಅಪಾರ್ಟ್‌ಮೆಂಟ್ ಒದಗಿಸಿದ್ದಾರೆ. ಈ ಅಪಾರ್ಟ್‌ಮೆಂಟ್‌ನೇ ಅವರಿಬ್ಬರ ಭೇಟಿ ಕೇಂದ್ರವಾಗಿದ್ದು, ಅನ್ನದಾನಿ ಅವರು ನಿಯಮಿತವಾಗಿ ಅಲ್ಲಿ ಹೋಗಿ ಬರುತ್ತಾರೆ ಎಂಬ ಆರೋಪ ಕೇಳಿಬಂದಿದೆ. ಇದಲ್ಲದೆ, ತನ್ನ ಪತ್ನಿಯೊಂದಿಗೆ ಮಾಜಿ ಶಾಸಕ ಗಂಟೆಗಟ್ಟಲೆ ದೂರವಾಣಿ ಮೂಲಕ ಮಾತನಾಡುತ್ತಾರೆ ಎಂಬುದಕ್ಕೂ ತನ್ನ ಬಳಿ ದಾಖಲೆಗಳಿವೆ ಎಂದು ಪ್ರಸನ್ನ ಹೇಳಿದ್ದಾರೆ. ಈ ಎಲ್ಲಾ ಆರೋಪಗಳು ಪ್ರಕರಣವನ್ನು ಕೇವಲ ಕುಟುಂಬ ಕಲಹದ ಮಟ್ಟದಿಂದ ಹೊರಗೆಳೆದು, ಪ್ರಭಾವಿ ವ್ಯಕ್ತಿಯ ಪಾತ್ರದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎಬ್ಬಿಸಿವೆ.

ಇನ್ನು ಪ್ರಸನ್ನ ಅವರು ಮತ್ತೊಂದು ಗಂಭೀರ ಆರೋಪ ಮಾಡಿದ್ದು, ಈ ವಿಷಯವನ್ನು ಪ್ರಶ್ನಿಸಿದ ಕಾರಣಕ್ಕೆ ತನ್ನ ಮೇಲೆ ಬೆದರಿಕೆ ಹಾಕಲಾಗಿದೆ ಎಂದು ಹೇಳಿದ್ದಾರೆ. ತನ್ನ ವಿರುದ್ಧ ಮಾನನಷ್ಟ ಮೊಕದ್ದಮೆಯನ್ನೂ ಹೂಡಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಇದರಿಂದಾಗಿ ಅವರು ಮಾನಸಿಕ ಒತ್ತಡಕ್ಕೆ ಒಳಗಾಗಿದ್ದು, ತನ್ನ ಜೀವಭದ್ರತೆ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ. 'ನನ್ನ ಹೆಂಡತಿ ಇನ್ನೊಬ್ಬನ ಜೊತೆ ಬದುಕುತ್ತಿರುವುದನ್ನು ನಾನು ಸಹಿಸಿಕೊಳ್ಳಲು ಸಾಧ್ಯವಿಲ್ಲ. ನನಗೆ ಆಕೆಯಿಂದ ಮುಕ್ತಿ ಬೇಕು. ನಾನು ವಿಚ್ಛೇದನ ಕೇಳಿದ್ದೇನೆ, ಆದರೆ ಆಕೆ 30 ಲಕ್ಷ ರೂಪಾಯಿ ಹಣ ನೀಡಿದರೆ ಮಾತ್ರ ಒಪ್ಪುತ್ತೇನೆ ಎಂದು ಹೇಳುತ್ತಿದ್ದಾಳೆ' ಎಂದು ಪ್ರಸನ್ನ ಅಳಲಿನಿಂದ ಹೇಳಿದ್ದಾರೆ.




ಈ ಪ್ರಕರಣದಲ್ಲಿ ವಿಚ್ಛೇದನ ವಿಚಾರವೂ ದೊಡ್ಡ ವಿವಾದವಾಗಿ ಪರಿಣಮಿಸಿದೆ. ಪತ್ನಿ ಹಣದ ಬೇಡಿಕೆ ಇಟ್ಟಿರುವ ಆರೋಪವೂ ಪ್ರಕರಣಕ್ಕೆ ಮತ್ತಷ್ಟು ಗಂಭೀರತೆ ತಂದಿದೆ. ಕುಟುಂಬ ಕಾನೂನು, ಮಹಿಳಾ ಹಕ್ಕುಗಳು ಹಾಗೂ ವೈಯಕ್ತಿಕ ಸ್ವಾತಂತ್ರ್ಯದ ವಿಚಾರಗಳು ಇಲ್ಲಿ ಮುಖಾಮುಖಿಯಾಗುತ್ತಿದ್ದು, ಈ ವಿಚಾರವನ್ನು ನ್ಯಾಯಾಂಗ ಅಥವಾ ಪೊಲೀಸ್ ತನಿಖೆ ಮೂಲಕವೇ ಸ್ಪಷ್ಟಪಡಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ನಡುವೆ, ಪತ್ನಿಯ ಪರವಾಗಿ ಯಾವುದೇ ಅಧಿ ಕೃತ ಪ್ರತಿಕ್ರಿಯೆ ಇನ್ನೂ ಹೊರಬಂದಿಲ್ಲ ಎಂಬುದು ಗಮನಾರ್ಹ.

ಘಟನೆಯ ಬಗ್ಗೆ ಪ್ರತಿಕ್ರಿಯೆ ನೀಡಿದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ದೂರುವನ್ನು ಸ್ವೀಕರಿಸಿ, 'ಸಭೆ ಮುಗಿದ ಬಳಿಕ ಈ ವಿಷಯದ ಬಗ್ಗೆ ಸಂಪೂರ್ಣ ಮಾಹಿತಿ ಪಡೆದು, ಯಾರಿಗೂ ಅನ್ಯಾಯವಾಗದಂತೆ ನ್ಯಾಯ ಒದಗಿಸುವ ಕ್ರಮ ಕೈಗೊಳ್ಳುತ್ತೇನೆ' ಎಂದು ಭರವಸೆ ನೀಡಿದ್ದಾರೆ. ಅವರ ಈ ಹೇಳಿಕೆ ಪ್ರಕರಣಕ್ಕೆ ರಾಜಕೀಯ ಮಹತ್ವವನ್ನು ಹೆಚ್ಚಿಸಿದ್ದು, ಮುಂದಿನ ದಿನಗಳಲ್ಲಿ ಈ ವಿಷಯ ರಾಜಕೀಯ ಚರ್ಚೆಯಾಗಿ ರೂಪಾಂತರಗೊಳ್ಳುವ ಸಾಧ್ಯತೆ ಇದೆ.



ಇನ್ನೊಂದೆಡೆ, ಮಾಜಿ ಶಾಸಕ ಅನ್ನದಾನಿ ಅವರ ವಿರುದ್ಧ ಕೇಳಿಬಂದಿರುವ ಆರೋಪಗಳು ಸಾಬೀತಾಗಬೇಕಾದವು. ಈಗಾಗಲೇ ಅವರು ದೂರುದಾರನ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿರುವುದಾಗಿ ತಿಳಿದುಬಂದಿದ್ದು, ತಮ್ಮ ಮೇಲೆ ಬಂದಿರುವ ಆರೋಪಗಳನ್ನು ತಳ್ಳಿ ಹಾಕುವ ಪ್ರಯತ್ನದಲ್ಲಿದ್ದಾರೆ ಎನ್ನಲಾಗಿದೆ.

ಕಾನೂನು ಪ್ರಕಾರ, ಯಾವುದೇ ಆರೋಪ ಸಾಬೀತಾಗುವ ತನಕ ಆರೋಪಿಯು ನಿರಪರಾಧಿ ಎಂಬ ತತ್ವ ಅನ್ವಯವಾಗುತ್ತದೆ. ಆದ್ದರಿಂದ ಈ ಪ್ರಕರಣದಲ್ಲಿ ಪೊಲೀಸ್ ತನಿಖೆ ಹಾಗೂ ನ್ಯಾಯಾಂಗ ಪ್ರಕ್ರಿಯೆ ಬಹುಮುಖ್ಯವಾಗಲಿದೆ.

ಪೊಲೀಸ್ ದೃಷ್ಟಿಯಿಂದ ಈ ಪ್ರಕರಣದಲ್ಲಿ ಹಲವು ಆಯಾಮಗಳಿವೆ. ಬೆದರಿಕೆ ಆರೋಪಗಳು ಸತ್ಯವಾಗಿದ್ದರೆ ಕ್ರಿಮಿನಲ್ ಪ್ರಕರಣ ದಾಖಲಾಗುವ ಸಾಧ್ಯತೆ ಇದೆ. ಆರ್ಥಿಕ ವ್ಯವಹಾರಗಳ ಬಗ್ಗೆ ಆರೋಪಗಳಿದ್ದರಿಂದ ಆಸ್ತಿ ಮೂಲಗಳ ಪರಿಶೀಲನೆಯೂ ನಡೆಯಬಹುದು. ದೂರವಾಣಿ ಸಂಭಾಷಣೆಗಳ ದಾಖಲೆಗಳ ಪರಿಶೀಲನೆ, ಸಂಬಂಧಿಸಿದ ವ್ಯಕ್ತಿಗಳ ವಿಚಾರಣೆ, ಹಾಗೂ ಅಪಾರ್ಟ್‌ಮೆಂಟ್ ಖರೀದಿ ವಿವರಗಳ ಪರಿಶೀಲನೆ ಮುಂತಾದ ಕ್ರಮಗಳು ತನಿಖೆಯ ಭಾಗವಾಗಬಹುದು. ಈ ಎಲ್ಲ ಅಂಶಗಳು ಪ್ರಕರಣವನ್ನು ಗಂಭೀರ ಪೊಲೀಸ್ ವಿಚಾರಣೆಯತ್ತ ಕೊಂಡೊಯ್ಯುವ ಸಾಧ್ಯತೆಯನ್ನು ಸೂಚಿಸುತ್ತಿವೆ.

ಸದ್ಯ ಮಂಡ್ಯ ಜಿಲ್ಲೆಯಲ್ಲಿ ಈ ಪ್ರಕರಣ ಭಾರೀ ಚರ್ಚೆಗೆ ಕಾರಣವಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಕೂಡ ಈ ವಿಷಯದ ಬಗ್ಗೆ ವಿವಿಧ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ರಾಜಕೀಯ ನಾಯಕನ ಹೆಸರು ಕೇಳಿಬಂದಿರುವುದರಿಂದ ಪಕ್ಷೀಯ ಮಟ್ಟದಲ್ಲಿಯೂ ಚರ್ಚೆಗಳು ನಡೆಯುತ್ತಿವೆ. ಸಾರ್ವಜನಿಕರು ಕೂಡ ಪ್ರಕರಣದ ನಿಜಾಸತ್ಯ ತಿಳಿಯಲು ಕಾಯುತ್ತಿದ್ದಾರೆ.

ಒಟ್ಟಿನಲ್ಲಿ, ಕುಟುಂಬ ಕಲಹದಿಂದ ಆರಂಭವಾದ ಈ ಪ್ರಕರಣ, ಇದೀಗ ರಾಜಕೀಯ ಮತ್ತು ಕಾನೂನು ಆಯಾಮಗಳನ್ನು ಪಡೆದುಕೊಂಡು ದೊಡ್ಡ ವಿವಾದವಾಗಿ ಪರಿಣಮಿಸಿದೆ. ಮುಂದಿನ ದಿನಗಳಲ್ಲಿ ಪೊಲೀಸ್ ತನಿಖೆ, ಕಾನೂನು ಪ್ರಕ್ರಿಯೆ ಹಾಗೂ ಸಂಬಂಧಿಸಿದವರ ಪ್ರತಿಕ್ರಿಯೆಗಳ ಆಧಾರದಲ್ಲಿ ಈ ಪ್ರಕರಣ ಯಾವ ದಿಕ್ಕಿಗೆ ಸಾಗುತ್ತದೆ ಎಂಬುದು ನಿರ್ಧಾರವಾಗಲಿದೆ. ನ್ಯಾಯದ ನಿರೀಕ್ಷೆಯಲ್ಲಿರುವ ದೂರುದಾರನ ಅಳಲುಗೆ ಪರಿಹಾರ ಸಿಗುತ್ತದೆಯೇ, ಅಥವಾ ಆರೋಪಗಳು ತಳ್ಳಿಹಾಕಲ್ಪಡುತ್ತವೆಯೇ ಎಂಬುದು ಮುಂದಿನ ಬೆಳವಣಿಗೆಗಳಲ್ಲಿ ಸ್ಪಷ್ಟವಾಗಬೇಕಿದೆ. ☯

### 'ಅಕ್ರಮ ಸಂಬಂಧ' ಆರೋಪ: 'ಸುಳ್ಳು, ರಾಜಕೀಯ ಪಿತೂರಿ': ಡಾ. ಕೆ. ಅನ್ನದಾನಿ ಪ್ರತಿಕ್ರಿಯೆ

ಮಂಡ್ಯ ಜಿಲ್ಲೆಯಲ್ಲಿ ಸಂಚಲನ ಮೂಡಿಸಿರುವ 'ಅಕ್ರಮ ಸಂಬಂಧ' ಆರೋಪಕ್ಕೆ ಸಂಬಂಧಿಸಿದಂತೆ ಮಳವಳ್ಳಿಯ ಜೆಡಿಎಸ್ ಮಾಜಿ ಶಾಸಕ ಡಾ. ಕೆ. ಅನ್ನದಾನಿ ತಮ್ಮ ಮೌನ ಮುರಿದು ಸ್ಪಷ್ಟನೆ ನೀಡಿದ್ದಾರೆ. ಪ್ರಸನ್ನ ಎಂಬ ವ್ಯಕ್ತಿ ಮಾಡಿದ ಆರೋಪಗಳನ್ನು ಸಂಪೂರ್ಣ ಸುಳ್ಳು ಎಂದು ತಳ್ಳಿ ಹಾಕಿದ ಅವರು, ತಮ್ಮ ರಾಜಕೀಯ ಬೆಳವಣಿಗೆಯನ್ನು ಸಹಿಸದವರ ಪಿತೂರಿಯಾಗಿದೆ ಎಂದು ಕಿಡಿಕಾರಿದ್ದಾರೆ. ಸಾರ್ವಜನಿಕ ಜೀವನದಲ್ಲಿರುವ ತಮ್ಮ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಉದ್ದೇಶದಿಂದ ಈ ರೀತಿಯ ಅಪಪ್ರಚಾರ ನಡೆಯುತ್ತಿದೆ ಎಂದು ಹೇಳಿದ್ದಾರೆ. ಈ ಕುರಿತು ವಿಡಿಯೋ ಹೇಳಿಕೆ ಬಿಡುಗಡೆ ಮಾಡಿದ ಅನ್ನದಾನಿ, ಪ್ರಸನ್ನ ಕಳೆದ ಕೆಲವು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ತಮ್ಮ ವಿರುದ್ಧ ಸುಳ್ಳು ಸುದ್ದಿ ಹಬ್ಬಿಸುತ್ತಿದ್ದಾನೆ ಎಂದು ಆರೋಪಿಸಿದ್ದಾರೆ. 'ಈತನ ಕಿರುಕುಳದ ಬಗ್ಗೆ ನಾನು ಈಗಾಗಲೇ ಹಲಗೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದೇನೆ. ಆತ ಮಾಡುತ್ತಿರುವ ಆರೋಪಗಳಿಗೆ ಯಾವುದೇ ಆಧಾರವಿಲ್ಲ' ಎಂದು ಅವರು ಸ್ಪಷ್ಟಪಡಿಸಿದ್ದಾರೆ.



ಇದಲ್ಲದೆ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ತಡೆಯಾಜ್ಞೆ (injunction order) ಕೂಡ ಪಡೆದುಕೊಂಡಿರುವುದಾಗಿ ತಿಳಿಸಿದ ಅವರು, ಕೋರ್ಟ್ ಆದೇಶವಿದ್ದರೂ ಸಹ ಪ್ರಸನ್ನ ಮತ್ತೆ ಮತ್ತೆ ಅಪಪ್ರಚಾರ ಮುಂದುವರಿಸುತ್ತಿದ್ದಾನೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇದೊಂದು ರಾಜಕೀಯ ಷಡ್ಯಂತ್ರವಾಗಿದ್ದು, ತಮ್ಮ ವಿರುದ್ಧ ಕಾನೂನು ಹೋರಾಟವನ್ನು ಮುಂದುವರಿಸುವುದಾಗಿ ಅನ್ನದಾನಿ ಎಚ್ಚರಿಸಿದ್ದಾರೆ. ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 12.4.2026

# ಮೆಲೋಡಿ ಕ್ವೀನ್ ಆಶಾ ಭೋಸ್ಲೆ ಇನ್ನಿಲ್ಲ; ಭಾರತೀಯ ಸಂಗೀತ ಲೋಕಕ್ಕೆ ಭಾರೀ ನಷ್ಟ



ಭಾರತೀಯ ಸಂಗೀತ ಲೋಕದ ಇತಿಹಾಸದಲ್ಲಿ ಅಚ್ಚಳಿಯದ ಗುರುತು ಬರೆದ ಮೆಲೋಡಿ ಕ್ವೀನ್ ಆಶಾ ಭೋಸ್ಲೆ ಅವರ ಅಗಲಿಕೆ ದೇಶದ ಕಲಾ ಜಗತ್ತಿಗೆ ತುಂಬಲಾರದ ನಷ್ಟವಾಗಿ ಪರಿಣಮಿಸಿದೆ. 92 ವರ್ಷಗಳ ಸಮೃದ್ಧ ಜೀವನಯಾನವನ್ನು ಪೂರ್ಣಗೊಳಿಸಿದ ಅವರು, ತಮ್ಮ ಅನನ್ಯ ಧ್ವನಿ ಮತ್ತು ಅಪಾರ ಸಂಗೀತ ಪ್ರತಿಭೆಯಿಂದ ಅನೇಕ ಪೀಳಿಗೆಗಳ ಮನ ಗೆದ್ದ ಅಪರೂಪದ ಕಲಾವಿದೆಯಾಗಿದ್ದರು. ಉಸಿರಾಟದ ತೊಂದರೆ ಹಾಗೂ ಹೃದಯ ಸಂಬಂಧಿ ಸಮಸ್ಯೆಯಿಂದ ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು, ಕೊನೆಗೂ ಚಿಕಿತ್ಸೆಗೆ ಸ್ಪಂದಿಸದೆ ಭಾನುವಾರ ಕೊನೆಯುಸಿರೆಳೆದರು. ಕಳೆದ ಕೆಲವು ತಿಂಗಳುಗಳಿಂದ ಅವರ ಆರೋಗ್ಯದಲ್ಲಿ ಏರುಪೇರು ಕಾಣಿಸಿಕೊಂಡಿದ್ದು, ಶನಿವಾರ ರಾತ್ರಿ ಆಸ್ಪತ್ರೆಗೆ ದಾಖಲಿಸಿದಾಗಲೇ ಸ್ಥಿತಿ ಗಂಭೀರವಾಗಿತ್ತು ಎಂದು ವೈದ್ಯರು ತಿಳಿಸಿದ್ದಾರೆ. ಐಸಿಯುನಲ್ಲಿ ತೀವ್ರ ನಿಗಾದಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದರೂ, ಅವರ ಆರೋಗ್ಯದಲ್ಲಿ ಯಾವುದೇ ಸುಧಾರಣೆ ಕಾಣಿಸದೆ, ಅಂತಿಮವಾಗಿ ಅವರು ನಿಧನರಾಗಿದ್ದು, ಈ ಸುದ್ದಿ ದೇಶದಾದ್ಯಂತ ಅಪಾರ ದುಃಖವನ್ನುಂಟುಮಾಡಿದೆ.

1933ರ ಸೆಪ್ಟೆಂಬರ್ 8ರಂದು ಮಹಾರಾಷ್ಟ್ರದ ಸಾಂಗ್ಲಿಯಲ್ಲಿ ಜನಿಸಿದ ಆಶಾ ಭೋಸ್ಲೆ, ಸಂಗೀತ ಪರಂಪರೆಯ ಕುಟುಂಬದಲ್ಲಿ ಹುಟ್ಟಿ ಬೆಳೆದವರು. ಪಂಡಿತ್ ದೀನನಾಥ್ ಮಂಗೇಶ್ಕರ್ ಅವರ ಪುತ್ರಿಯಾಗಿದ್ದ ಅವರು, ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡು ಕುಟುಂಬದ ಹೊಣೆ ಹೊತ್ತರು. ಅವರ ಸಹೋದರಿ ಲತಾ ಮಂಗೇಶ್ಕರ್ ಈಗಾಗಲೇ ಗಾಯನ ಕ್ಷೇತ್ರದಲ್ಲಿ ಹೆಸರಾಗುತ್ತಿದ್ದ ಸಂದರ್ಭದಲ್ಲೇ ಆಶಾ ಕೂಡ ತಮ್ಮದೇ ಆದ ಗುರುತನ್ನು ನಿರ್ಮಿಸಿಕೊಳ್ಳಲು ಶ್ರಮಿಸಿದರು. ಕೇವಲ ಒಂಬತ್ತನೇ ವಯಸ್ಸಿನಲ್ಲೇ ಬದುಕಿನ ಕಠಿಣ ಸತ್ಯಗಳನ್ನು ಎದುರಿಸಿದ ಆಶಾ, ಸಂಕಷ್ಟಗಳನ್ನು ಮೆಟ್ಟಿನಿಂತು ಸಂಗೀತದ ಮೂಲಕವೇ ತಮ್ಮ ಬದುಕನ್ನು ಕಟ್ಟಿಕೊಂಡರು. 1948ರಲ್ಲಿ 'ಚುನ್ರಿಯಾ' ಚಿತ್ರದ ಮೂಲಕ ಹಿಂದಿ ಚಿತ್ರರಂಗಕ್ಕೆ ಕಾಲಿಟ್ಟ ಅವರು, 1949ರಲ್ಲಿ 'ರಾತ್ ಕಿ ರಾಣಿ' ಚಿತ್ರದ ಮೂಲಕ ತಮ್ಮ ಮೊದಲ ಸೋಲೋ ಗೀತೆಯನ್ನು ಹಾಡಿದರು. ಆ ಆರಂಭವು ಮುಂದಿನ ಹ'ಲವು ದಶಕಗಳವರೆಗೆ ವಿಸ್ತರಿಸಿ, ಅವರನ್ನು ಭಾರತದ ಅತ್ಯಂತ ಯಶಸ್ವಿ ಹಿನ್ನೆಲೆ ಗಾಯಕಿಯರಲ್ಲಿ ಒಬ್ಬರನ್ನಾಗಿ ರೂಪಿಸಿತು.

50, 60 ಮತ್ತು 70ರ ದಶಕಗಳಲ್ಲಿ ಬಾಲಿವುಡ್ ಸಂಗೀತದ ಸುವರ್ಣ ಯುಗವನ್ನು ಆಳಿದ ಗಾಯಕರ ಪೈಕಿ ಆಶಾ ಭೋಸ್ಲೆ ಪ್ರಮುಖರಾಗಿದ್ದರು. ಅವರ ಧ್ವನಿಯಲ್ಲಿದ್ದ ಸೊಪ್ರಾನೊ ಸೌಂದರ್ಯ, ಹಾಡಿನ ಭಾವನೆಗಳನ್ನು ಜೀವಂತಗೊಳಿಸುವ ಶಕ್ತಿ ಮತ್ತು ಲ್ಲಿ ಹಾಡುವ ಸಾಮರ್ಥ್ಯವು ಅವರನ್ನು ಇತರರಿಂದ ವಿಭಿನ್ನರನ್ನಾಗಿಸಿತು. ಸಿನಿಮಾ ಸಂಗೀತ, ಪಾಪ್, ಶಾಸ್ತ್ರೀಯ, ಗಜಲ್, ಭಜನೆ, ಕವ್ವಾಲಿ, ಜಾನಪದ ಹೀಗೆ ಎಲ್ಲ ರೀತಿಯ ಸಂಗೀತ ಪ್ರಕಾರಗಳಲ್ಲಿ ಅವರು ಪಾಂಡಿತ್ಯ ಸಾಧಿಸಿದರು. ಸುಮಾರು 20ಕ್ಕೂ ಹೆಚ್ಚು ಭಾಷೆಗಳಲ್ಲಿ 12 ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿರುವುದು ಅವರ ಸಾಧನೆಯ ವ್ಯಾಪ್ತಿಯನ್ನು ತೋರಿಸುತ್ತದೆ. ಪ್ರತಿಯೊಂದು ಹಾಡಿನಲ್ಲೂ ಭಾವನಾತ್ಮಕ ತೀವ್ರತೆ ಮತ್ತು ತಾಂತ್ರಿಕ ಪಟುತ್ವವನ್ನು ಒಟ್ಟುಗೂಡಿಸಿ, ಅವರು ಶ್ರೋತೃಗಳ ಹೃದಯದಲ್ಲಿ ಶಾಶ್ವತ ಸ್ಥಾನವನ್ನು ಗಳಿಸಿದರು.



ಅವರ ಸಂಗೀತಯಾನದಲ್ಲಿ ಅನೇಕ ಪ್ರಶಸ್ತಿಗಳು ಮತ್ತು ಗೌರವಗಳು ಅವರನ್ನು ಅಲಂಕರಿಸಿವೆ. ಭಾರತೀಯ ಸಿನೆಮಾದ ಅತ್ಯುನ್ನತ ಗೌರವವಾದ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಅವರಿಗೆ ಲಭಿಸಿದ್ದು, ದೇಶದ ಎರಡನೇ ಅತಿ ದೊಡ್ಡ ನಾಗರಿಕ ಪ್ರಶಸ್ತಿ ಪದ್ಮ ವಿಭೂಷಣ ಕೂಡ ಅವರಿಗೆ ದೊರಕಿದೆ. 'ಉಮ್ರಾವ್ ಜಾನ್' ಚಿತ್ರದ 'ದಿಲ್ ಚೀಜ್ ಕ್ಯಾ ಹೈ' ಮತ್ತು 'ಇಜಾಜತ್' ಚಿತ್ರದ 'ಮೇರಾ ಕುಚ್ ಸಮಾನ್' ಹಾಡುಗಳಿಗೆ ಅವರು ರಾಷ್ಟ್ರಪ್ರಶಸ್ತಿಯನ್ನು ಗಳಿಸಿದ್ದು, ಅವರ ಗಾಯನ ಸಾಮರ್ಥ್ಯದ ಶಿಖರವನ್ನು ತೋರಿಸುತ್ತದೆ. ಈ ಹಾಡುಗಳು ಇಂದಿಗೂ ಸಂಗೀತ ಪ್ರಿಯರ ಮನಗಳಲ್ಲಿ ವಿಶೇಷ ಸ್ಥಾನವನ್ನು ಪಡೆದಿವೆ.

ಆಶಾ ಭೋಸ್ಲೆ ಅವರ ಅಂತ್ಯಕ್ರಿಯೆ ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ಸರ್ಕಾರಿ ಗೌರವದೊಂದಿಗೆ ನೆರವೇರಿತು. ಸಾವಿರಾರು ಅಭಿಮಾನಿಗಳು ಅಂತಿಮ ದರ್ಶನ ಪಡೆದು, ತಮ್ಮ ನೆಚ್ಚಿನ ಗಾಯಕಿಗೆ ಕಣ್ಣೀರಿನ ವಿದಾಯ ಹೇಳಿದರು. ಚಿತ್ರರಂಗ, ರಾಜಕೀಯ ಮತ್ತು ಕ್ರೀಡಾ ಕ್ಷೇತ್ರದ ಅನೇಕ ಗಣ್ಯರು ಅಂತ್ಯಕ್ರಿಯೆಯಲ್ಲಿ ಭಾಗವಹಿಸಿ, ಅವರ ಸಾಧನೆಗಳನ್ನು ಸ್ಮರಿಸಿದರು. ರಣವೀರ್ ಸಿಂಗ್, ಸಚಿನ್ ತೆಂಡೂಲ್ಕರ್, ಎ.ಆರ್. ರೆಹಮಾನ್, ಟಬು, ಜಾಕಿ ಶ್ರಾಫ್ ಸೇರಿದಂತೆ ಅನೇಕರು ಹಾಜರಾಗಿ ಅಂತಿಮ ನಮನ ಸಲ್ಲಿಸಿದರು. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವಾರು ರಾಜಕೀಯ ನಾಯಕರು ಮತ್ತು ಸಿನೆಮಾ ತಾರೆಗಳು ಸಾಮಾಜಿಕ ಜಾಲತಾಣಗಳ ಮೂಲಕ ತಮ್ಮ ಸಂತಾಪವನ್ನು ವ್ಯಕ್ತಪಡಿಸಿದರು.

ಸುಮಾರು 80 ವರ್ಷಗಳ ಕಾಲ ನಿರಂತರವಾಗಿ ಸಂಗೀತ ಸೇವೆ ಸಲ್ಲಿಸಿದ ಆಶಾ ಭೋಸ್ಲೆ, ಕೇವಲ ಗಾಯಕಿಯಾಗಿಯೇ ಅಲ್ಲ, ಭಾರತೀಯ ಸಂಗೀತದ ಚಿಹ್ನೆಯಾಗಿದ್ದರು. ತಮ್ಮ ವೈಯಕ್ತಿಕ ಜೀವನದಲ್ಲಿ ಅನೇಕ ಏಳುಬೀಳುಗಳನ್ನು ಎದುರಿಸಿದರೂ, ಸಂಗೀತದ ಮೇಲೆ ಇರುವ ಪ್ರೀತಿ ಮತ್ತು ನಿಷ್ಠೆಯನ್ನು ಎಂದಿಗೂ ಕಳೆದುಕೊಳ್ಳಲಿಲ್ಲ. ಅವರ ಧ್ವನಿ ಕಾಲಾತೀತವಾಗಿದೆ; ಅವರ ಹಾಡುಗಳು ಮುಂದಿನ ಅನೇಕ ಪೀಳಿಗೆಗಳಿಗೂ ಪ್ರೇರಣೆಯಾಗುತ್ತವೆ. ಇಂತಹ ಮಹಾನ್ ಕಲಾವಿದೆಯ ಅಗಲಿಕೆ ಭಾರತೀಯ ಸಂಗೀತ ಲೋಕಕ್ಕೆ ಭರಿಸಲಾಗದ ನಷ್ಟವಾದರೂ, ಅವರು ಹಾಡಿದ ಸಾವಿರಾರು ಅಮರ ಗೀತೆಗಳು ಸದಾ ಅವರ ನೆನಪನ್ನು ಜೀವಂತವಾಗಿ ರಿಸುತ್ತವೆ. ☯

# ಮತ್ತೆ ಸಿನಿಮಾ ನಿರ್ಮಾಣಕ್ಕಿಳಿದ ಶಿಲ್ಪಾ ಗಣೇಶ್!



ನಿರ್ಮಾಪಕಿಯರ ಸಂಖ್ಯೆ ಕಡಿಮೆ ಇರುವ ಸ್ಯಾಂಡಲ್‌ವುಡ್‌ನಲ್ಲಿ, ಹಿಂದೆ ಪಾರ್ವತಮ್ಮ ರಾಜ್‌ಕುಮಾರ್ ಅವರಂತಹ ಸಾಧಕಿಯರು ಮಾತ್ರ ದೊಡ್ಡ ಮಟ್ಟದಲ್ಲಿ ಹೆಸರು ಮಾಡಿದ್ದರು. ಇತ್ತೀಚಿನ ವರ್ಷಗಳಲ್ಲಿ ನಟರ ಕುಟುಂಬಗಳಿಂದ ಮಹಿಳೆಯರು ನಿರ್ಮಾಣಕ್ಕೆ ಹೆಚ್ಚು ಮುಂದೆ ಬರದೇ ಇದ್ದ ಪರಿಸ್ಥಿತಿಯಲ್ಲಿ, ಶಿಲ್ಪಾ ಗಣೇಶ್ ಮತ್ತೆ ಆ ಕ್ಷೇತ್ರದಲ್ಲಿ ಸಕ್ರಿಯರಾಗಿರುವುದು ಗಮನಾರ್ಹ ಬೆಳವಣಿಗೆ.

ಈ ಬಾರಿ ಅವರು 'ಪಿಕ್ಚರ್' ಎಂಬ ಸಿನಿಮಾವನ್ನು ತಮ್ಮ ಬ್ಯಾನರ್ ಅಡಿಯಲ್ಲಿ ನಿರ್ಮಿಸಿದ್ದು, ಇದು ತುಳು ಹಾಗೂ ಕನ್ನಡ ಎರಡೂ ಭಾಷೆಗಳಲ್ಲಿ ಬಿಡುಗಡೆಯಾಗಲಿರುವುದು ವಿಶೇಷ. ತುಳು ಕಲಾವಿದರನ್ನೇ ಹೆಚ್ಚು ಒಳಗೊಂಡಿರುವ ಈ ಚಿತ್ರ ಈಗಾಗಲೇ ಸಿನಿಪ್ರಿಯರ ಗಮನ ಸೆಳೆಯುತ್ತಿದೆ. ಚಿತ್ರದ 'ತಕ ತಕ ಕುಣಿಸಕ' ಹಾಡಿಗೆ ಚೇತನ್ ಕುಮಾರ್ ಸಾಹಿತ್ಯ ಬರೆದಿದ್ದು, ಸ್ಯಾಮ್ಯುಯೆಲ್ ಅಬಿ ಸಂಗೀತ ನೀಡಿದ್ದಾರೆ. ಲಿರಿಕಲ್ ಹಾಡು ಬಿಡುಗಡೆಯಾಗಿದ್ದರೂ ಅದ್ದೂರಿ ಮೇಕಿಂಗ್ ಮೂಲಕ ಚಿತ್ರದ ಮೇಲೆ ನಿರೀಕ್ಷೆ ಹೆಚ್ಚಿಸಿದೆ.

ಸಿನಿಮಾ ನಿರ್ಮಾಣ ಒಂದು ಸವಾಲಿನ ಕೆಲಸವಾಗಿದ್ದರೂ, ಶಿಲ್ಪಾ ಗಣೇಶ್ ಅವರ ಮರಳಿಕೆಯಿಂದ ಮಹಿಳಾ ನಿರ್ಮಾಪಕಿಯರಿಗೆ ಹೊಸ ಸ್ಫೂರ್ತಿ ಸಿಗುವ ಸಾಧ್ಯತೆ ಇದೆ. ಈಗಾಗಲೇ ಅಶ್ವಿನಿ ಪುನೀತ್ ರಾಜ್‌ಕುಮಾರ್ ಮತ್ತು ಗೀತಾ ಶಿವರಾಜ್‌ಕುಮಾರ್ ನಿರ್ಮಾಣದಲ್ಲಿ ತೊಡಗಿಸಿಕೊಂಡಿರುವ ಸಂದರ್ಭದಲ್ಲಿ, ಇನ್ನಷ್ಟು ಮಹಿಳೆಯರು ಈ ಕ್ಷೇತ್ರಕ್ಕೆ ಬರುತ್ತಾರೆ ಎಂಬ ನಿರೀಕ್ಷೆ ಹೆಚ್ಚಾಗಿದೆ. ಇದರೊಂದಿಗೆ ಕನ್ನಡ ಚಿತ್ರರಂಗದಲ್ಲಿ ಮಹಿಳಾ ನಿರ್ಮಾಪಕಿಯರ ಪ್ರಭಾವವೂ ನಿಧಾನವಾಗಿ ವಿಸ್ತರಿಸಬಹುದು. ☯

# 'ಜನ ನಾಯಗನ್' ಲೀಕ್ ವಿವಾದ; ವಿಜಯ್ ಮೇಲೆ ಆರೋಪಗಳ ಸದ್ದು

'ಜನ ನಾಯಗನ್' ಸಿನಿಮಾ ಬಿಡುಗಡೆಗೂ ಮುನ್ನವೇ ಲೀಕ್ ಆಗಿರುವುದು ದೊಡ್ಡ ಚರ್ಚೆಗೆ ಕಾರಣವಾಗಿದೆ. ಚಿತ್ರ ಇನ್ನೂ ಅಧಿಕೃತವಾಗಿ ಪ್ರದರ್ಶನವಾಗದೇ ಇರುವಾಗಲೇ ಕೆಲವು ಕ್ಲಿಪ್‌ಗಳು ಹೊರಬಂದಿರುವುದು ಸಿನಿ ವಲಯವನ್ನು ಕಂಗೊಳಿಸಿದೆ. ಲೀಕ್ ಹಿಂದೆ ಯಾರು ಎಂಬ ಪ್ರಶ್ನೆ ಕೇಳಲಾಗುತ್ತಿದ್ದು, ಕೆಲವರು ನೇರವಾಗಿ ವಿಜಯ್ ಅವರ ಮೇಲೆಯೇ ಅನುಮಾನ ವ್ಯಕ್ತಪಡಿಸಿದ್ದಾರೆ. ಇದಕ್ಕೆ ಅಭಿಮಾನಿಗಳು ತೀವ್ರ ಪ್ರತಿಕ್ರಿಯೆ ನೀಡುತ್ತಿದ್ದು, ಆರೋಪಗಳನ್ನು ಖಂಡಿಸುತ್ತಿದ್ದಾರೆ. ಕೆಲವರ ಅಭಿಪ್ರಾಯದ ಪ್ರಕಾರ, ಲೀಕ್ ಮೂಲಕ ಸಹಾನುಭೂತಿ ಪಡೆಯುವ ಯತ್ನ ಇದಾಗಿರಬಹುದು ಎಂಬ ಮಾತುಗಳು ಕೇಳಿಬರುತ್ತಿವೆ. ಆದರೆ ಸಾಮಾನ್ಯವಾಗಿ ಯಾವುದೇ ನಟನು ತನ್ನದೇ ಸಿನಿಮಾ ಲೀಕ್ ಆಗಲು ಬಯಸುವುದಿಲ್ಲ ಎಂಬುದು ಸ್ಪಷ್ಟ. ಹೀಗಾಗಿ ಈ ಆರೋಪಗಳಿಗೆ ಯಾವುದೇ ಸ್ಪಷ್ಟ ಸಾಕ್ಷ್ಯ ಇಲ್ಲದೆ ಹಬ್ಬುತ್ತಿರುವ ವದಂತಿಗಳೇ ಹೆಚ್ಚಾಗಿದೆ. ಚಿತ್ರ ಇನ್ನೂ ಬಿಡುಗಡೆಯಾಗದ ಹಿನ್ನೆಲೆ, ತಂಡದ ಒಳಗಿನವರ ಕೈವಾಡ ಇರಬಹುದೆಂಬ ಶಂಕೆಯೂ ವ್ಯಕ್ತವಾಗುತ್ತಿದೆ.



ಈ ಪ್ರಕರಣದ ಗಂಭೀರತೆಯನ್ನು ಮನಗಂಡು ನಿರ್ಮಾಣ ಸಂಸ್ಥೆ ಕೆವಿಎನ್ ತನಿಖೆಗೆ ಆದೇಶಿಸಿದೆ. ವರದಿ ಹೊರಬಂದ ಬಳಿಕವೇ ನಿಜಾಂಶ ಬಹಿರಂಗವಾಗಲಿದೆ. ಇತ್ತ ವಿಜಯ್ ಈ ವಿವಾದದ ಬಗ್ಗೆ ಮೌನ ವಹಿಸಿದ್ದು, ಪ್ರಸ್ತುತ ಚುನಾವಣಾ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದಾರೆ ಎನ್ನಲಾಗಿದೆ. ಅದೇ ಸಮಯದಲ್ಲಿ, ಕೆಲವು ಪೈರಸಿ ಸೈಟ್‌ಗಳು ಸಿನಿಮಾ ಬಿಡುಗಡೆ ಬಳಿಕವೂ ಪೈರಸಿ ಕಾಪಿಗಳನ್ನು ಹಂಚಿಕೊಳ್ಳುವುದಿಲ್ಲ ಎಂದು ಹೇಳಿರುವುದು ಅಚ್ಚರಿಯ ಸಂಗತಿಯಾಗಿ ಪರಿಣಮಿಸಿದೆ. ☯

Vol. 41 No. 45 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
policenewsreporter@gmail.com http//policenews.news Police News police_news